# ಯುವಮಿತ್ರ

ಶಿವಮೊಗ್ಗ ಧರ್ಮಕ್ಷೇತ್ರದ ಯುವಜನ ಆಯೋಗ




# ಪ್ರಜ್ವಲಿಸಿದ ಅನುಭವ

ಯುವಜನರ ಕ್ರಿಸ್ತಾನುಭವದ ಸಾರ...

# ಪ್ರಜ್ವಲಿಸಿದ ಯುವ ಸಮೂಹ



‘ಪ್ರಜ್ವಲಿಸು’

ಯುವಜನರ ಮನೋ–ಆಧ್ಯಾತ್ಮಿಕ ನವೀಕರಣ ಧ್ಯಾನಕೂಟದಲ್ಲಿ

# ಪ್ರಜ್ವಲಿಸಿದ ಅನುಭವ

ಪ್ರಜ್ವಲಿತರಾದವರ

ಮನದಾಳದ ತುಡಿತ–ಮಿಡಿತಗಳ

ಕ್ರೀಸ್ತಾನುಭವದ ಸಾರ

---

‘ಯುವಮಿತ್ರ’ –ಯುವಜನ ಆಯೋಗ, ಶಿವಮೊಗ್ಗ ಧರ್ಮಕ್ಷೇತ್ರ
ಪವಿತ್ರ ಹೃದಯ ಪ್ರಧಾನಾಲಯ ಆವರಣ
ಬಿ.ಹೆಚ್ ರಸ್ತೆ, ಶಿವಮೊಗ್ಗ 577 201

**ಪ್ರಜ್ವಲಿಸಿದ ಅನುಭವ**

ಪ್ರಥಮ ಮುದ್ರಣ: ಡಿಸೆಂಬರ್ 2019

ಪ್ರಕಾಶಕರು: ಯುವಮಿತ್ರ
ಪವಿತ್ರ ಹೃದಯ ಪ್ರಧಾನಾಲಯ ಆವರಣ
ಬಿ.ಹೆಚ್ ರಸ್ತೆ, ಶಿವಮೊಗ್ಗ 577 201

ಒಟ್ಟು ಪುಟಗಳ ಸಂಖ್ಯೆ : 60 + ಕವರ್

ಮುದ್ರಣ: ಸಂದೇಶ್ ಪ್ರಿಂಟರ್ಸ್
ಕಿನ್ನಿಗೋಳಿ

ಕೃತಿಯ ಕೊಡುಗೆ:
ಶ್ರೀ ರೋಶನ್ ಡಿ'ಸೋಜ ಮತ್ತು ಕುಟುಂಬ
ಸಂದೇಶ್ ಪ್ರಿಂಟರ್ಸ್, ಕಿನ್ನಿಗೋಳಿ

**ಖಾಸಗಿ ಉಪಯೋಗಕ್ಕಾಗಿ ಮಾತ್ರ**

# ಧನ್ಯನುಡಿ

**ಪ್ರ**ಜ್ವಲಿಸು ನಿಜವಾಗಿಯೂ ಪ್ರಜ್ವಲಿಸಲು ದುಡಿದ ಕೈಗಳು ಹಲವು. ಈ ಯೋಜನೆ ರೂಪಿಸಿದ ದಿನದಿಂದ ಪ್ರೋತ್ಸಾಹ ಹಾಗೂ ಮಾರ್ಗದರ್ಶನ ನೀಡಿದ ಪರಮಪೂಜ್ಯ ಡಾ। ಫ್ರಾನ್ಸಿಸ್ ಸೆರಾವೊ ಧರ್ಮಾಧ್ಯಕ್ಷರು, ಶಿವಮೊಗ್ಗ ಧರ್ಮಕ್ಷೇತ್ರ ಇವರಿಗೆ ಯುವಮಿತ್ರ ಪರವಾಗಿ ವಂದನೆಗಳು.

ವಿಭಿನ್ನವಾದ ಯುವಜನ ಕಾರ್ಯಕ್ರಮಕ್ಕೆ ಎಲ್ಲಾ ರೀತಿಯ ವ್ಯವಸ್ಥೆಯನ್ನು ಮಾಡಿದ ವಂ। ಡಾ। ಅಂತೋನಿ ಪೀಟರ್ ಹಾಗೂ ವಂ। ಅಭಿಷೇಕ್‌ರವರಿಗೂ ಹೃದಯ ತುಂಬಿದ ಕೃತಜ್ಞತೆಗಳು.

ಯುವಮಿತ್ರರ ಪೋಷಕ ಬಳಗದವರು ಯುವಮಿತ್ರ ಯುವಜನ ಆಯೋಗದ ಮೇಲೆ ಇಟ್ಟಿರುವ ಅಭಿಮಾನಕ್ಕೆ ಅಭಿನಂದನೆಗಳು ಹಾಗೂ ಯುವಮಿತ್ರ ಕಾರ್ಯಕ್ರಮಗಳಿಗೆ ಆರ್ಥಿಕವಾಗಿ ನೆರವು ನೀಡಿದ ಉದಾರ ಮನಸ್ಸಿನ ಯುವಸ್ನೇಹಿ ದಾನಿಗಳಿಗೆ ಯುವಮಿತ್ರ ಅಭಾರಿ.

ಐ.ಸಿ.ವೈ.ಎಮ್ ಅಧ್ಯಕ್ಷರಾದ ಶ್ರೀ ಪ್ರದೀಪ್ ಡಿಸಿಲ್ವಾ, ವೈ.ಸಿ.ಎಸ್/ವೈ.ಎಸ್.ಎಮ್ ಅಧ್ಯಕ್ಷರಾದ ಕು. ವಿಕಿತ್ ಫೆರ್ನಾಂಡಿಸ್ ಹಾಗೂ ಯುವಮಿತ್ರ ಕುಟುಂಬದ ಯುವಜನರ ಮಮತೆಯ ತಾಯಿ ಎಂದೇ ಗುರುತಿಸಲ್ಪಡುವ ಯುವ ಸಚೇತಕಿಯರಾದ ಭಗಿನಿ ಹೆಲೆನ್ ಮೋರಾಸ್ ಹಾಗೂ ಭಗಿನಿ ಮೇಬಲ್ ಡಿಸಿಲ್ವಾರವರಿಗೂ ಹೃದಯಾಂತರಾಳದ ವಂದನೆಗಳು. ಹಗಲಿರುಳೆನ್ನದೆ ನಿದ್ದೆಯನ್ನು ಬಿಟ್ಟು ಅವಿರತ ಶ್ರಮಿಸಿದ ಯುವಜನ ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ಸಹಸ್ರ ವಂದನೆಗಳು.

ಸಂಪನ್ಮೂಲ ತಂಡ, ದೈವೀವಾಕ್ಯದ ಬೋಧನೆಗೆ ನೆರವು ನೀಡಿದ ಪ್ರಬೋಧಕರು, ಮುಂಬೈ, ಬೆಂಗಳೂರು, ಮಂಗಳೂರಿನಿಂದ ಆಗಮಿಸಿದ ಸಮಾಲೋಚಕರಿಗೂ ಹಾಗೂ ಮಧ್ಯಸ್ಥಿಕಾ ಪ್ರಾರ್ಥನಾ ತಂಡದ ಸದಸ್ಯರಿಗೂ ಹೃದಯಾಂತರಾಳದ ವಂದನೆಗಳು. ನೆರವಾದ ಪ್ರತಿಯೊಬ್ಬರಿಗೆ ವಂದನೆಗಳು.

ನಮ್ಮ ಶಿವಮೊಗ್ಗ ಧರ್ಮಕ್ಷೇತ್ರದ ಎಲ್ಲಾ ಗುರುಗಳ ಪ್ರೋತ್ಸಾಹ, ಸಹಕಾರ, ಉದಾರತೆಯ ಗುಣ ಮರೆಯಲು ಸಾಧ್ಯವೇ ಇಲ್ಲ. ಇವರೆಲ್ಲರ ಸಹೃದಯಕ್ಕೆ ಪ್ರಭುವಿನ ನೂರ್ಮಡಿ ಆಶೀರ್ವಾದ ಲಭಿಸಲೆನ್ನುವುದೇ ನನ್ನ ಪ್ರಾರ್ಥನೆ.

ಈ ಪುಸ್ತಕವನ್ನು ಮುದ್ರಣದ ಸಂಪೂರ್ಣ ಖರ್ಚು ಭರಿಸಿದ ಸಂದೇಶ್ ಪ್ರಿಂಟರ್ಸ್, ಕಿನ್ನಿಗೋಳಿ ಇದರ ಮಾಲಿಕರಾದ ಶ್ರೀ ರೋಶನ್ ಡಿ'ಸೋಜರವರಿಗೆ ವಿಶೇಷ ವಂದನೆಗಳು.



**ಫಾದರ್. ಪಿಯುಸ್ ಡಿಸೋಜ**
**ನಿರ್ದೇಶಕರು, ಯುವಮಿತ್ರ**

# ಧರ್ಮಾಧ್ಯಕ್ಷರ ಸಂದೇಶ



**ಒ**ಮ್ಮೆಲೆ ಬಂದು ಎದೆ ತಿವಿದು ಹೋಗುವ ನೋವಿನ ಭಾವನೆ. ನಿಟ್ಟುಸಿರು ಬಿಡುತ್ತಲೇ ಸಮಾಧಾನಗೊಳ್ಳಲು ಹರಸಾಹಸ ಪಡುವ ಮನಸು. ಕಣ್ಣೀರಿನ ಜೊತೆಗೆಯೇ ಅದುರಿಹೋದಂತಿದೆ ಕೂಡಿಟ್ಟ ಕನಸು. ಯಾತನೆಗೂ ವೇತನವಿದ್ದಿದ್ದರೇ ನಾನೀಗ ಶ್ರೀಮಂತನಾಗುತ್ತಿದ್ದೆ. ಯುವಜನತೆಯ ಅಳಲಿಗೆ ಸಾಕ್ಷಿಯಾಗಿವೆ ಈ ಸಾಲುಗಳು. ಆತ್ಮವಿಶ್ವಾಸದ ಕೊರತೆ ಈಗಿನ ಯುವಜನತೆಯಲ್ಲಿ ಕಾಣುವ ಮೊದಲ ದೌರ್ಬಲ್ಯ. ಜೀವನದಲ್ಲಿ ಸಾರ ಕಳೆದುಕೊಂಡು ಬದುಕಿನಲ್ಲಿ ಏನೂ ಇಲ್ಲ ಎಂಬ ಚಿಂತನೆ ಯುವಜನತೆಯಲ್ಲಿ ಆವರಿಸಿ ಆತ್ಮಹತ್ಯೆ ಸರಿಯಾದ ಉತ್ತರ ಎಂದು ಮುಗ್ಧ ಮನಸ್ಸುಗಳು ಬಯಸುತ್ತಿರುವುದು ಖೇದಕರ. ಸ್ಫೂರ್ತಿದಾಯಕ ನುಡಿಗಳನ್ನು ಓದುವುದರಿಂದ, ಛಲದಿಂದ ಸಾಧಿಸಿದವರ ಕಥನಗಳು ಯುವಜನತೆಯ ಭರವಸೆಯನ್ನು ಕಾಪಾಡುತ್ತವೆ ಎಂಬುವುದನ್ನು ಯುವಜನತೆ ಮರೆತಂತಿದೆ.

"ಪ್ರಜ್ವಲಿಸು ಯುವಸಮಾವೇಶ" ಯುವ ಮಿತ್ರ, ಪ್ರೀತಿಯಿಂದ, ಮಮತೆಯಿಂದ ಯುವಜನತೆಯನ್ನು ಆಲಂಗಿಸಿ ಆಧ್ಯಾತ್ಮಿಕವಾಗಿ, ಮನೋವಿಕಸನದೆಡೆಗೆ ಕರೆದೊಯ್ಯಲು ನೆರವಾದ ಸಾಧನ. ಈ ನಿಟ್ಟಿನಲ್ಲಿ ಯುವಮಿತ್ರ ಆಯೋಜಸಿದ "ಪ್ರಜ್ವಲಿಸು" "RISE ABOVE" ಶ್ಲಾಘನೀಯ. ಧರ್ಮಕ್ಷೇತ್ರದ 450 ಯುವಜನರು ಭಾಗಿಯಾಗಿ ಪ್ರಜ್ವಲಿಸು ಪ್ರಭೆಯಿಂದ ಬೆಳಗಿದುದು ಅಭಿನಂದನಾರ್ಹ. ಗಾಡಾಂಧಕಾರದಲ್ಲೂ ಒಂದು ಬೆಳಕಿನ ಕಿರಣವಾಗಿ ಮುಳುಗುತ್ತಿರುವವನಿಗೆ ಹುಲ್ಲುಕಡ್ಡಿಯ ಆಸರೆಯಾಗಿ, ಸ್ಫೂರ್ತಿಯ ಕೈಹಿಡಿದು ನಡೆಸುವುದಕ್ಕೆ ಯುವಮಿತ್ರ "ಪ್ರಜ್ವಲಿಸು" ಯುವಸಮಾವೇಶದ ಮೂಲಕ ಮುಂದಾದ ರೀತಿ ಅನನ್ಯ.

ಆಶಾವಾದ ಅಥವಾ ಧನಾತ್ಮಕ ದೃಷ್ಟಿ ನಮ್ಮನ್ನು ಕತ್ತಲಿನಿಂದ ಬೆಳಕಿನ ಕಡೆಗೆ ಕರೆದೊಯ್ಯುವ ಸಾಧನ. ಗ್ರಹಿಕೆ, ನಂಬಿಕೆ ಮತ್ತು ಶ್ರದ್ಧೆಗಳ ಸರಿಯಾದ ದಿಗ್ದರ್ಶನ ನಮ್ಮನ್ನು ಆಕಾಶಕ್ಕೆತ್ತಿದರೆ, ಅವುಗಳ ತಪ್ಪು ದಿಶೆಯಿಂದ ನಾವು ಪಾತಾಳ ಸೇರುವುದು ನಿತ್ಯ ಸತ್ಯ ಎಂದು ಪ್ರಜ್ವಲಿಸು ಯುವಸಮಾವೇಶ ಯುವಜನತೆಗೆ ಮನವರಿಕೆ ಮಾಡಿಸಿದೆ. ವಿಶ್ರಮಿಸಿ, ಸಂತೋಷದಿಂದಿದ್ದು

ಆಟವಾಡಿ. ನಕ್ಕು ಇತರರನ್ನೂ ನಗಿಸಿ, ನೀವು ಸಿಲುಕಿಕೊಳ್ಳಬೇಡಿ ಮತ್ತು ಇತರರನ್ನು ಸಿಲುಕಿಸಬೇಡಿ ಎಂಬುವುದನ್ನು ಪ್ರಜ್ವಲಿಸು ಯುವಜನತೆಗೆ ಕಲಿಸಿದೆ. ಪೂಜೆ ಪುನಸ್ಕಾರ, ಆರಾಧನೆ ಆಪ್ತ ಸಮಾಲೋಚನೆಯ ಮೂಲಕ ಕಷ್ಟ ಸುಖಗಳೆರಡೂ ಸಮುದ್ರದಲ್ಲಿನ ತೆರೆಗಳಿದ್ದಂತೆ. ಒಂದರ ಹಿಂದೆ ಇನ್ನೊಂದು ಬಂದೇ ಬರುತ್ತದೆ. ಕಷ್ಟ ಬಂದಾಗ ಕಂಗೆಡದೇ ಅದರ ನಂತರ ಒಳ್ಳೆಯ ದಿನಗಳು ಬಂದೇ ಬರುತ್ತವೆ ಎಂಬ ವಿಶ್ವಾಸದಿಂದ ಅದನ್ನು ಎದುರಿಸುವ ಛಲ, ದೇವನಲ್ಲಿ ಅಚಲ ಭರವಸೆಯನ್ನು ಪ್ರಜ್ವಲಿಸು ಮೂಡಿಸಿದೆ. ಜೀವವಿದ್ದು ಜೀವನ ಚೈತನ್ಯವಿರದ ಯುವಜನತೆಯನ್ನು ಫಲಭರಿತ ಬಾಳಿಗೆ ಪ್ರಜ್ವಲಿಸು ಬಡಿದೆಬ್ಬಿಸಿದೆ. ಬದುಕಿಗೆ ಒಂದು ಚೈತನ್ಯ ಪೂರ್ವಕ ತಿರುವನ್ನು ನೀಡಿದ ಪ್ರಜ್ವಲಿಸು ಸಾಧನೆ ಅವರ್ಣನೀಯ. ಈ ನಿಟ್ಟಿನಲ್ಲಿ ಶ್ರಮಿಸಿದ ಯುವಮಿತ್ರ ನಿರ್ದೇಶಕರಾದ ವಂ.ಪಿಯುಸ್ ಹಾಗೂ ಇವರೊಂದಿಗೆ ಸಹಕರಿಸಿದ ಸರ್ವರಿಗೂ ವಂದನೆ, ಅಭಿನಂದನೆ. ಭಗವಂತನ ಕೃಪೆ ನಿಮ್ಮನ್ನು ಆವರಿಸಿ, ಮುನ್ನಡೆಸಲಿ.

ಪ್ರಕಾಶಗೊಳ್ಳುತ್ತಿರುವ ಈ ಕಿರು ಹೊತ್ತಿಗೆ "ಪ್ರಜ್ವಲಿಸು ಅನುಭವದ ನಿಧಿ". ಪ್ರಜ್ವಲಿತರಾದವರ ಮನದಾಳದ ತುಡಿತ ಮಿಡಿತಗಳು, ಮನದಾಳದ ಭಾವನೆಗಳು ಇದರಲ್ಲಿ ವ್ಯಕ್ತವಾಗಿವೆ. ಸ್ವಪ್ರೇರಿತರಾಗಿ ಪ್ರಜ್ವಲಿಸು ಯುವಸಮಾವೇಶದ ಮೂಲಕ ತಮ್ಮ ಬಾಳನ್ನು ಬೆಳಗಿಸಿಕೊಂಡು ಇತರರ ಬಾಳನ್ನು ಬೆಳಗಲು ಇದರಲ್ಲಿನ ಲೇಖಕರು ಕಂಕಣಬಧ್ಧರಾಗಿದ್ದಾರೆ. ಸಮಾವೇಶದಲ್ಲಿ ಭಾಗಿಯಾಗದ ಯುವಜನರು ಭಾಗಿಯಾದ ಯುವಜನತೆಯ ದಿವ್ಯಾನುಭವದಲ್ಲಿ ಮಿಂದು, ತಮ್ಮ ಜೀವನದಲ್ಲಿ ಹೊಸತನವನ್ನು ಕಂಡುಕೊಳ್ಳಲಿ, ಫಲಭರಿತ ಜೀವನದ ಸವಿಯನ್ನು ಅರಿತು, ಗುರಿಯಿರುವ ಸಾರ್ಥಕ ಜೀವನ ನಡೆಸಿ ಹಿರಿಯರಿಗೆ ಆಸರೆ, ಕಿರಿಯರಿಗೆ ಆದರ್ಶವಾಗಲಿ ಎಂಬುದು ನನ್ನ ಆಸೆ ಹಾಗೂ ಹೆಬ್ಬಯಕೆ, ಭಗವಂತನ ಅನಂತ ಆಶೀರ್ವಾದ ನಿಮ್ಮ ಮೇಲೆ ನೆಲೆಸಲಿ, ಯುವಜನತೆಯ ಬದುಕು ಕುಟುಂಬಕ್ಕೆ, ಪರರಿಗೆ ಆಶೀರ್ವಾದವಾಗಲಿ.

**+ ಫ್ರಾನ್ಸಿಸ್ ಸೆರಾವೊ**

**ಧರ್ಮಾಧ್ಯಕ್ಷರು, ಶಿವಮೊಗ್ಗ ಧರ್ಮಕ್ಷೇತ್ರ**

# ಗುರುಶ್ರೇಷ್ಠರ ಸಂದೇಶ



***ಪ್ರೀತಿಯ ಸ್ವಾಮಿ ಪಿಯುಸ್‌ರವರೇ,***

ನಿಮಗೆ ಪ್ರಭು ಯೇಸುವಿನ ನಾಮದಲ್ಲಿ ಶಾಂತಿ ಮತ್ತು ಪ್ರೀತಿ ಸದಾ ಲಭಿಸಲಿ.

ಇತ್ತೀಚಿನ ದಿನಗಳಲ್ಲಿ ನಮ್ಮ ಧರ್ಮಕೇಂದ್ರದ ಯುವಜನರಿಗೆ ಹಲವಾರು ಕಾರ್ಯಕ್ರಮಗಳನ್ನು ಬೇರೆ ಬೇರೆ ಕಡೆಗಳಲ್ಲಿ ಏರ್ಪಡಿಸಿ ಯಶಸ್ವಿಯಾಗಿ ನಡೆಸುವುದನ್ನು ಕಂಡಾಗ ಬಹಳ ಸಂತೋಷವಾಗುತ್ತದೆ. ಈ ಕಾರ್ಯಕ್ರಮಗಳು ಯುವಜನರ ಜೀವನದ ಮೇಲೆ ಸತ್ಪರಿಣಾಮವನ್ನು ಬೀರಲಿ ಎಂಬುದೇ ನನ್ನ ಆಶಯ.

ರೈಸ್ ಅಬೌ – ಸೈಕೋ ಸ್ಪಿರಿಚುವಲ್ ರಿಟ್ರೀಟ್ – ಇದೊಂದು ವಿಶೇಷ ಐತಿಹಾಸಿಕ ಘಟನೆ ಎಂದರೆ ತಪ್ಪಲ್ಲ. ಪ್ರಥಮ ಬಾರಿಗೆ ಸುಮಾರು 500 ಯುವಜನರು ಹರಿಹರ ಮಾತೆಯ ಪುಣ್ಯಕ್ಷೇತ್ರದಲ್ಲಿ ಒಟ್ಟಾಗಿ ಸೇರಿ ಒಂದು ಧ್ಯಾನಕೂಟದಲ್ಲಿ ಭಾಗವಹಿಸುತ್ತಿರುವುದು ಪವಿತ್ರಾತ್ಮರ ವರಧಾನ ಎಂದು ಭಾವಿಸುತ್ತೇನೆ.


ಯುವಜನರು ಧ್ಯಾನಕೂಟವನ್ನು ಮುಗಿಸಿ ಮರಳಿ ಬಂದಾಗ ಅವರ ಅನಿಸಿಕೆಗಳು ಬಹಳ ಕುತೂಹಲಕರವಾಗಿದ್ದವು. ಅವರಲ್ಲಿ ಅನೇಕರು ಈ ಧ್ಯಾನಕೂಟದಿಂದ ಬಹಳಷ್ಟು ಪ್ರಯೋಜನವನ್ನು ಪಡೆದು ಹೊಸ ಜೀವನವನ್ನು ಆರಂಭಿಸಿರುತ್ತಾರೆ. ತಮ್ಮ ಜೀವನದಲ್ಲಿ ಹುದುಗಿದ್ದ ಹಲವಾರು ಸಮಸ್ಯೆಗಳಿಗೆ ತಕ್ಕ ಪರಿಹಾರವನ್ನು ಪಡೆದುಕೊಂಡಿದ್ದಾರೆ. ಪ್ರಾರ್ಥನಾ ಜೀವನದ ಹೊಸ ಮುಖವನ್ನು ಅವರು ಅನುಭವಿಸುತ್ತಿದ್ದಾರೆ. "ನಾವು ನೋಡಿ ನಡೆಯುವವರಲ್ಲ ನಂಬಿ ನಡೆಯುವವರು" ಎಂಬ ಸಂತ ಪೌಲರ ಜೀವ ನುಡಿಗಳನ್ನು ತಮ್ಮ ತಮ್ಮ ಜೀವನದಲ್ಲಿ ಅಳವಡಿಸಿ ಬಾಳಲು ಸತತ ಪ್ರಯತ್ನವನ್ನು ಮಾಡುತ್ತಾ ಜೀವಿಸುತ್ತಿದ್ದಾರೆ. ದೇವರ ಈ ಎಲ್ಲಾ ಅಪಾರ ಕೊಡುಗೆಗಳನ್ನು ಪಡೆದು ಧನ್ಯರಾಗುತ್ತಿದ್ದಾರೆ. ಇವನ್ನು ಯುವಜನತೆಯಲ್ಲಿ ಕಾಣಲು ಬಹಳ ಸಂತೋಷವಾಗುತ್ತದೆ.

ದಯಾಮಯ ದೇವರು ನಿಮ್ಮನ್ನು ಕ್ರಿಸ್ತಯೇಸುವಿನಲ್ಲಿ ಹರಸಿ ಯುವಜನತೆಯಲ್ಲಿ ಕ್ರಿಸ್ತರ ಅಮರ ಜ್ಯೋತಿಯನ್ನು ಬೆಳಗಿಸಲೂ, ಅವರ ರಾಜ್ಯವನ್ನು ಹರಡಲೂ ಇನ್ನಷ್ಟು ಕಾರ್ಯಕ್ರಮಗಳನ್ನು ರೂಪಿಸುವುದರಲ್ಲಿ ಯೇಸುಪ್ರಭುವಿನ ಪ್ರಸನ್ನತೆ ನಿಮ್ಮನ್ನು ಆತ್ಮರ ವರಧಾನಗಳಿಂದ ತುಂಬಲಿ ಎಂದು ಅವರಲ್ಲಿ ಪ್ರಾರ್ಥಿಸುತ್ತೇನೆ.

**ಅತೀ ವಂದನೀಯ. ಫೆಲಿಕ್ಸ್ ಜೊಸೆಫ್ ನೊರೊನ್ಹಾ**

**ಗುರುಶ್ರೇಷ್ಠರು, ಶಿವಮೊಗ್ಗ ಧರ್ಮಕ್ಷೇತ್ರ**

## ಯುವಮಿತ್ರನ ಮನದ ಮಾತು...



**"ಮನಸ್ಸು ಮೌನವಾದಾಗ ಅಂತಃರಾತ್ಮ ಚೇತನಗೊಳ್ಳುತ್ತದೆ. ಯುವಮಿತ್ರ ಪ್ರಭುವನ್ನು ಸಂಧಿಸುವ ನಿರ್ಧಾರ ಮಾಡಿದಾಗ ತಾರುಣ್ಯದಲ್ಲಿ ಪ್ರಜ್ವಲಿಸಿದ ಅನುಭವವಾಗುತ್ತದೆ"**

Rise Above ಅಥವಾ 'ಪ್ರಜ್ವಲಿಸು' ಇದು ಹಲವು ದಿನಗಳ ಕನಸು. ಈ ಕನಸಿನ ಹಿಂದೆ ಕೆಲವರ ಕಣ್ಣೀರು, ಸೋಲು, ನಿರಾಸೆ, ಖಿನ್ನತೆ, ಆತ್ಮಹತ್ಯೆ ಎಂಬ ಕಹಿ ಘಟನೆಗಳ ಹಿನ್ನೆಲೆ ಇದೆ. ಯುವಜನರು ಸಮಸ್ಯೆಗಳಿಗೆ ಪರಿಹಾರ ಹುಡುಕುವ ಬದಲು ನಿಸ್ಸಾಹಯಕರಾಗಿ ಕುಡಿತ, ದುಶ್ಚಟ, ಆತ್ಮಹತ್ಯೆಯೇ ಶಾಶ್ವತ ಪರಿಹಾರ ಎನ್ನುವ ಹಂತಕ್ಕೆ ಬಂದು ನಿಂತು ಬಿಡುತ್ತಾರೆ. ಇವೆಲ್ಲವನ್ನು ಕಂಡಾಗ ಇದಕ್ಕೊಂದು ಪರಿಹಾರ ಕಂಡು ಹಿಡಿಯಬೇಕು. ಸೋಲಿಗೆ ಸೋಲದೆ ಸೋಲನ್ನು ಸೋಲಿಸಿ ಪ್ರಜ್ವಲಿಸುವ ಯುವಜನರನ್ನು ಶಿವಮೊಗ್ಗ ಧರ್ಮಕ್ಷೇತ್ರದಲ್ಲಿ ಕಟ್ಟಬೇಕು ಎಂಬ ಚಿಂತನೆ ಮನಸ್ಸಿನಲ್ಲಿ ಮೂಡಿತ್ತು. ಆ ಕನಸಿನೊಂದಿಗೆ ಹೊರಚಿಮ್ಮಿದ್ದೇ "Rise Above" Pyscho-Spiritual Retreat for Youth. "ಪ್ರಜ್ವಲಿಸು" ಯುವಜನರ ಮನೋಭಿವೃದ್ಧಿಗಾಗಿ ಆಧ್ಯಾತ್ಮಿಕ ನವೀಕರಣ. ಇದು ಯುವಜನರಲ್ಲಿ ಮನೋ-ಅಧ್ಯಾತ್ಮಿಕ ಸ್ಥೈರ್ಯ ತುಂಬುವ ವಿಶೇಷ ಯೋಜನೆಯಾಗಿತ್ತು.

ದೇವರ ವಾಕ್ಯವನ್ನು ಯುವಜನರ ಭಾಷೆಯಲ್ಲಿ ಅವರಿಗೆ ಅರ್ಥವಾಗುವಂತೆ ತಿಳಿಸುವ ಪ್ರಯತ್ನ ಮಾಡಬೇಕು ಅನಿಸಿತು. ಆದ್ದರಿಂದ, "ಪ್ರಜ್ವಲಿಸು" ಇದೊಂದು ಧ್ಯಾನಕೂಟವಾಗಿ ಮೇಲ್ನೋಟಕ್ಕೆ ಕಂಡರೂ ವಿಭಿನ್ನತೆಯಿಂದ ಕೂಡಿದ್ದಾಗಿರಬೇಕು, ಯುವಸ್ನೇಹಿಯಾಗಬೇಕು ಎಂಬ ಕಾರಣಕ್ಕಾಗಿ ಪ್ರತೀ ದಿನ ಸಂಜೆ 8 ರಿಂದ 10 ಗಂಟೆಯವರೆಗೆ ವೈವಿಧ್ಯಮಯ ಸಂಗೀತ ಸಂಜೆಯ ಕಾರ್ಯಕ್ರಮ ರೂಪಿಸಲಾಗಿತ್ತು. ಇದರ ಪರಿಣಾಮವಾಗಿ ಕುಂದಿಹೋದ ಯುವಶಕ್ತಿ ಮತ್ತೆ ಪುನಶ್ಚೇತನಗೊಂಡಿತು. ಮುದುಡಿದ ಮನಗಳು ಅರಳಿದವು. ಜೀವನಕೆ ಪ್ರಭುವೇ ಹೊಸಶಕ್ತಿ ತುಂಬಿದರು. ಬರೀ ಶ್ವಾಸವಾಗಿದ್ದ ಯುವಜೀವಗಳಲ್ಲಿ ವಿಶ್ವಾಸ ಚಿಗುರೊಡೆಯಿತು.

"ಮನುಷ್ಯನ ಅತೀ ಮುಖ್ಯವಾದ ಆಸ್ತಿ ಆತನ ಜ್ಞಾನ ತುಂಬಿದ ಮೆದುಳಲ್ಲ ಆದರೆ ಪ್ರೀತಿ ತುಂಬಿದ ಹೃದಯ. ಆಲಿಸಲು ಸದಾ ಸಿದ್ಧವಾಗಿರುವ ಕಿವಿ

ಹಾಗೂ ನೆರವಿಗೆ ಧಾವಿಸುವ ಸಹಾಯ ಹಸ್ತ" ಎಂಬ ಸನ್ನುಡಿಯಂತೆ 'ಯುವಮಿತ್ರ'- ಯುವಜನ ಆಯೋಗದ ವತಿಯಿಂದ ಯುವಜನರಿಗೆ ಸಮಾಲೋಚನೆ, ಆಂತರೀಕ ಸೌಖ್ಯ ಹಾಗೂ ದೇವರ ವಾಕ್ಯದ ಬೋಧನೆಯಿಂದ ನವಜೀವನದ ಮಾರ್ಗ ತೋರಿಸಿದ್ದೇವೆ. ಇದುವರೆಗೆ ಹಲವಾರು ಯುವಜನರು, ಅವರ ಪೋಷಕರು ಹಾಗೂ ಧರ್ಮಕೇಂದ್ರದ ಗುರುಗಳು ದೂರವಾಣಿ ಕರೆಮಾಡಿ ಯುವಜನರಲ್ಲಿಯು ಪರಿವರ್ತನೆ, ಜೀವನ ಕ್ರಮದಲ್ಲಿ ಬದಲಾವಣೆಗಳನ್ನು ಕಂಡು ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಅದರಲ್ಲೂ 43ಕ್ಕೂ ಹೆಚ್ಚು ಯುವಜನರು ಹಾಗು ಹದಿಹರೆಯದವರು ಆತ್ಮಹತ್ಯೆಯ ಚಿಂತನೆಯಿಂದ ಸಂಪೂರ್ಣ ಬಿಡುಗಡೆಯನ್ನು ಆಂತರೀಕ ಸೌಖ್ಯ ಆರಾಧನೆಯ ಮೂಲಕ ದೊರಕಿದೆ ಎಂದಾಗ ಎಲ್ಲೂ ನನಗೆ Rise Above ಕನಸು ನನಸಾದ ಅನುಭವವಾಯಿತು. ಗೌಪ್ಯತೆಯ ಕಾರಣದಿಂದ ಅವರ ಸಾಕ್ಷಿಗಳನ್ನು ಈ ಪುಸ್ತಕದಲ್ಲಿ ಪ್ರಕಟಿಸಲಾಗಲಿಲ್ಲ.

ಯುವಮಿತ್ರರೇ, ನಿಮ್ಮ ಸ್ವ-ಪ್ರಯತ್ನದೊಂದಿಗೆ ಪ್ರಾರ್ಥನೆ, ಬೈಬಲ್ ಧ್ಯಾನ, ಕುಟುಂಬ ಪ್ರಾರ್ಥನೆ ತಪ್ಪದೇ ಮಾಡಿ. ಕೇವಲ ನಿಮ್ಮ ಪುಸ್ತಕದ ಜ್ಞಾನ ತುಂಬಿದ ಮೆದುಳು ಎಲ್ಲಾ ಕೊಡಲು ಸಾಧ್ಯವಿಲ್ಲ. ಹಿರಿಯರ ಅನುಭವ, ಕಿರಿಯರ ಪ್ರೋತ್ಸಾಹದೊಂದಿಗೆ ಮುಂದೆ ಸಾಗಿ. ಪ್ರಾಪಂಚಿಕ ಪ್ರೀತಿ ಕ್ಷಣಿಕ ಮಾತ್ರ. ಅದು ನಿಮ್ಮ ವಯಸ್ಸು ಮತ್ತು ಸೌಂದರ್ಯದ ಆಧಾರದಲ್ಲಿ ಪ್ರೀತಿ ತೋರುತ್ತದೆ. ಬಣ್ಣದ ಮಾತುಗಳಿಗೆ ಮೋಸ ಹೋಗದೆ ನಿಮಗಾಗಿ ಹಗಲಿರುಳು ಶ್ರಮಿಸುವ, ನಿಮ್ಮ ಬಗ್ಗೆ ಕನಸಿನ ಗೋಪುರವನ್ನೇ ಕಟ್ಟಿಕೊಂಡಿರುವ ನಿಮ್ಮ ಅಪ್ಪ-ಅಮ್ಮನನ್ನು ಎಂದಿಗೂ ಮರೆಯಬೇಡಿ. ನಿಮ್ಮ ಸುಖ ಹಾಗೂ ದುಃಖದಲ್ಲಿ ನಿಮ್ಮೊಂದಿಗಿರುವ ಜೀವಗಳವು. ಯಾವತ್ತೂ ಸೋಲಿಗೆ ಸೋಲಬೇಡಿ. ನಿರಂತರ ಶ್ರಮಿಸಿ ಸೋಲನ್ನು ಸೋಲಿಸಿ ಎಂದೆಂದೂ ಪ್ರಜ್ವಲಿಸಿ. ಮಿತ್ರರೇ, ಸಾಮಾಜಿಕ ಜಾಲತಾಣದ ಕಾಲ್ಪನಿಕ ಪ್ರಪಂಚದಿಂದ ಸ್ವಲ್ಪ ಹೊರ ಬನ್ನಿ, ಮುಕ್ತವಾಗಿ ಮಾತನಾಡಿ. 'ಯುವಮಿತ್ರ' ಶಿವಮೊಗ್ಗ ಧರ್ಮಕ್ಷೇತ್ರದ ಯುವಜನ ಆಯೋಗ ನಿರಂತರ ನಿಮ್ಮೊಂದಿಗಿದೆ. ನಮ್ಮ ಎಲ್ಲಾ ಕಾರ್ಯಕ್ರಮಗಳು ಯುವಸ್ನೇಹಿ ಕಾರ್ಯಕ್ರಮಗಳು. ನಿಮಗಾಗಿಯೇ ಇರುವಂತಾದ್ದು. ಎಲ್ಲಾ ಕಾರ್ಯಕ್ರಮಗಳಲ್ಲಿ ತಪ್ಪದೇ ಭಾಗವಹಿಸಿ. ಇದು ನಿಮ್ಮ ಯುವಮಿತ್ರನ ಕಿವಿಮಾತು.

**ವಂ. ಪಿಯುಸ್ ಡಿ'ಸೋಜ**

**ಯುವಜನ ನಿರ್ದೇಶಕರು, ಶಿವಮೊಗ್ಗ ಧರ್ಮಕ್ಷೇತ್ರ**

# ಅಧ್ಯಕ್ಷರ ಮನದಾಳದಿಂದ...

## ಸೋಲಿಗೆ ಸೋಲದೆ, ಸೋಲನ್ನು ಸೋಲಿಸಿ 'ಪ್ರಜ್ವಲಿಸು'



ಆತ್ಮೀಯರೇ, ನಮ್ಮ ಯುವಮಿತ್ರದ ಬಹಳ ದಿನಗಳ ಕನಸು ನನಸುಗೊಂಡ ದಿನ. ಅದು ಜೀವನ ಎಂಬ ಪಯಣದಲ್ಲಿ ಯೌವನ ಎಂಬ ನೌಕೆಯಲ್ಲಿ ಕನಸುಗಳನ್ನು ಹೊತ್ತು ಸಾಗುತ್ತಿರುವ ಯುವಜನರಿಗೆ ಪ್ರಜ್ವಲಿಸು ಕಾರ್ಯಕ್ರಮ ಒಂದು ಹೊಸ ಜೀವನಕ್ಕೆ ನಾಂದಿಯಾಯಿತು ಎಂದರೆ ತಪ್ಪಾಗಲಾರದು.

ಸುಮಾರು 450ಕ್ಕೂ ಹೆಚ್ಚು ಯುವಮನಸ್ಸುಗಳು ಈ ಕಾರ್ಯಕ್ರಮದ ಸವಿಯನ್ನು ಸವಿದರು. ಕಾರ್ಯಕ್ರಮದ ಉದ್ಘಾಟನೆಯು ಬಹಳ ಪ್ರಶಂಸೆಗೆ ಒಳಗಾಗಿ ಮುಂದಿನ 3 ದಿನಗಳಲ್ಲಿ ಎಲ್ಲರಿಗೂ ಬಹಳ ಹುಮ್ಮನಸ್ಸನ್ನು ಹುಟ್ಟಿಸಿತು. ಅನೇಕ ವಿಶೇಷ ಕಾರ್ಯಕ್ರಮಗಳು, ಯೇಸು ನಮನ ಕಾರ್ಯಕ್ರಮ ಅಂತೆಯೇ ಧರ್ಮಕ್ಷೇತ್ರದ ಗುರುಗಳಿಂದ ನಡೆದ ಸಂಗೀತ ಸಂಜೆ, ಎಲ್ಲಾ ಯುವ ಜನರ ಆಂತರಿಕ ಸೌಖ್ಯಕ್ಕಾಗಿ ನಡೆಸಿದ ಆಂತರಿಕ ಸೌಖ್ಯ ಆರಾಧನೆ, ಎಲ್ಲ ಯುವಜನರನ್ನು ನೂತನಗೊಳಿಸಿತು. ಎಲ್ಲಾ ಯುವಜನರಿಗೋಸ್ಕರ ಅನೇಕ ದಿನಗಳಿಂದ ಎಡಬಿಡದೆ ಪ್ರಾರ್ಥಿಸಿ ಎಲ್ಲರಿಗೂ ಒಳ್ಳೆಯದನ್ನೇ ಬಯಸಿದ ತಂಡವು ಪ್ರಶಂಸೆಗೆ ಪಾತ್ರವಾಯಿತು.

ನಮ್ಮ ಯುವಜನತೆ ಇಂದು ಅನೇಕ ದುಶ್ಚಟಗಳಿಗೆ ಒಳಗಾಗಿ ಹಾದಿ ತಪ್ಪುತ್ತಿದ್ದಾರೆ. ಅದೆಷ್ಟೋ ಯುವಜನರು ಸಣ್ಣ-ಸಣ್ಣ ವಿಚಾರಗಳಿಗೆ ಮನನೊಂದು ಖಿನ್ನತೆಗೆ ಒಳಗಾಗಿ, ದೇವರು ಕೊಟ್ಟ ಅಮೂಲ್ಯ ಜೀವನವನ್ನು ನಾಶಮಾಡಿಕೊಳ್ಳುತ್ತಿದ್ದಾರೆ. ಎಷ್ಟೋ ವಿಚಾರಗಳನ್ನು ಯಾರೊಂದಿಗೂ ಹಂಚಿಕೊಳ್ಳಲಾಗದೆ ಕೊರಗುತ್ತಿರುವ ಈ ಸಮಯದಲ್ಲಿ ನಮ್ಮ ಧರ್ಮಕ್ಷೇತ್ರದ ಯುವಜನರಿಗಾಗಿ 'ಪ್ರಜ್ವಲಿಸು' ಈ ಧ್ಯಾನಕೂಟವನ್ನು ಆಯೋಜನೆ ಮಾಡಿ ಎಲ್ಲಾ ಯುವಜನರಿಗೆ ಹೊಸ ಜೀವನವನ್ನು ಕಲ್ಪಿಸಿತು. ಇದುವರೆಗೆ ಸುಮಾರು 50ರಿಂದ 60 ಯುವ ಮನಸ್ಸುಗಳು ದುಶ್ಚಟ, ದುರಭ್ಯಾಸ ಹಾಗು ಜೀವನಕೊನೆಗೊಳಿಸುವ ಯೋಚನೆಗಳಿಂದ ದೂರ ಸರಿದು ನಮಗೆ ಧನ್ಯವಾದ ತಿಳಿಸಿದ್ದಾರೆ. ಇದಕ್ಕಿಂತ ಹೆಚ್ಚಿನ ಸಂತೋಷ, ಸಂತೃಪ್ತಿ ಬೇರೇನೂ ಇಲ್ಲ. ಅದರಲ್ಲೂ ನಮಗೆ ಹರಿಹರದ ಆರೋಗ್ಯಮಾತೆಯ ಪುಣ್ಯಕ್ಷೇತ್ರದಲ್ಲಿ ವಿಶೇಷ ಆಶೀರ್ವಾದವು ದೊರೆಯಿತು ಎಂದರೆ ತಪ್ಪಾಗಲಾರದು. ನಮ್ಮ ಕಾರ್ಯಕ್ರಮ ಇಷ್ಟೊಂದು ಯಶಸ್ವಿಯಾಯಿತು ಎಂದರೆ ಅದಕ್ಕೆ ಅನೇಕರ ಶ್ರಮವೇ ಕಾರಣ.



**ಶ್ರೀ ಪ್ರದೀಪ್ ಡಿ'ಸಿಲ್ವ**
**ಐ.ಸಿ.ವೈ.ಎಮ್ ಅಧ್ಯಕ್ಷರು**
**ಶಿವಮೊಗ್ಗ ಧರ್ಮಕ್ಷೇತ್ರ**

# ಯುವಮಿತ್ರರೇ ಸದಾ ಪ್ರಜ್ವಲಿಸಿ



ಜೀವನ ಎಂಬ ಪ್ರಯಾಣದಲ್ಲಿ, ಯೌವನ ಎಂಬ ನೌಕೆಯಲ್ಲಿ ಸಾಗುತ್ತ ಕನಸುಗಳನ್ನು ನನಸಾಗಿಸಿ ಪ್ರಜ್ವಲಿಸುವುದು ಪ್ರತಿಯೊಬ್ಬ ಯುವಕ/ಯುವತಿಯರ ಸೌಭಾಗ್ಯವೇ ಸರಿ. 'ಯುವಮಿತ್ರ' ಶಿವಮೊಗ್ಗ ಧರ್ಮಕ್ಷೇತ್ರದ ಯುವಜನ ಆಯೋಗದ ವತಿಯಿಂದ ಆಯೋಜಿಸಿರುವ ಮನೋ–ಆಧ್ಯಾತ್ಮಿಕ ನವೀಕರಣ ಧ್ಯಾನಕೂಟಕ್ಕೆ ಆಗಮಿಸಿದ್ದ 450ಕ್ಕೂ ಹೆಚ್ಚು ಯುವಕ/ಯುವತಿಯರ ಅನುಭವಗಳು ಸಂತಸದ ಶಿಖರವನ್ನೇರಿವೆ. ಮೊದಲನೆಯ ದಿನ ಕಂಡ ಮುಖಗಳು, ಬೇಸರ, ಚಿಂತೆ, ದುಃಖ, ಭಯ, ಸಿಟ್ಟು, ನೋವು, ದ್ವೇಷ, ಮತ್ಸರದಿಂದ ಕೂಡಿದ್ದರೂ, ಕೊನೆಯದಿನ ಪ್ರಜ್ವಲಿಸಿದ ಮುಖಗಳಾಗಿ ಮಾರ್ಪಟ್ಟವು. ಒಬ್ಬರಿಗೊಬ್ಬರು ಒಳ್ಳೆಯದನ್ನು ಬಯಸುತ್ತ ಹರಿಹರದ ಆರೋಗ್ಯಮಾತೆಯ ಪುಣ್ಯಕ್ಷೇತ್ರದಿಂದ ತಮ್ಮ ಮನೆಗಳಿಗೆ ತೆರಳಿದರು. ಪರಸ್ಪರ ಕ್ಷಮೆಯಾಚಿಸಿ ಆಶೀರ್ವದಿಸಿ ಎಂದು ಕೈ ಜೋಡಿಸಿ ಯುವಜನರು ನಿಂತಾಗ ಪವಾಡವೇ ನನ್ನೆದುರಿಗೆ ಕಂಡಂತಾಯಿತು. ಎಲ್ಲರ ಮನಸ್ಸಿನಲ್ಲಿ ತುಂಬಿ ತುಳುಕಿದ ಸಂತೋಷ, ಆನಂದ, ಸಮಾಧಾನ, ನಂಬಿಕೆ, ವಿಶ್ವಾಸ, ಮರೆಯಲಾರದಂತಹ ನೆನಪುಗಳು.

ನಾವು ಪ್ರಜ್ವಲಿಸುತ್ತ ಸದಾ ಇರಬೇಕಾದರೆ ನಮ್ಮ ಜೀವನದಲ್ಲಿ ಇರಬೇಕಾದಂತಹ ಮೂರು ಅಂಶಗಳು

**ಪ್ರಾರ್ಥನಮಯ ಜೀವನ:** ಯೇಸು ಕ್ರಿಸ್ತರು ತನ್ನ ತಂದೆಯ ಚಿತ್ತಾನುಸಾರ ನಡೆದು ಜೀವನದಲ್ಲಿ ಪ್ರಜ್ವಲಿಸಿದರು. ಪ್ರತಿಯೊಂದು ಕ್ಷಣವು ಪ್ರಾರ್ಥನೆಯ ಮೂಲಕ ತನ್ನ ತಂದೆಯಲ್ಲಿ ಆಳವಾದ ಸಂಬಂಧವನ್ನು ರೂಪಿಸಿದರು. ನಾವು ನಮ್ಮ ದೈನಂದಿನ ಜೀವನದಲ್ಲಿ ತಂದೆಯ ಚಿತ್ತವನ್ನು ಮಾಡುತ್ತ ಪ್ರಜ್ವಲಿಸೋಣವೇ?

**ಒಳ್ಳೆಯ ಯೋಚನೆಗಳು:** 'Be positive in your thinking' ಯೋಚನೆಗಳು ನಮ್ಮ ಜೀವನವನ್ನು ರೂಪಿಸುತ್ತದೆ. ಭಗವಂತನ ಸಾನಿಧ್ಯದಲ್ಲಿ ನಮ್ಮ ಜೀವನವನ್ನು ರೂಪಿಸಿದರೆ ನಮ್ಮ ಯೋಚನೆಗಳು ಕಲ್ಮಷವಾಗುವುದಿಲ್ಲ. ನಾವು ವೀಕ್ಷಿಸುತ್ತೇವೆ, ಆಲಿಸುತ್ತೇವೆ, ಯೋಚಿಸುತ್ತೇವೆ, ಈ ಎಲ್ಲಾ ಅಂಶಗಳು ನಮ್ಮ ಹತೋಟಿಯಲ್ಲಿ ಇದ್ದರೆ ನಮ್ಮ ಭವಿಷ್ಯ ಪ್ರಜ್ವಲಿಸಲು ನಾಂದಿಯಾಗುತ್ತದೆ.

**ಪರರಿಗೆ ನನ್ನ ಸಹಾಯದ ಹಸ್ತ ಚಾಚುವುದು:** ನಾವು ಎಷ್ಟು ವರ್ಷ ಬದುಕುತ್ತೇವೆ ಎಂಬುದು ಮುಖ್ಯವಲ್ಲ, ಎಷ್ಟು ಒಳ್ಳೆಯ/ಸಾರ್ಥಕ ಕೆಲಸಗಳನ್ನು ಮಾಡುತ್ತೇವೆಂಬುದು ಮುಖ್ಯ. ಜೀವನ ಮತ್ತು ಮರಣದ ಮಧ್ಯೆ ಇರುವ ಅಂತರವನ್ನು ಸಾರ್ಥಕವಾಗಿ ಜೀವಿಸೋಣ.

ಪ್ರೀತಿಯ ಯುವಜನರೇ, ಈಗಾಗಲೇ ನೀವು ಜೀವನದಲ್ಲಿ ಇದ್ದ ಹಂತದಿಂದ ಎಚ್ಚೆತ್ತು ಕೊಂಡಿದ್ದಿರಿ. ಪುನಃ ಹಿಂದೆ ನೋಡದೆ ಜೀವನ ಮುಂದುವರಿಸಿ. ಧರ್ಮಕೇಂದ್ರ ಮತ್ತು ಧರ್ಮಕ್ಷೇತ್ರವನ್ನು ಪ್ರಜ್ವಲಿಸುವ ಶಿಖರಕ್ಕೆ ಕೊಂಡೊಯ್ಯುವ ಕಾರ್ಯದಲ್ಲಿ ಸಕ್ರೀಯವಾಗಿ ಪಾಲುದಾರರಾಗಿ. ಎಲ್ಲರಿಗೂ ಪ್ರಭುವಿನ ನಾಮದಲ್ಲಿ ವಂದನೆ.

**ಸಿಸ್ಟರ್. ಹೆಲೆನ್ ಮೋರಾಸ್ ಎಸ್.ಸಿ.ಬಿ**
**ಯುವ ಸಚೇತಕಿ, ಶಿವಮೊಗ್ಗ ಧರ್ಮಕ್ಷೇತ್ರ**

# ಪ್ರಜ್ವಲಿಸು ಅನುಭವದ ಹೊನಲು



"ಇತಿಹಾಸ ಓದುವಂತಹ ವ್ಯಕ್ತಿಗಳಾಗಬೇಡಿ, ಇತಿಹಾಸ ನಿರ್ಮಿಸುವಂತಹ ವ್ಯಕ್ತಿಗಳಾಗಿ" ಎಂಬ ಹೇಳಿಕೆಯಂತೆ, ಶಿವಮೊಗ್ಗ ಧರ್ಮಕ್ಷೇತ್ರದ "ಯುವಮಿತ್ರ" ಆಯೋಗದ ನಿರ್ದೇಶಕರಾದ ವಂದನೀಯ ಫಾದರ್ ಪಿಯುಸ್ ಡಿಸೋಜರವರು, "ಪ್ರಜ್ವಲಿಸು" "Rise Above" ಎಂಬ ಕನಸನ್ನು ಯುವಜನರಿಗಾಗಿ ಕಂಡು ನಮ್ಮ ಧರ್ಮಕ್ಷೇತ್ರದಲ್ಲಿ ಇತಿಹಾಸವನ್ನೇ ಸೃಷ್ಟಿಸಿದ್ದಾರೆ. ಹೌದು, ನಮ್ಮ ಧರ್ಮಕ್ಷೇತ್ರ ಸುಮಾರು 450ಕ್ಕೂ ಹೆಚ್ಚು ಯುವಕ ಯುವತಿಯರು "ಪ್ರಜ್ವಲಿಸು, ಯುವಮಿತ್ರ ಬಳಗವೆ ಪ್ರಜ್ವಲಿಸು, ಸೋಲಿಗೆ ಸೋಲದೆ ಸೋಲನ್ನು ಸೋಲಿಸಿ ಪ್ರಜ್ವಲಿಸು" ಎಂಬ ಹಾಡಿನ ಸಾಲಿಗೆ ಮರುಳಾಗಿ "ಜೀವನ ಉತ್ತಮಗೊಳ್ಳುವುದು ಅವಕಾಶಗಳಿಂದಲ್ಲ ಬದಲಾವಣೆಗಳಿಂದ" 'Rise Above' ಎಂಬುದೊಂದು ಅವಕಾಶ, ಅದರೆ ಅಲ್ಲಿಂದ ಕಲಿತ ವಿಷಯಗಳು, ಆದ ಅನುಭವಗಳು ನಮ್ಮ ಯುವಮಿತ್ರರ ಜೀವನದಲ್ಲಿ ಬದಲಾವಣೆ ತರಲು ಒಂದು ಪುಟ್ಟ ಹೆಜ್ಜೆ ಎಂದರೆ ತಪ್ಪಾಗಲಾರದು.

ತಮ್ಮ ಸಮಸ್ಯೆಗಳಿಂದ ಸಂಪೂರ್ಣವಾಗಿ ತಪ್ಪಿಸಿಕೊಳ್ಳಲು ಇರುವ ಒಂದೇ ಒಂದು ಮಾರ್ಗವೆಂದರೆ ಅದಕ್ಕೆ ಪರಿಹಾರ ಕಂಡುಕೊಳ್ಳುವುದು. ಆಪ್ತ ಸಮಾಲೋಚನೆಯ ಮೂಲಕ ನಮ್ಮ ಯುವಮಿತ್ರರು ಮನೋ-ಆಧ್ಯಾತ್ಮಿಕ ಅಡಚಣೆಗಳಿಂದ, ಜೀವನದಲ್ಲಿ ಭರವಸೆ ಕಳೆದುಕೊಂಡು ಒಂದು ರೀತಿಯ ಜಿಗುಪ್ಸೆ, ನೋವು ಸಮಸ್ಯೆಗಳಿಗೆ ಸಿಲುಕಿಕೊಂಡ ಸಂದರ್ಭ ಸಮಯಗಳನ್ನು ಹಂಚಿಕೊಂಡು ತಮ್ಮ ಹೃದಯಗಳನ್ನು ಈ ಸಮ್ಮೇಳನದಲ್ಲಿ ಹಗುರಮಾಡಿಕೊಂಡರು. ಆಂತರಿಕ ಸೌಖ್ಯದ ಆರಾಧನೆಯ ಮೂಲಕ 'ನಮ್ಮ ದೇವರು ಪ್ರೀತಿಸುವ ದೇವರು, ಅವರು ಎಂದಿಗೂ ನಮ್ಮ ಕೈ ಬಿಡುವುದಿಲ್ಲ' ಎಂಬ ಸ್ಪಷ್ಟ ಸಂದೇಶ ಸರ್ವರಿಗೂ ಸಿಕ್ಕಿತು. ರಾಜಿ ಸಂಧಾನದ ಈ ವರ್ಷದಲ್ಲಿ ನಾವು ನಮ್ಮಲ್ಲಿ, ದೇವರಲ್ಲಿ, ಪರಸ್ಪರರಲ್ಲಿ ಹಾಗೂ ಪರಿಸರದೊಂದಿಗೆ ಸಂಧಾನ ಮಾಡಿ, ಪರಸ್ಪರ ಪ್ರೀತಿ, ಸಹನೆ, ಕ್ಷಮೆ ಮತ್ತು ಸಹಬಾಳ್ವೆಯ ಜೀವನ ನಡೆಸಲು ಪ್ರೇರಣೆ ಈ ಸಮ್ಮೇಳನದಲ್ಲಿ ಸಿಕ್ಕಿತು. ಆಂತರೀಕ ಸೌಖ್ಯದ ಆರಾಧನೆಯ ಮೂಲಕ ಪ್ರಭುವಿನ ಸ್ಪರ್ಶವನ್ನು ಪಡೆದು ನವಜೀವಿಗಳಾಗಿ ಬಾಳಲು ದೇವರು ಕರೆ ನೀಡಿದ್ದಾರೆ ಎಂಬುದು ಶಿಬಿರಾರ್ಥಿಗಳಿಗೆ ಮನದಟ್ಟಾಗಿದೆ.

ಈ ಒಂದು ಸುವರ್ಣ ಅವಕಾಶ ಕಲ್ಪಿಸಿ ಕೊಟ್ಟ 'Rise Above' 'ಪ್ರಜ್ವಲಿಸು' ಕಾರ್ಯಕ್ರಮದ ಬೆನ್ನೆಲುಬಾಗಿ ಎಲ್ಲವನ್ನು ಯುವಮಿತ್ರರಿಗಾಗಿ, ಯುವಮಿತ್ರರ ಏಳಿಗೆಗಾಗಿ ಆಯೋಜಿಸಿದ ವಂದನೀಯ ಫಾದರ್ ಪಿಯುಸ್ ಡಿಸೋಜರವರಿಗೆ ಮನದಾಳದ ನಮನಗಳು ಹಾಗೂ ವಂದನೆಗಳು.

**ಸಿಸ್ಟರ್. ಮೇಬಲ್ ಡಿ'ಸಿಲ್ವ (ಎಸ್.ಸಿ.ಬಿ)**

# ಯಾಜಕ ಬಳಗದಿಂದ ಪ್ರಜ್ವಲಿಸಿದ ಅನುಭವ

## ಎಳೆಯರ ಮನಸ್ಸಾಕ್ಷಿಗಳನ್ನು ನೈಜತೆಯಲ್ಲಿ ರೂಪಿಸಿದ 'ಪ್ರಜ್ವಲಿಸು'



"ಬೆಳೆಯುವ ಪೈರು ಮೊಳಕೆಯಲ್ಲೇ" ಎಂಬ ಪ್ರಖ್ಯಾತ ನಾಣ್ಣುಡಿಯಂತೆ, ಎಳೆಯರ ಏಳ್ಗೆ ನಿಂತಿರುವುದು, ಬೆಳೆಯುವ ವಯಸ್ಸಿನಲ್ಲಿ. ಅವರ ಮನಸ್ಸುಗಳ ಮನಸ್ಸಾಕ್ಷಿಗಳನ್ನು ನೈಜತೆಯಲ್ಲಿ ರೂಪಿಸುವುದರಲ್ಲಿ ಅಡಗಿದೆ. ಆಧುನಿಕ ಥಳಕು ಬಳುಕಿನ ಯುಗದಲ್ಲಿ ಎಳೆಯರ ಎಳೆಯ ಮನಸ್ಸುಗಳು ತರಗೆಲೆಯಂತೆ ಹಾರುತ್ತಿರುವುದು, ಊಹೆಗೆ ನಿಲುಕದ ರೀತಿಯಲ್ಲಿ ಮೌನ – ಖಿನ್ನತೆಗೆ ಒಳಗಾಗುತ್ತಿರುವುದು ಸತ್ಯ ಸಂಗತಿ.

ಈ ನಿಟ್ಟಿನಲ್ಲಿ `RISE ABOVE' – 'ಪ್ರಜ್ವಲಿಸು' ಎಂಬ ಕಾರ್ಯಕ್ರಮವನ್ನು ಹುಟ್ಟು ಹಾಕಿ, ಎಲ್ಲಾ ಎಳೆಯರ ಎಳೆಯ ಮನಸ್ಸಿನಲ್ಲಿ ಹೊಯ್ದಾಡುತ್ತಿದ್ದ ದುಗುಡಗಳನ್ನು ಹೊರಹಾಕಲು ಮಾಡಿದ ಪ್ರಯತ್ನ ಅತ್ಯಂತ ಶ್ಲಾಘನೀಯ. ಫಾದರ್ ಪಿಯುಸ್ ಡಿಸೋಜರವರ ಈ ಪರಿಕಲ್ಪನೆ ಅಭಿನಂದನಾರ್ಹ. ನನಗೆ ತಿಳಿದಂತೆ ಈ ಕಾರ್ಯಕ್ರಮವನ್ನು ನಡೆಸುವುದು ಅಷ್ಟು ಸುಲಭವಲ್ಲ. ಸುಮಾರು 450 ಮಂದಿ ಯುವಜನರ ದೊಡ್ಡ ಮಂದೆಯನ್ನು 3–4 ದಿನಗಳ ಕಾಲ ಇರಿಸಿ ತಕ್ಕ ವ್ಯವಸ್ಥೆಯನ್ನು ಮಾಡುವುದು ಬಲು ಕಷ್ಟ.

ಈ ಕಾರ್ಯಕ್ರಮದ ಮೂಲಕ ಬಹಳಷ್ಟು ಯುವಮನಗಳಿಗೆ ಒಳ್ಳೆಯದಾಗಿದೆ. ಈಗ ಅವರ ನಡತೆಯಲ್ಲೇ ಇದು ವ್ಯಕ್ತವಾಗುತ್ತದೆ. ಮೊದಲಿದ್ದ ಕ್ಲೇಶ ದೂರ ಹೋಗಿ, ಲವಲವಿಕೆ ಮನೆ ಮಾಡಿದೆ. ಸಕಾರಾತ್ಮಕ ಮನೋಭಾವ ತುಂಬಿ, ಹೊಸ ಉಲ್ಲಾಸ ಜಿನುಗುತ್ತಿದೆ.

ಮನಸ್ಸುಗಳನ್ನು ನೈಜತೆಯೆಡೆಗೆ ರೂಪಿಸುವ ಇಂಥಹ ಕಾರ್ಯಕ್ರಮಗಳು ಇನ್ನೂ ಹೆಚ್ಚು ಹೆಚ್ಚಾಗಿ ಮೂಡಿ ಬರಲಿ ಎಂಬುದೇ ನನ್ನ ಹಾರೈಕೆ.

**ಫಾದರ್ ಸ್ಟ್ಯಾನಿ ಡಿಸೋಜ, ಭದ್ರಾವತಿ**

# RISE ABOVE - A Unique Workshop



Dear Fr. Pius D'Souza,

RISE ABOVE - a unique workshop, if it could be so defined, was well conceived, thought of, organised and executed at the apposite time and atmosphere. At the outset please permit me felicitate you heartily.

I am excited to learn that more than 450 youth participated in this program. It is a record in the history of this Diocese.

I am sure, from the feedback that I received from the participants, that it has really raised them above both spiritually and materially. What more do we need than this?.

I am sure that a considerable percentage of the participants will accomplish our expectation.

From my Parish alone, 38 youth participated in the retreat. I find a significant transformation in their attitude and disposition.

KUDOS to you, Fr. Pius.

May the Almighty grant you vision and understanding to identify the social evils that are destructive to our youth and grant you strength, courage and inspiration to conduct many more such retreats. I assure all my cooperation and support to you.

**Very Rev. Fr. Gilbert Lobo,**
**Parish Priest, Sacred Heart Cathedral,**
**Dean of Carmel Deanry, Shimoga**

## ಯುವ ಚೇತನಗಳ ಜೀವನಕ್ಕೆ ಶಿಕ್ಷಣವಾದ 'ಪ್ರಜ್ವಲಿಸು'



ಹರಿಹರ ಆರೋಗ್ಯ ಮಾತೆಯ ಪುಣ್ಯಕ್ಷೇತ್ರದಲ್ಲಿ ನಡೆದಂತಹ 'ಪ್ರಜ್ವಲಿಸು' ಧ್ಯಾನಕೂಟವು ಒಂದು ವಿಶಿಷ್ಟವಾದ ಅನುಭವವನ್ನು ತಂದುಕೊಟ್ಟಿದೆ. ಎಷ್ಟೊಂದು ಯುವಜನರು ಒಟ್ಟಾಗಿ ಸೇರಿ ಈ ಪುಣ್ಯಸ್ಥಳದಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ಜೀವನಕ್ಕೆ ಅವಶ್ಯವಾದಂತ ಅಂಶಗಳನ್ನು ಪಡೆದುಕೊಂಡಿರುವುದು ನಿಜಕ್ಕೂ ನಮ್ಮ ಸೌಭಾಗ್ಯ. ಎರಡು ರೀತಿಯ ಶಿಕ್ಷಣಗಳನ್ನು ನಾವು ನೋಡುತ್ತೇವೆ. ಮೊದಲನೆಯದಾಗಿ ನಮ್ಮ ಜೀವನಕ್ಕಾಗಿ ಇರುವಂತಹ ಶಿಕ್ಷಣ ಹಾಗೂ ನಮ್ಮ ಬದುಕಿಗಾಗಿ ಇರುವಂತಹ ಶಿಕ್ಷಣ. ಬದುಕಿಗಾಗಿ ಇರುವಂತಹ ಶಿಕ್ಷಣವನ್ನು ನಮ್ಮ ಯುವಜನತೆ ಬಹಳ ಆಸೆ ಮತ್ತು ಆಸಕ್ತಿಯಿಂದ ಓದಿ ಜಾಣ್ಮೆಯನ್ನು ಸಂಪಾದಿಸಿಕೊಳ್ಳುತ್ತಾರೆ. ಆದರೆ ಜೀವನಕ್ಕಾಗಿ ಇರುವಂತಹ ಶಿಕ್ಷಣವನ್ನು ಪಡೆದುಕೊಳ್ಳದೇ, ಮೌಲ್ಯವನ್ನು ಕಳೆದುಕೊಂಡು ಬದುಕು ಒಂದು ಅರ್ಥಹೀನ ಜೀವನವನ್ನಾಗಿ ಜೀವಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಪ್ರಜ್ವಲಿಸು ಧ್ಯಾನಕೂಟವು ಈ ಯುವಚೇತನಗಳ ಜೀವನಕ್ಕಾಗಿ ಶಿಕ್ಷಣವನ್ನು ನೀಡುವಂತಹ ಅದ್ಭುತ ಕಾರ್ಯಕ್ರಮವಾಗಿ ಮೂಡಿಬಂದಿದೆ.

ಬಂದಿರುವ ಯುವಜನರೆಲ್ಲರೂ ಒಂದು ರೀತಿ ತಮ್ಮ ಅನುಭವವನ್ನು ನನ್ನಲ್ಲಿ ಹಂಚಿಕೊಳ್ಳುತ್ತಿರುವಾಗ, ಇದು ಒಂದು ವಿಶಿಷ್ಟವಾದಂತಹ ದಾರಿಯನ್ನು ತೋರ್ಪಡಿಸಿದೆ. ನಾವು ಜೀವನದಲ್ಲಿ ಸೋಲುಗಳನ್ನು ಎದುರಿಸಲು ಶಕ್ತಿಯನ್ನು ನೀಡಿದೆ. ನಾವು ಬದುಕಿನಲ್ಲಿ ಏನನ್ನು ಕಳೆದುಕೊಳ್ಳದೇ ಎಲ್ಲವನ್ನು ಪಡೆದುಕೊಳ್ಳಲು ಸಾಧ್ಯ. ಆದರೆ ಕಷ್ಟದ ಬದುಕಿದ್ದಾಗಲೂ ಕೂಡ ಸ್ಥೈರಣೆಯಿಂದ ಹೆಜ್ಜೆ ಇಡಬೇಕು ಎನ್ನುವಂತಹ ಅಂಶವನ್ನು ಈ ಕಾರ್ಯಕ್ರಮದಿಂದ ಅರ್ಥಮಾಡಿಕೊಂಡಿದ್ದೇನೆ.

ನನ್ನ ವಿಷಯಕ್ಕೆ ಬರುವುದಾದರೆ ಈ ಒಂದು ಕಾರ್ಯಕ್ರಮ ವಿಶೇಷವಾದ ಅನುಭವವನ್ನು ನೀಡಿದೆ. ಇಷ್ಟೊಂದು ಯುವಜನರನ್ನು ಒಟ್ಟಾಗಿ ಸೇರಿಸಿ ಎಲ್ಲರಿಗೂ ಕೂಡ ಅವಶ್ಯಕವಾದ ತರಬೇತಿಯನ್ನು ನೀಡಿ, ಅವರಿಗೆ ಆಧ್ಯಾತ್ಮಿಕವಾದ ಭೋಜನವನ್ನು ಬಡಿಸಿ ಅದೇ ರೀತಿಯಲ್ಲಿ ವಿವಿಧ ರೀತಿಯ ಕಾರ್ಯಕ್ರಮಗಳ ಮೂಲಕ ಅವರನ್ನು ಆಕರ್ಷಿಸಿ, ಈ ಕಾರ್ಯಕ್ರಮ ಯಶಸ್ವಿಯಾಗಲು ಕಾರ್ಯಕರ್ತರು ನಮ್ಮ ಧರ್ಮಕ್ಷೇತ್ರದ ಯುವ ನಿರ್ದೇಶಕರಾದ ವಂದನೀಯ ಸ್ವಾಮಿ ಪಿಯುಸ್ ಡಿ'ಸೋಜರವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಯುವಜನರು ಒಟ್ಟಾಗಿ ಸೇರಿ ಮಾಡಿದಂತಹ ಪ್ರತಿಯೊಂದು ಚಟುವಟಿಕೆಗಳಲ್ಲಿ

ಕೂಡ ನನಗೂ ಒಂದು ರೀತಿಯಲ್ಲಿ ಪ್ರೇರಣೆಯಾಗಿತ್ತು. ನಮ್ಮ ಯುವಜನರಿಗೆ ಇದೊಂದು ಸ್ಫೂರ್ತಿಯಾಗಲಿ ಅದೇ ರೀತಿಯಲ್ಲಿ ಎಲ್ಲರೂ ಒಟ್ಟಾಗಿ ಸೇರಿ ಸಮಾಜವನ್ನು ಕಟ್ಟೋಣ, ಧರ್ಮಸಭೆಯನ್ನು ನಿರ್ಮಿಸೋಣ. ನಮ್ಮ ಧರ್ಮಸಭೆಯ ಬೆನ್ನೆಲುಬು ಯುವಶಕ್ತಿಯಾಗಿದೆ ಎನ್ನುವುದನ್ನು ಮನಗಾಣಲು ಪ್ರಜ್ವಲಿಸು ಕಾರ್ಯಕ್ರಮ ತನ್ನದೇ ಆದಂತಹ ಕೊಡುಗೆಯನ್ನು ನೀಡಿದೆ ಎಂದು ನಾನು ಭಾವಿಸುತ್ತೇನೆ.

ಯುವಜನರೆಲ್ಲರೂ ಒಟ್ಟಾಗಿ ಸೇರಿ ಯಾವುದೇ ತೊಂದರೆ ತೊಡಕು ಇಲ್ಲದೆ ಈ ಕಾರ್ಯಕ್ರಮ ನಡೆದಿರಬೇಕಾದರೆ ಇದಕ್ಕಾಗಿ ಸಹಕರಿಸಿದ ಎಲ್ಲರನ್ನು ಸ್ಮರಿಸಿಕೊಳ್ಳಬೇಕು, ಸರ್ವರಿಗೂ ಶುಭವನ್ನು ಕೋರುತ್ತೇನೆ. ಯುವಶಕ್ತಿಯ ಸಹಾಯದಿಂದ ಶಿವಮೊಗ್ಗ ಧರ್ಮಕ್ಷೇತ್ರ ಇನ್ನು ಒಂದು ಹೆಚ್ಚಿನ ಅಭಿವೃದ್ಧಿಯನ್ನು ಹೊಂದುವ ಹಾಗೂ ಯುವಕರಲ್ಲಿ ಮನೋಸ್ಥೈರ್ಯವನ್ನು ತುಂಬುವಂತಹ ಧರ್ಮಕ್ಷೇತ್ರವಾಗಲಿ ಎಂದು ನಾನು ಭಾವಿಸುತ್ತೇನೆ. ಸರ್ವರಿಗೂ ಶುಭವಾಗಲಿ.

**ವಂ. ಡಾ॥ ಅಂತೋನಿ ಪೀಟರ್,**
**ಹರಿಹರ ಆರೋಗ್ಯ ಮಾತೆ ಕಿರು ಬಸಿಲಿಕ**

# I saw changes in young people



Rise Above psycho- spiritual retreat for youth is my first youth retreat. My experience on love of God is very special. I experience the divine presence during the retreat.

Some youth are attending residential retreat for the first time, staying away from the family. As I was given discipline in-charge it was difficult to manage them on the first day. Second day onwards I saw in them gradual changes in their behavior. Rise Above had very good resource team. Many youth were taken up by the experience and life testimony of the resource team. This was a unique retreat where we could see blend of psychology and spirituality. Couselling sessions by the experts made the youth to re-thing and renew their life. I suggest at least once in a year Yuvamitra can have organize such retreat for youth of Shimoga diocese.

**Dn. Vijay Kumar Kanikya, Shimoga**

# “ಪ್ರಜ್ವಲಿಸು” ಧ್ಯಾನದ ಬಗ್ಗೆ ನನ್ನ ಅನುಭವ



“ಪ್ರಜ್ವಲಿಸು” ಶಿವಮೊಗ್ಗ ಧರ್ಮಕ್ಷೇತ್ರದ ಯುವಜನರ ನವೀಕರಣ ಧ್ಯಾನಕೂಟ ನಿಜಕ್ಕೂ ಒಂದು ಅದ್ಭುತ ಹಾಗೂ ನವೀನ ಮಾದರಿಯ ಧ್ಯಾನಕೂಟ ಇದಾಗಿತ್ತು. ಧರ್ಮಕ್ಷೇತ್ರದ ಚೈತನ್ಯಭರಿತ ಯುವ ನಿರ್ದೇಶಕರಾದ ವಂ. ಸ್ವಾಮಿ ಪಿಯುಸ್ ಡಿಸೋಜರವರು “ಯುವಮಿತ್ರ”ದಿಂದ ಏರ್ಪಡಿಸಿರುವ ಈ ಧ್ಯಾನಕೂಟವು ಹರಿಹರದ ಆರೋಗ್ಯಮಾತೆಯ ಬಸಿಲಿಕಾದ ರೆಕ್ಟರ್ ಆಗಿರುವ ವಂ. ಡಾ. ಅಂತೋನಿ ಪೀಟರ್‌ರವರ ಸಹಕಾರದಿಂದ ಯುವಜನರನ್ನು ವಿಶ್ವಾಸದಲ್ಲಿ ಹಾಗೂ ಕ್ರೈಸ್ತ ಜೀವನದಲ್ಲಿ ಹೊಸ ಹುಮ್ಮಸ್ಸನ್ನು ಬಿತ್ತುವಲ್ಲಿ ಯಶಸ್ವಿಯಾಗಿದೆ.

ಹರಿಹರ ಆರೋಗ್ಯಮಾತೆಯ ಬಸಿಲಿಕದಲ್ಲಿ ಏರ್ಪಡಿಸಿದ್ದ ಈ ನಾಲ್ಕು ದಿನದ ಬೈಬಲ್ ಬೋಧನೆಯ ಧ್ಯಾನಕೂಟವನ್ನು ಪ್ರಭು ಯೇಸು ಯಶಸ್ವಿಗೊಳಿಸಿದ್ದಾರೆ. ಕೇವಲ ಬೋಧನೆ ಆಲಿಸಲು ಮಾತ್ರವಲ್ಲಾ, ಬದಲಿಗೆ ವೈಯುಕ್ತಿಕ ಸಮಾಲೋಚನೆ ಪ್ರತಿಯೊಬ್ಬರಿಗೂ ಸಿಕ್ಕ ಅದ್ಭುತ ಅವಕಾಶ. ಯುವ ಜನರು ಮನಬಿಚ್ಚಿ ತಮ್ಮ ಸಮಸ್ಯೆಗಳನ್ನು ಹೇಳಿ ದೇವರ ವಾಕ್ಯದ ಆಧಾರದಲ್ಲಿ ಪರಿಹಾರ ಕಂಡುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಮನಮುಟ್ಟುವ ಬೋಧನೆಗಳು ದೇವರಿಗೆ ಮಹಿಮೆ ತರುವಂತಹ ಸ್ತುತಿ ಆರಾಧನೆಗಳು ದಿವ್ಯ ಬಲಿಪೂಜೆಗಳು ಮತ್ತು ಪರಮಪ್ರಸಾದದ ಆರಾಧನೆಗಳು ಯುವಜನರನ್ನು ಆಧ್ಯಾತ್ಮಿಕವಾಗಿ ಬಲಪಡಿಸಿದೆ. ಅದರಲ್ಲೂ ಪಾಪ ನಿವೇದನೆಯ ಮೂಲಕ ನವ ಜೀವನದೆಡೆಗೆ ಚಲಿಸಲು ಪ್ರೇರಣೆ ದೊರೆತಿದೆ.

ದೇವರ ವಾಕ್ಯದ ಬೋಧನೆಗೆ ಎಂದು ಹೋದ ನಾನು, ಪ್ರಜ್ವಲಿಸು ಧ್ಯಾನದಲ್ಲಿ ಪ್ರಭು ಯೇಸುವಿನ ವಿಶೇಷ ಪ್ರಸನ್ನತೆಯ ಅನುಭವ ಪಡೆದೆ. ಯುವಜನರ ಪಶ್ಚಾತ್ತಾಪದ ಪರಿವರ್ತನೆಯ ಕಣ್ಣೀರು ಇದಕ್ಕೆ ಸಾಕ್ಷಿಯಾಗಿದೆ. ನನ್ನನ್ನು ಭೇಟಿಯಾದ ಯುವ ಜನರು ಇಂಥಹಾ ಧ್ಯಾನಕೂಟಕ್ಕಾಗಿ ನಾವು ಕಾಯುತ್ತಿದ್ದೆವು, ಕೊನೆಗೂ ಯೇಸು ನಮಗೆ ಈ ಅವಕಾಶ ಮಾಡಿಕೊಟ್ಟರು. ಇನ್ನು ನಾವು ನಿರಾಸೆಗೆ, ಜಿಗುಪ್ಸೆಗೆ ಒಳಗಾಗದೆ ಧೈರ್ಯದ ಜೀವನ ಜೀವಿಸಲು ಪವಿತ್ರಾತ್ಮ ಪ್ರೇರಣೆ ದೊರಕಿದೆ. ದೇವರ ವಾಕ್ಯದ ಹಾಗೂ ಸಂಸ್ಕಾರಗಳ ಮಹತ್ವ ಹಾಗೂ ಸಿರಿವಂತಿಕೆ ಮನಗಂಡು ನಾವು ದೇವರ ವಾಕ್ಯಕ್ಕೆ ಮೊದಲ ಸ್ಥಾನ ನೀಡುತ್ತೇವೆ ಎಂಬ ಅವರ ನಿರ್ಧಾರ ಮೆಚ್ಚುವಂತದ್ದು. ನಾವೆಲ್ಲರೂ ಯುವಮಿತ್ರಕ್ಕೆ ಚಿರಋಣಿಗಳು. ಎಲ್ಲರನ್ನು ಜೊತೆಗೆ ತೆಗೆದುಕೊಂಡು ವ್ಯವಸ್ಥಿತವಾಗಿ ಈ ಸಮಾಲೋಚನಾ ಧ್ಯಾನಕೂಟ “ಪ್ರಜ್ವಲಿಸು” ಯಶಸ್ವಿಯಾಗಲು ಹಗಳಿರುಳು ಶ್ರಮಿಸಿದ ನನ್ನ ಸನ್ಮಿತ್ರ ಫಾದರ್ ಪಿಯುಸ್ ಡಿಸೋಜ ಹಾಗೂ ಸಹಕರಿಸಿದ ಎಲ್ಲರಿಗೂ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ವಂ। ಫ್ರಾಂಕ್ಲಿನ್ ಡಿಸೋಜ,**
**ಸ್ವರ್ಗಸ್ವೀಕೃತ ಮಾತೆ ದೇವಾಲಯ, ಹಿರಿಯೂರು**

# ಪ್ರಜ್ವಲಿಸು ಧ್ಯಾನ ಯುವಜನರಿಗೆ ದಾರಿ ದೀಪ



ಪ್ರಜ್ವಲಿಸು ಯುವಜನರಿಗಾಗಿ ಶಿವಮೊಗ್ಗ ಧರ್ಮಕ್ಷೇತ್ರದ ಯುವಜನ ಆಯೋಗ ಆಯೋಜಿಸಿದ ವಿಶಿಷ್ಟ ಧ್ಯಾನಕೂಟ. ಈ ಧ್ಯಾನಕೂಟದಲ್ಲಿ ನಾನೂ ಒಬ್ಬ ಪ್ರಬೋಧಕನಾಗಿ ಯುವಜನರೊಂದಿಗೆ ಕಳೆದ ಕ್ಷಣಗಳು ಅವಿಸ್ಮರಣೀಯ. ಇಂದಿನ ಯುವಜನರು ಹೊರಗಡೆ ISI ಮಾರ್ಕ್ ಹೊಂದಿದ ಕಬ್ಬಿಣದಂತೆ ಕಂಡುಬಂದರೂ ಒಳಗಿನಿಂದ ಗ್ರಾಫೈಟ್ ತರ ಬಹಳ ಮೃದುವಾಗಿರುತ್ತಾರೆ ಅನ್ನುವುದು ಸತ್ಯ.

ಸಮಸ್ಯೆಗಳ ಸುಳಿಯಲ್ಲಿ ಸಿಲುಕಿಕೊಂಡು ಅಲ್ಲಿಂದ ಹೊರಬರಲು ಆಗದೆ ಬಳಲುತ್ತಿರುವವರು ಅನೇಕರು. ತಮ್ಮ ಮಾನಸಿಕ ನೋವುಗಳನ್ನು status ಮುಖಾಂತರ ಬಹಿರಂಗಪಡಿಸುತ್ತಾ ಮುಖಾಂತ ಕೂತು ಚರ್ಚಿಸುವ ಗೋಜಿಗೆ ಹೋಗದೆ ಜೀವನವನ್ನು ನಾಶ ಮಾಡುತ್ತಿರುವ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಈ ಧ್ಯಾನಕೂಟ ಅನೇಕ ಯುವಜನರಿಗೆ ಒಂದು ಮಾರ್ಗದರ್ಶನ ದೀಪವಾಯಿತು ಎಂದರೆ ತಪ್ಪಾಗಲಾರದು. ಧ್ಯಾನಕೂಟದಲ್ಲಿ ಅವರು ಭಾಗವಹಿಸಿದ ರೀತಿ, ಪಾಪ ನಿವೇದನೆಯಲ್ಲಿ ಅವರ ಭಾಗವಹಿಸುವಿಕೆ, ದೇವರ ವಾಕ್ಯದ ದಾಹ ಯುವಜನರಿಗೆ ಇದೆ ಎನ್ನುವುದು ಪ್ರಕಟವಾಯಿತು.

ಯುವಜನತೆ ಇಂತಹ ಧ್ಯಾನಕೂಟಗಳನ್ನು ಕೇಳದೆ ಇದ್ದರೂ ಅದನ್ನು ನೀಡುವುದು ನಮ್ಮೆಲ್ಲರ ಕರ್ತವ್ಯ. ಸರಿಸುಮಾರು 450ಕ್ಕೂ ಹೆಚ್ಚು ಜನ ಯುವಜನರು ಈ ಧ್ಯಾನದಲ್ಲಿ ಭಾಗವಹಿಸಿದರು ಎಂದರೆ ತಮ್ಮ ಮಕ್ಕಳ ಬಗ್ಗೆ ತಂದೆ ತಾಯಿಗಳಿಗೂ ಕಾಳಜಿ ಇದೆ ಎನ್ನುವುದು ಎದ್ದು ಕಾಣುತ್ತದೆ. ಮುಂದಿನ ದಿನಗಳಲ್ಲಿ ಯುವಜನರಿಗೆ ದಾರಿದೀಪವಾಗುವ ಇಂಥಹ ಕಾರ್ಯಕ್ರಮಗಳು ಹೆಚ್ಚಾಗಿ ನಡೆಯಲಿ ಅನ್ನುವುದೇ ನನ್ನ ಆಸೆ.

**ವಂ। ರೋಮನ್ ಪಿಂಟೊ,**
**ಲೂರ್ದುಮಾತೆ ದೇವಾಲಯ, ತೀರ್ಥಹಳ್ಳಿ**

**ಯುವಮಿತ್ರ ಶಿಕ್ಷಣವಾಣಿ ಹಾಗೂ ಯುವಮಿತ್ರ ಸಹಾಯವಾಣಿ**
**ಶಿಕ್ಷಣಕ್ಕೆ ಸಂಬಂಧಿಸಿದ ಮಾಹಿತಿಗಾಗಿ ಹಾಗೂ**
**ಯುವಮಿತ್ರರ ನೆರವಿಗಾಗಿ ಸಹಾಯ ವಾಣಿಯನ್ನು ಸಂಪರ್ಕಿಸಿ**
**6364222019**

## ಯುವ ಜನರನ್ನು ಹೊಸ ದಿಕ್ಕಿನತ್ತ ಮುನ್ನಡೆಸಿದ "ರೈಸ್ ಅಬವ್".....



ಅಕ್ಟೋಬರ್ 6ರ ಸಂಜೆ ಹಾಗೂ ಅಕ್ಟೋಬರ್ 7ರ ಬೆಳಿಗ್ಗೆ "ರೈಸ್ ಅಬವ್" ಯುವಜನರ ಆಧ್ಯಾತ್ಮಿಕ ನವೀಕರಣ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸೌಭಾಗ್ಯ ನನಗೆ ಸಿಕ್ಕಿತು. ನಮ್ಮ ಧರ್ಮಕ್ಷೇತ್ರದಲ್ಲಿ ಯುವಜನರ ಧ್ಯಾನಕೂಟದಲ್ಲಿ ಅಭೂತಪೂರ್ವ ಸಂಖ್ಯೆಯಲ್ಲಿ ಯುವಜನರು ಭಾಗವಹಿಸಿದ್ದು ಇದೇ ಪ್ರಥಮ. ಯುವಜನರಿಗೆ ಗಾಢ ದೈವಾನುಭವ ನೀಡಲು ಧ್ವನಿ–ಬೆಳಕಿನ ವಿಭಿನ್ನ ಶೈಲಿಯ "ಯೇಸು ನಮನ", ಗುರುಗಳ ತಂಡದಿಂದ ವಿಶೇಷ "ಸ್ತುತಿ ಆರಾಧನಾ ಸಂಜೆ" ಮುಂತಾದವುಗಳನ್ನು ಆಯೋಜಿಸಿದ್ದು ಇದೇ ಪ್ರಥಮ. ಪ್ರತಿಯೊಬ್ಬ ಧ್ಯಾನಾರ್ಥಿಗೂ ಆಪ್ತ ಸಮಾಲೋಚನೆಗೆ ಅವಕಾಶ ನೀಡಿದ್ದು ಇದೇ ಪ್ರಥಮ. ಯುವಜನರಿಂದ ಕ್ರಿಸ್ತಾನುಭವದ ಸಾಕ್ಷಿಗಳು ಯುವಜನರ ಮನಸ್ಸಿನಾಳದಲ್ಲಿ ಅಚ್ಚಳಿಯದ ಪ್ರಭಾವ ಬೀರಿದ್ದು ಇದೇ ಪ್ರಥಮ. ಇಂತಹ ಅನೇಕ ಪ್ರಥಮಗಳಿಗೆ ಸಾಕ್ಷಿಯಾದ "ರೈಸ್ ಅಬವ್" ಆಯೋಜಿಸಿದ ಯುವಮಿತ್ರ ನಿರ್ದೇಶಕ ಫಾದರ್ ಪಿಯುಸ್ ಡಿಸೋಜಾ ಹಾಗೂ ಯುವಮಿತ್ರ ಅಧ್ಯಕ್ಷ ಪ್ರದೀಪ್ ಡಿಸಿಲ್ವಾ ಹಾಗೂ ಎಲ್ಲಾ ಡೆಸ್ಕೊ ಸದಸ್ಯರಿಗೆ ನನ್ನ ಅಂತರಾಳದ ನಮನಗಳು.

**ವಂ। ವೀನಸ್ ಪ್ರವೀಣ್ ಕುಲಾಸೊ, ಮಾವಿನಕೆರೆ**


## ಇದೊಂದು ಅದ್ಭುತ ಕಾರ್ಯಕ್ರಮ



ಯುವಜನ ಆಯೋಗದಿಂದ ಧರ್ಮಕ್ಷೇತ್ರ ಮಟ್ಟದಲ್ಲಿ ನಡೆಸಿದ "ಪ್ರಜ್ವಲಿಸು" ಕಾರ್ಯಕ್ರಮ ಅದ್ಭುತವಾಗಿ ಮೂಡಿಬಂದಿದೆ. ಪ್ರತೀ ಧರ್ಮಕೇಂದ್ರದಿಂದ ಯುವಜನರು ಅತ್ಯುತ್ತಮ ಸಂಖ್ಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಆಧ್ಯಾತ್ಮಿಕವಾಗಿ, ಮನೋವೈಜ್ಞಾನಿಕವಾಗಿ ಪ್ರಯೋಜನವನ್ನು ಪಡೆದಿದ್ದಾರೆ. ವಿವಿಧ ರಂಗಗಳಲ್ಲಿ ನುರಿತ ವ್ಯಕ್ತಿಗಳ ಅನುಭವ ಹಂಚಿಕೊಳ್ಳುವಿಕೆ ಅನೇಕ ರೀತಿಯಲ್ಲಿ ಯುವಜನರಿಗೆ ಮಾಗದರ್ಶನ ನೀಡಿದೆ. ಈ ಕಾರ್ಯಕ್ರಮದಲ್ಲಿ ಎಲ್ಲ ಧರ್ಮಕೇಂದ್ರಗಳ ಗುರುಗಳ ಪ್ರಸನ್ನತೆ, ಅವರು ನಡೆಸಿಕೊಟ್ಟ ಕಾರ್ಯಕ್ರಮಗಳು ಯುವ ಜನತೆಯ ಮೇಲೆ ಅವರ ಅಪಾರ ಕಾಳಜಿಯನ್ನು ವ್ಯಕ್ತಪಡಿಸುತ್ತಿತ್ತು. ಈ ಕಾರ್ಯಕ್ರಮದಲ್ಲಿ ಯುವಜನತೆಯ ಶಿಸ್ತುಬದ್ಧತೆ, ಎಲ್ಲವನ್ನು ಅಣಿಗೊಳಿಸಲು ತೆಗೆದುಕೊಂಡ ನಾಯಕತ್ವ ಪ್ರಶಂಸನೀಯವಾಗಿದೆ. ಆರಾಧನಾ ವಿಧಿಗಳಲ್ಲಿ ಭಕ್ತಿಪೂರ್ವಕವಾಗಿ ಭಾಗವಹಿಸಿ, ಸಂಸ್ಕಾರಗಳ ಸದುಪಯೋಗ ಪಡೆದುಕೊಂಡಿದ್ದಾರೆ. ಇಂತಹ ಅನೇಕ ಕಾರ್ಯಕ್ರಮಗಳು ಯುವಜನತೆಗೆ ಸ್ಫೂರ್ತಿ ನೀಡಲು ಹಾಗೂ ಅವರನ್ನು ಹುರಿದುಂಬಿಸಲು ರೂಪಿತಗೊಳ್ಳಲಿ ಎಂದು ಆಶಿಸುತ್ತಾ ಇದರ ಯಶಸ್ಸಿಗಾಗಿ ಶ್ರಮಿಸಿದ ಎಲ್ಲರಿಗೂ ವಂದಿಸುತ್ತೇನೆ.

**– ಫಾದರ್ ಅಭಿಷೇಕ್ ಜೋಸೆಫ್ MSFS, ಹರಿಹರ**

# “ಪ್ರಜ್ವಲಿಸಿ ಬಾಳು ಬೆಳಗಿತು” ಎಂದು ಆಲಿಸದ ಅನುಭವ




ಶಿವಮೊಗ್ಗ ಧರ್ಮಕ್ಷೇತ್ರದ ಯುವಮಿತ್ರ ಕುಟುಂಬ “ನನ್ನ ಬಾಳ ಕತ್ತಲೆಯಲ್ಲಿ ಬೆಳಕ ತೋರಿದೆ, ಹೃದಯದ ಭೀತಿ ಓಡಿಸಿ ಧೈರ್ಯ ತುಂಬಿದೆ, ಸಂಶಯ ಕಿತ್ತು ದೃಢಚಿತ್ತವ ನೀಡಿದೆ. ನಿರಾಶೆಯ ಬದುಕಿಗೆ ಹೊಸ ಸ್ಫೂರ್ತಿಯನ್ನು ತುಂಬಿದೆ”. ನಾನು ನಮ್ಮ ಯುವಜನರಲ್ಲಿ ಈ ಮಾತನ್ನು ಆಲಿಸಿದಾಗ ಅವರ ಧ್ವನಿಯಲ್ಲಿ ಏನೋ ಗೆದ್ದಂತಾ ಧೃಢತೆ ಅವರಲ್ಲಿತ್ತು. ಅದನ್ನು ಆಲಿಸಿ ತುಂಬಾ ಸಂತೋಷವಾಯಿತು. ಜೀವನದಲ್ಲಿ ಜಿಗುಪ್ಸೆಗೊಂಡು, ಚೈತನ್ಯವನ್ನು ಕಳೆದುಕೊಂಡು, ಬಾಳನ್ನೇ ನಾಶಮಾಡಿಕೊಳ್ಳುವ ಹಂತಕ್ಕೆ ಬಂದಿದ್ದೇನೆ ಎಂದು ಕೆಲವರು ನನ್ನಲ್ಲಿ ತಮ್ಮ ಅನುಭವವನ್ನು ಹಂಚಿಕೊಂಡಾಗ ಅತೀವ ದುಃಖವಾಗಿತ್ತು, ಆದರೆ ಅದೇ ಯುವಜನರು “ಪ್ರಜ್ವಲಿಸು” ಈ ವಿಶೇಷ ಧ್ಯಾನಕೂಟದಲ್ಲಿ ಭಾಗವಹಿಸಿದ ನಂತರ ನಾವು ಈಗ ಎಲ್ಲಿಹೋದರೂ ಪ್ರಜ್ವಲಿಸುತ್ತೇವೆ ಎಂದಾಗ ಅವರಿಗಿಂತ ಹೆಚ್ಚು ಸಂತೋಷ ನನಗಾಯಿತು. ಇದು ಖಂಡಿತವಾಗಿ ಅವರಿಂದ ಸಾಧ್ಯವಾದುದ್ದಲ್ಲಾ ಬದಲಾಗಿ ಅವರ ನೋವನ್ನು ಆಲಿಸಿ, ಬಾಳನ್ನೇ ಬದಲಿಸಿದ ಪ್ರಭು ಯೇಸುವಿನ ಶಕ್ತಿಯಿಂದ ಸಾಧ್ಯವಾಯಿತು. ಅವರ ನಾಮಕ್ಕೆ ಸರ್ವ ಮಹಿಮೆ ಸಲ್ಲಲಿ.

“ಪ್ರಜ್ವಲಿಸು” ಧ್ಯಾನಕೂಟವನ್ನು ಆಯೋಜಿಸಿ, ಉತ್ತಮ ಯಶಸ್ಸನ್ನು ಕಾಣಲು ಹಗಲಿರುಳು ಶ್ರಮಿಸಿದ ವಂ. ಫಾ॥ ಪಿಯುಸ್ ಡಿಸೋಜ, ಸಿಸ್ಟರ್ ಹೆಲನ್ ಮೋರಸ್, ಡೆಕ್ಸ್‌ಕೊ ಸದಸ್ಯರು, ಮಧ್ಯಸ್ಥಿಕೆ ಪ್ರಾರ್ಥನಾ ತಂಡ, ಸಂಪನ್ಮೂಲ ತಂಡದವರನ್ನು ಹಾಗೂ ಎಲ್ಲರನ್ನು ಅಭಿನಂದಿಸುತ್ತೇನೆ. ಸರ್ವಶಕ್ತ ದೇವರ ಶಕ್ತಿ ಇವರನ್ನು ಇನ್ನೂ ಹೆಚ್ಚು ಇಂತಹ ಕಾರ್ಯವನ್ನು ಮಾಡಲು ಸ್ಫೂರ್ತಿ ನೀಡಲಿ ಎಂದು ಹಾರೈಸುತ್ತೇನೆ.

**ಸಹೋ. ನಿಶಾಂತ್ ಡಿಕಾಸ್ಟಾ**
**ಜ್ಞಾನದೀಪ ವಿದ್ಯಾಪೀಠ, ಸೆಮಿನರಿ ಪೂನಾ**

## 'ಪ್ರಜ್ವಲಿಸು' ಪಕ್ಷಿನೋಟ

## ಯುವ ಜನರಿಗಾಗಿ ಮನೋ-ಆಧ್ಯಾತ್ಮಿಕ ನವೀಕರಣ ಧ್ಯಾನಕೂಟ



ಯುವಮಿತ್ರ, ಯುವಜನ ಆಯೋಗ, ಶಿವಮೊಗ್ಗ ಧರ್ಮಕ್ಷೇತ್ರದಿಂದ ಹರಿಹರ ಆರೋಗ್ಯ ಮಾತೆಯ ಪುಣ್ಯ ಕ್ಷೇತ್ರದಲ್ಲಿ ಶಿವಮೊಗ್ಗ ಧರ್ಮಕ್ಷೇತ್ರದ ಇತಿಹಾಸದಲ್ಲಿಯೇ ಮೊಟ್ಟಮೊದಲ ಬಾರಿಗೆ "ಪ್ರಜ್ವಲಿಸು" (Rise above) ಎಂಬ ವಿಶೇಷ ಧ್ಯಾನ ಕೂಟವನ್ನು ಯುವಜನರಿಗಾಗಿಯೇ ಆಯೋಜಿಸಿತ್ತು. ಈ ಧ್ಯಾನಕೂಟದ ಪಯಣವು ದಿನಾಂಕ: 05/10/2019 ರಂದು ಮಧ್ಯಾಹ್ನ 1-30ಕ್ಕೆ ಪ್ರಾರಂಭವಾಯಿತು. ಸುಮಾರು 450ಕ್ಕೂ ಹೆಚ್ಚು ಯುವ ಮನಸ್ಸುಗಳು ಸೇರಿದ್ದ ಈ ಧ್ಯಾನಕ್ಕೆ ಅನೇಕ ದಿನಗಳಿಂದ ಹಗಲಿರುಳೆನ್ನದೆ ಪ್ರಾರ್ಥಿಸಿದ 8 ಜನರ ತಂಡದ ಪ್ರಾರ್ಥನೆಗೆ ಫಲ ಸಿಕ್ಕಿತು. ನೋಂದಾವಣೆ ಮುಗಿದ ನಂತರ ನಮ್ಮ ಪ್ರೀತಿಯ ಧರ್ಮಾಧ್ಯಕ್ಷರಾದ ಅತೀ ವಂದನೀಯ ಡಾ|| ಫ್ರಾನ್ಸಿಸ್ ಸೆರಾವೋರವರು ಹರಿಹರ ಆರೋಗ್ಯ ಮಾತೆಯ ಪುಣ್ಯಕ್ಷೇತ್ರದಲ್ಲಿ ಯುವಜನರಿಗಾಗಿ ಬಲಿಪೂಜೆಯನ್ನು ಅರ್ಪಿಸಿ, ಪುಣ್ಯಕ್ಷೇತ್ರದ ಮುಂದೆ ತಯಾರಿಸಿದ ಬೃಹದಾಕಾರದ ಜಪಸರವನ್ನು ಬಾನಂಗಳಕ್ಕೆ ಹಾರಿಬಿಡುವುದರ ಮೂಲಕ ಧ್ಯಾನಕೂಟಕ್ಕೆ ಅಧಿಕೃತವಾಗಿ ಚಾಲನೆ ನೀಡಿ ಯುವ ಸಮೂಹವನ್ನುದ್ದೇಶಿಸಿ ತಮ್ಮ ಸೊಗಸಾದ ನುಡಿಗಳಿಂದ ಪ್ರೋತ್ಸಾಹಿಸಿ ನಿಮ್ಮೊಂದಿಗೆ ನಾನಿದ್ದೇನೆ ಎಂದು ಹುರಿದುಂಬಿಸಿದರು.

ದ್ವಿತೀಯ ದಿನ ಯುವ ಸಮೂಹವನ್ನುದ್ದೇಶಿಸಿ ಯುವಮಿತ್ರ, ಯುವಜನ ಆಯೋಗ, ಶಿವಮೊಗ್ಗ ಧರ್ಮಕ್ಷೇತ್ರದ ನಿರ್ದೇಶಕರಾದ ವಂ. ಪಿಯುಸ್ ಡಿಸೋಜ ಹಾಗೂ ಭಗಿನಿ ಸೆವೆರಿನ್ ಮಿನೇಜಸ್‌ರವರು ಮಾತನಾಡಿದರು. ಅಲ್ಲಿ ಬಂದ ಅನೇಕ ಯುವಮನಸ್ಸುಗಳು ಈ ಒಂದು ಕಾರ್ಯಕ್ರಮಕ್ಕೆ ಗಮ್ಮತ್ತು ಮಾಡಲು ಅಥವಾ ಇನ್ನೇನೋ ಮಾಡಿ ಸಮಯ ಕಳೆಯಲು ಬಂದಿದ್ದರು. ಆದರೆ, ಇವರಿಬ್ಬರ ಮಾತುಗಳನ್ನು ಕೇಳಿದ ನಂತರ ಈ ಧ್ಯಾನವು ವಿಶೇಷವಾಗಿದೆ. ಇದರಲ್ಲಿ ನಾವು ಸಂಪೂರ್ಣವಾಗಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕೆಂದುಕೊಂಡರು. ಯಶಾಯ(55.8)ನ ಗ್ರಂಥದಲ್ಲಿ ಓದಿದ ಹಾಗೆ "ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳಂಥಲ್ಲ, ನನ್ನ ಮಾರ್ಗಗಳು ನಿಮ್ಮ ಮಾರ್ಗಗಳಂಥಲ್ಲ ಎಂದಿಹನು ಸರ್ವೇಶ್ವರ" "ದೇವರು ಯಾವಾಗಲೂ ಕಳೆದುಹೋದ ಒಂದು ಕುರಿಮರಿಯನ್ನು ಹುಡುಕುತ್ತಿರುವರು" ಎಂಬ ಈ ಮಾತುಗಳು ನೆರೆದಿದ್ದ

ಯುವ ಸಮೂಹಕ್ಕೆ ಸರಿಹೊಂದುವಂತೆ ಇತ್ತು. ಹಾಗೆಯೇ ದಿನಾಂತ್ಯದಲ್ಲಿ ಯುವ ಸಮೂಹವು ಆತ್ಮಾವಲೋಕನವನ್ನೂ ಮಾಡಿಕೊಂಡಿತು. ನಮ್ಮ ಪ್ರೀತಿಯ ವಂ.ಸ್ವಾಮಿ, ರೋಮನ್ ಪಿಂಟೋ, ವಂ.ಸ್ವಾಮಿ ಲಾರೆನ್ಸ್ ಡಿಸೋಜ, ಹಾಗೂ ವಂ.ಸ್ವಾಮಿ ವೆನಿಲ್ ಡಿಸಿಲ್ವರವರು ನಡೆಸಿಕೊಟ್ಟ ಸಂಜೆಯ "ಏಸುನಮನ" ಕಾರ್ಯಕ್ರಮವು ನೆರೆದಿದ್ದ ಯುವಸಮೂಹದ ಮನ ಗೆದ್ದಿತು.

ಮೂರನೇ ದಿನವೂ ಬಹಳ ಅರ್ಥಗರ್ಭಿತವಾಗಿತ್ತು. ಹಾದಿ ತಪ್ಪಿದ ಉತ್ತಮ ಜೀವನವನ್ನು ಹಾಗೂ ಮಾಡಿದ ಎಲ್ಲಾ ಪಾಪಗಳನ್ನೂ ನೆನಪಿಗೆ ತಂದುಕೊಳ್ಳುವಂತೆ ಯುವ ಸಮೂಹವನ್ನುದ್ದೇಶಿಸಿ ವಂ.ಸ್ವಾಮಿ ಫ್ರಾಂಕ್ಲಿನ್ ಡಿಸೋಜರವರು ಪ್ರೇರೇಪಿಸಿದರು. 17 ಜನ ಯಾಜಕರು ಈ ಪಾಪ ನಿವೇದನೆಯನ್ನು ನಡೆಸಿಕೊಟ್ಟರು. ಇಲ್ಲಿ ವಿಶೇಷವೆಂದರೆ ಧ್ಯಾನಕೂಟಕ್ಕೆ ಬಂದ ಯಾವೊಬ್ಬ ಯುವಕನೂ ಕೂಡಾ ಪಾಪ ನಿವೇದನೆಯನ್ನು ತಪ್ಪಿಸಿಕೊಳ್ಳದೇ ಮುಕ್ತ ಹೃದಯದಿಂದ ಪಾಪನಿವೇದನೆಯನ್ನು ಮಾಡಿದರು. ಹಾಗೆಯೇ ತಮ್ಮ ಪಾಪಗಳಿಗೆ ಕ್ಷಮೆಯನ್ನು ಯಾಚಿಸಿದರು. ಅಂದು ಸಂಜೆ ಶಿವಮೊಗ್ಗ ಧರ್ಮಕ್ಷೇತ್ರದ ಚಾನ್ಸಲರ್ ಆದ ಸದಾ ನಗುಮೊಗದ ವ್ಯಕ್ತಿ ವಂ.ಸ್ವಾಮಿ ಸ್ಟ್ಯಾನಿ ಡಿಸೋಜರವರು ಬಲಿಪೂಜೆಯನ್ನು ಅರ್ಪಿಸಿ ತಮ್ಮ ಅರ್ಥಗರ್ಭಿತ ಪ್ರಬೋಧನೆಯಿಂದ ಯುವಮನಸ್ಸುಗಳ ಹೃದಯಕ್ಕೆ ನಾಟುವಂತೆ ಮಾತನಾಡಿದರು. ತದನಂತರ ನಡೆದ ಆಂತರಿಕ ಸೌಖ್ಯ ಆರಾಧನೆಯು ಎಲ್ಲಾ ಯುವ ಸಮೂಹದ ಕಣ್ಣಂಚಿನಲಿ ಆನಂದ ಭಾಷ್ಪ ಹರಿಸುತ್ತಾ ತಮ್ಮ ಮುಂಬರುವ ಜೀವನಕ್ಕೆ ಒಂದು ಹೊಸ ಹಾದಿಯನ್ನು ತೆರೆಸಿತ್ತು. ಅನೇಕರು ಮುಕ್ತ ಕಂಠದಿಂದ ಈ ಆರಾಧನೆಯನ್ನು ಶ್ಲಾಘಿಸಿದರು. ತದನಂತರ ಯುವ ಸಮೂಹಕ್ಕೆ ಇನ್ನೊಂದು ವಿಶೇಷತೆ ಕಾದಿತ್ತು. ಧರ್ಮಕ್ಷೇತ್ರದಲ್ಲೇ ಮೊದಲೆನ್ನುವಂತೆ ವಂ. ಸ್ಟ್ಯಾನಿ ಡಿಸೊಜ, ವಂ. ಫ್ರಾನ್ಸಿಸ್ ಫೆರ್ನಾಂಡಿಸ್, ವಂ. ಆರೋಗ್ಯರಾಜ್, ವಂ. ಸಂತೋಷ್ ಪಿರೇರಾ, ವಂ. ಸಂತೋಷ್ ಅಲ್ಮೇಡಾ, ವಂ. ಸ್ಟೀಫನ್ ಆಲ್ಬುಕರ್ ಹಾಗೂ ಬ್ರ. ವಿನೂತ್‌ರವರು "ಯೇಸುವಿನೊಂದಿಗೆ ಪಾವನ ಸಂಜೆ" ಕಾರ್ಯಕ್ರಮದಲ್ಲಿ ತಮ್ಮ ಸುಮಧುರ ಕಂಠಗಳಿಂದ ಹಾಡಿ ಸುಶ್ರಾವ್ಯವಾದ ಸಂಗೀತದೊಂದಿಗೆ ಎಲ್ಲಾ ಯುವ ಮನಸ್ಸುಗಳನ್ನು ವಿಶೇಷ ಸಂಗೀತ ಲೋಕಕ್ಕೆ ಕೊಂಡೊಯ್ದರು ಎಂದರೆ ತಪ್ಪಾಗಲಾರದು. ಹಾಗೆಯೇ ವಿಶೇಷವಾಗಿ ಅಂಧ ದಂಪತಿಗಳಾದ ಶ್ರೀಯುತ ಜರ್ನಿಸ್ ಮತ್ತು ಶ್ರೀಮತಿ ಜಯಕೋಡಿರವರು ತಮ್ಮ ಸುಮಧುರ ಕಂಠದಿಂದ ದೇವರನ್ನು ಸ್ತುತಿಸಿ ಎಲ್ಲರ ಮನಗಳಲ್ಲಿ ಸ್ಥಾನ ಗಿಟ್ಟಿಸಿದರು.

ನಾಲ್ಕನೆಯ ದಿನವೂ ಆಂತರಿಕ ಪರಿವರ್ತನೆ ಹಾಗೂ ಧ್ಯಾನ ಕೂಟದ ಕೊನೆಯ ದಿನವಾಗಿತ್ತು. ಧ್ಯಾನಕೂಟಕ್ಕೆ ಬಂದ ಯುವ ಮನಸ್ಸುಗಳಲ್ಲಿ ಕಳೆದುಕೊಂಡ ಜೀವನಕ್ಕೆ ಕೊರಗದೇ ಮುಂದಿನ ಜೀವನಕ್ಕೆ ಆಂತರಿಕ ಸೌಖ್ಯ ಸಿಕ್ಕಿದೆ. ಹೊಸ

ಜೀವನಕ್ಕೆ ಕಿಚ್ಚು ಹತ್ತಿಸಿಕೊಂಡು ದೇವರಿಗೆ ಸಾಕ್ಷಿಯಾಗಿ ಬಾಳಲು ಶಪಥ ಮಾಡಿ ಅನೇಕರು ತಮ್ಮ ಅನುಭವಗಳನ್ನು ಹಂಚಿಕೊಂಡು ನಗುಮೊಗದಿಂದ ಧ್ಯಾನಕೂಟದ ಮುಕ್ತಾಯದ ಹಂತಕ್ಕೆ ತಲುಪಿದರು. ಶಿವಮೊಗ್ಗ ಧರ್ಮಕ್ಷೇತ್ರದ ಶ್ರೇಷ್ಠರಾದ ಅತೀ ವಂ. ಫೆಲಿಕ್ಸ್ ಜೋಸೆಫ್ ನೊರೋನ್ಹಾರವರು ಬಲಿಪೂಜೆಯನ್ನು ಅರ್ಪಿಸಿ ಯುವಜನತೆಗಾಗಿ ಪ್ರಾರ್ಥಿಸಿ, ಧ್ಯಾನಕೂಟವನ್ನು ಸಮಾಪ್ತಿಗೊಳಿಸಿದರು.

ಈ ನಾಲ್ಕೂ ದಿನಗಳಲ್ಲಿ ಸಲಹೆ-ಸಹಕಾರ ನೀಡಿದವರು ಹಲವರು. ಮುಖ್ಯವಾಗಿ ಸುಸಜ್ಜಿತ ಸ್ಥಳಾವಕಾಶ ನೀಡಿದ ಹರಿಹರ ಆರೋಗ್ಯ ಮಾತೆಯ ಪುಣ್ಯಕ್ಷೇತ್ರದ ಧರ್ಮಗುರುಗಳಾದ ವಂ. ಡಾ. ಅಂತೋನಿ ಪೀಟರ್ ಹಾಗೂ ಯಾವುದೇ ಸಮಯದಲ್ಲಿ ಏನೇ ಕೇಳಿದರೂ ಅಭ್ಯಂತರವಿಲ್ಲದೇ ಸಹಕಾರ ನೀಡಿದ ಸಹಾಯಕ ಗುರುಗಳಾದ ವಂ. ಅಭಿಷೇಕ್‌ರವರ ಕಾರ್ಯ ಶ್ಲಾಘನೀಯ. ಇವರ ಸಹಕಾರಕ್ಕೆ ಯುವಮಿತ್ರ ಯುವಜನ ಆಯೋಗ ಶಿವಮೊಗ್ಗ ಧರ್ಮಕ್ಷೇತ್ರ ಎಂದಿಗೂ ಚಿರಋಣಿ.

ಹಾಗೆಯೆ ನಾಲ್ಕೂ ದಿನಗಳಲ್ಲಿ ಹಗಲಿರುಳೆನ್ನದೆ ಶ್ರಮಿಸಿ ಧ್ಯಾನಕೂಟಕ್ಕೆ ತಮ್ಮನ್ನೇ ಸಮರ್ಪಿಸಿಕೊಂಡು ಧ್ಯಾನಕೂಟದ ಯಶಸ್ಸಿಗೆ ಕಾರಣರಾದ DEXCO ಸದಸ್ಯರ ಕಾರ್ಯ ಅಭೂತಪೂರ್ವವಾದುದು ಎಂದರೆ ತಪ್ಪಾಗಲಾರದು.

ಅನೇಕ ಯುವ ಮನಸ್ಸುಗಳಲ್ಲಿದ್ದ ಸಂದೇಹ-ಗೊಂದಲಗಳಿಗೆ ತೆರೆ ಹಾಕಿದ ದೂರದೂರಿನಿಂದ ಧ್ಯಾನಕೂಟಕ್ಕೆ ಆಗಮಿಸಿದ ಧರ್ಮ ಭಗಿನಿಯರು, ಸಹೋದರ-ಸಹೋದರಿಯರು ನೀಡಿದ ಸೇವೆ ಅಪಾರವಾದುದು. ಇವರನ್ನು ಯುವಮಿತ್ರ ಎಂದಿಗೂ ಸ್ಮರಿಸುತ್ತದೆ. ಈ ಧ್ಯಾನಕೂಟದ ಮುಖ್ಯ ರುವಾರಿ, ಪ್ರೀತಿಯ ನಿರ್ದೇಶಕರಾದ ವಂ. ಪಿಯುಸ್ ಡಿಸೋಜ ಹಾಗೂ ಯುವ ಜನ ಆಯೋಗದ ಮಹಿಳಾ ಸಚೇತಕಿಯರಾಗಿರುವ ಭಗಿನಿ ಹೆಲೆನ್ ಮೋರಾಸ್ ಹಾಗೂ ಭಗಿನಿ ಮೆಬಲ್ ಡಿಸಿಲ್ವಾ, ಯುವಜನ ಅಧ್ಯಕ್ಷರಾದ ಶ್ರೀಯುತ ಪ್ರದೀಪ್ ಡಿಸಿಲ್ವಾ ಹಾಗೂ ಯುವ ವಿಧ್ಯಾರ್ಥಿ ಸಂಚಲನದ ಅಧ್ಯಕ್ಷರಾದ ಕುಮಾರ. ವಿಕೀತ್ ಫೆರ್ನಾಂಡಿಸ್‌ರವರ ಮುಂದಾಳತ್ವದಲ್ಲಿ ಅನೇಕ ಜನರ ಸಲಹೆ ಸಹಕಾರ ಹಾಗೂ ಪ್ರಾರ್ಥನೆಯೊಂದಿಗೆ ಪ್ರಜ್ವಲಿಸು ಧ್ಯಾನಕೂಟವು ದೇವರ ಅನುಗ್ರಹದಿಂದ ಅನೇಕ ಯುವ ಮನಸ್ಸುಗಳ ಪರಿವರ್ತನೆಗೆ ಸಾಕ್ಷಿಯಾಗಿ ಅತ್ಯಂತ ಯಶಸ್ವಿಯಾಗಿ ಸಮಾರೋಪಗೊಂಡಿತು.

**ಶ್ರೀ. ಆಲ್ವಿನ್ ಡಿಸೋಜ, ಹೊಸನಗರ**

**ಕಾರ್ಮೆಲ್ ವಲಯದ ಯುವಜನ ಪ್ರತಿನಿಧಿ**

# ಸಂಪನ್ಮೂಲ ತಂಡದ 'ಪ್ರಜ್ವಲಿಸಿದ' ಅನುಭವ

## Foot Prints in the Sand...



Anyone who has the will and the courage to step forward, accept change and begin helping others transform themselves. "Rise Above" – A three day renewal retreat for the youth of Shimoga Diocese was like an ocean coming to a standstill point and seeing a miracle of the Lord our Rabboni…Master.

Hundreds of youth joining in chorus to praise the Lord is a miracle that took place in the diocese. Youth with various reasons came to the feet of the Lord. Some with emotional stress, few with physical ailment and others with family issues were together to be with the Lord. It was a life altering psycho-spiritual ministry for a heart to refresh, rejuvenate and revive with the Divine Springs flowing with so much love from the Divine Master. The week was God ordained and youth were hungry for Divine touch of the Master.

Youth came for retreat with a rationale of reconnecting on a deeper echelon with God be through Eucharist, Praise and Worship, spiritual talks, counseling and inner healing adoration. Youth were hungry for a change in their life. They were in search of their self and God. All those who came for counseling had only one question, "How can we be integrated to the Lord and hovel away that which is unconstructive in this conflict zone that they are in?" There was a great desire to serve the Master in some of them and wanted to find meaning in their life.

Counselling has helped most of them to make their life a fertile ground to make the seed of faith sprout in the land of the Lord. The footprints of Jesus are made visible in the lives of

every individual. May such spiritual empowerment continue to build our youth who are living in the chaotic world where culture of death and silence has taken the front seat. God bless Rev. Fr.Pius D'Souza the Youth Director for having arranged such spiritual animation for the youth of the diocese. God bless the youth who worked hard to make this event of mending the broken hearts and erasing the negative memory to make the youth POSITIVE and PROACTIVE.

**Dr. Sr. Severine Menezes** SAP
M.S.W, D.Coun, M.A, M.Phil, M.S, PGDHR, Ph.D
Contact No: 9480497405

**************************************************

## Led by the Holy Spirit...



I take this opportunity to thank Fr Pius D'Souza for inviting me as a facilitator for your youth retreat program at Harihar for more than 450 youth.

Further to touch upon my experience as a councillor. I have done counselling before for people with depression and for adults, however this experience with the youth was different. I counselled many youth over the three days and the Holy Spirit brought to mind the Holy Scriptures unique for each case. So many youth were having thoughts of suicide, so many had worries of future and could not focus on studies, many were distracted due to wrong relations, addictions to mobile, games, social media and even drugs etc,. It was heart breaking to see our precious youth so broken & empty - they all needed Jesus; He is the answer to all our needs. I

can only imagine how Jesus feels for these lost sheep & how broken he is to see them so lost. The Lord filled me with a deep sense of compassion as I spoke to each of them and with His Grace, led them into a deep contemplative prayer at the foot of the cross with Mother Mary by their side. Many experienced deliverance and tears of inner healing, few saw a light as they closed their eyes and felt a burden and darkness leave. The Lord was ministering to each as the child needed; I was but a small instrument. I was blessed to see them happy and with a certain sense of peace and clarity after counselling. There were youth that came back to me and shared their experience and gave thanks.


I thank God for having given me this opportunity to be of service to him. Unworthy as I am, He still uses me and fills me with His grace to do His work. I am blessed beyond words to be chosen by Jesus and to serve Him always.

I was helped by the Holy Spirit to speak just few key points about my conversion of heart to Jesus and how He had delivered me from depression and suicide. I sensed a powerful anointing and hence I know it was the Lord at work. 15 mins worked out just right and the youth were touched.

I am blessed beyond words to have had this opportunity and I will continue to pray for all these precious youth. I request you to lift me and my family in your prayers.

**Mrs. Pranali D. Mumbai**

# ಎಲ್ಲವೂ ಪ್ರಭುವೇ ನಡೆಸಿದರಿಂದ ಪ್ರಜ್ವಲಿಸಿದ ಅನುಭವ



Praise the Lord, ಅಕ್ಟೋಬರ್ ತಿಂಗಳಿನ 5ರಿಂದ 8ರವರೆಗೆ ಹರಿಹರ ಮಾತೆಯ ಪುಣ್ಯಕ್ಷೇತ್ರದಲ್ಲಿ ಮಾತೆಯ ಮಡಿಲಲ್ಲಿ ನಡೆದ ಪ್ರಜ್ವಲಿಸು ಧ್ಯಾನಕೂಟದಲ್ಲಿ 24x4 ಮಧ್ಯಸ್ಥಿಕೆಯಲ್ಲಿ ಆದ ಅನುಭವವನ್ನು ಹಂಚಿಕೊಳ್ಳಲು ಬಯಸುತ್ತೇನೆ.

ನನ್ನ ಜೀವನದಲ್ಲಿ ಹಗಲು ರಾತ್ರಿ ಮಧ್ಯಸ್ಥಿಕೆ ಪ್ರಾರ್ಥನೆಯಲ್ಲಿ ಭಾಗವಹಿಸಿದ್ದು ಇದೇ ಮೊದಲು. ಈ ಧ್ಯಾನದಲ್ಲಿ ನನ್ನ ಮತ್ತು ಯೇಸುವಿನ ಹತ್ತಿರದ ಸಂಬಂಧವನ್ನು ಅನುಭವಿಸಿದೆ. ಪಾಪಿಯಾದ ನನ್ನ ಪ್ರಾರ್ಥನೆಗೂ ಕಿವಿಗೊಡುತ್ತಾರಲ್ಲವೇ ಎಂದು ಸಂತೋಷಪಟ್ಟೆ. ವಿಶೇಷವಾಗಿ ರಾತ್ರಿಯ ಜಾಗರಣಾ ಪ್ರಾರ್ಥನೆಯಲ್ಲಿ ಪರಮಪ್ರಸಾದದಲ್ಲಿ ರೊಟ್ಟಿಯ ರೂಪದಲ್ಲಿ ಇದ್ದರೂ ಸಹ ನನಗದು ಕೇವಲ ರೊಟ್ಟಿಯೆಂದು ಅನಿಸಲಿಲ್ಲ, ಬದಲಾಗಿ ಯೇಸು ಸಿಂಹಾಸನರೂಢರಾಗಿ ಕುಳಿತು ನನ್ನನ್ನು ವೀಕ್ಷಿಸುತ್ತಾ ಇದ್ದಾರೆ, ನನ್ನ ಪ್ರಾರ್ಥನೆಯಲ್ಲಿ ಆಲಿಸುತ್ತಿದ್ದಾರೆ, ನಗುಮುಖದಿ ಕರುಣೆಯುಳ್ಳ ಕಣ್ಣುಗಳಿಂದ ನನ್ನ ಪ್ರೀತಿಸುತ್ತಿದ್ದಾರೆ ಎನ್ನುವ ಅನುಭವವಾಯಿತು. ಪವಿತ್ರಾತ್ಮರಿಂದ ತುಂಬಿ ಮಧ್ಯಸ್ಥಿಕಾ ತಂಡದೊಂದಿಗೆ ಸೇರಿ ಯೇಸುವಿನ ಸ್ತುತಿಸುವಾಗ ಆತ್ಮವು ಸ್ವರ್ಗದಲ್ಲಿ ತೇಲಾಡುತ್ತಿದೆಯೇನೊ ಎನ್ನುವ ಅನುಭವವಾಯಿತು.

ಕೀರ್ತನೆಗಳಿಂದ ಸ್ತುತಿಸಿ, ಹಾಡಿ, ಭಜಿಸಿದಾಗ ಆಗುವ ಆ ಸಂತೋಷ ಮಾತಿನಿಂದ ವರ್ಣಿಸಲು ಅಸಾಧ್ಯ. ನಮ್ಮ ತಂಡದ ಉದ್ದೇಶ ಒಂದೇ ಆಗಿತ್ತು. ಬಂದಿರುವ 450 ಯುವಜನರ ಮನಃ ಪರಿವರ್ತನೆ. ಒಬ್ಬೊಬ್ಬ ಯುವಕ–ಯುವತಿಯರು ಕಣ್ಣೀರಿಟ್ಟು ಪ್ರಾರ್ಥಿಸುವಾಗ ಕಣ್ಣೀರನ್ನು ಒರೆಸುವಂತವರು ನನ್ನ ಯೇಸು ಆಗಿದ್ದರು. ತಕ್ಷಣವೇ ನಮ್ಮೆಲ್ಲರ ಪ್ರಾರ್ಥನೆಗೆ ಸದುತ್ತರ ನೀಡುತ್ತಿದ್ದರು. ಹಸಿವು, ನಿದ್ದೆ, ಸುಸ್ತು, ಯಾವುದೂ ನಮಗೆ ಗೊತ್ತಾಗುತ್ತಿರಲಿಲ್ಲ. ಪ್ರಾರ್ಥಿಸಬೇಕು ಅಷ್ಟೇ ನಮ್ಮ ಉದ್ದೇಶ. ಸ್ವರ್ಗದಲ್ಲಿ ದೇವರ ಮುಂದೆ ದೇವದೂತರು ಸದಾ ಸ್ತುತಿಸಿ ಪ್ರಾರ್ಥಿಸುವಂತೆ, ನಾವು ಕೂಡ ಎಲ್ಲರೂ ಅವರ ಮುಂದೆ ಪವಿತ್ರಾತ್ಮಭರಿತರಾಗಿ ಪ್ರಾರ್ಥಿಸುತ್ತಿದ್ದೆವು. ಕಣ್ಣೀರಿಟ್ಟು ಪ್ರಾರ್ಥಿಸುವಾಗ ತಾಯಿಯಾಗಿ ಸಂತೈಸುವ ಅನುಭವ, ಪ್ರಾರ್ಥಿಸುವಾಗ ಗುರುವಾಗಿ ಉತ್ತರಿಸುವ ಅನುಭವ ಹೀಗೆ ಅನೇಕ ಅನೇಕ ಅನುಭವಗಳಾದವು. ಇವೆಲ್ಲದರ ಫಲವಾಗಿ ಯುವಜನರ ಜೀವನದಲ್ಲಿ ಅದ್ಭುತಗಳ ಸುರಿಮಳೆಯೇ ಸುರಿಯಿತು.

"ಎಲ್ಲಿ ಇಬ್ಬರು ಅಥವಾ ಮೂವರು ನನ್ನ ನಾಮದಲ್ಲಿ ಪ್ರಾರ್ಥಿಸುತ್ತಾರೊ, ಅಲ್ಲಿ ನಾನು ಇದ್ದೇನೆ" ಎನ್ನುವ ವಾಗ್ದಾನ ನಿಜವಾಯಿತು. ಇದರಿಂದ ನನ್ನ ವಿಶ್ವಾಸ ಕೂಡ ಇನ್ನೂ ಹೆಚ್ಚಾಯಿತು. ಈ ಉಸಿರಿರುವ ತನಕ ನಾನು ದೇವರ ಸೇವೆ ಮಾಡಬೇಕು, ಅವರು ನನ್ನನ್ನು ಜಗದಲ್ಲೆಡೆ ಒಂದು ಸುವಾರ್ತೆಯ ಅಸ್ತ್ರವಾಗಿ ಉಪಯೋಗಿಸಬೇಕು ಎನ್ನುವುದೇ ನನ್ನ ಆಸೆ ಹಾಗೂ ಎಲ್ಲಾ ಯುವಜನರಿಗಾಗಿಯೂ ಸದಾ ಪ್ರಾರ್ಥಿಸುತ್ತೇನೆ.

**ಶ್ರೀಮತಿ ಮರ್ಲಿನ್ ಫೇರ್ನಾಂಡಿಸ್, ಸಾಗರ**

## ರೈಸ್ ಅಬಾವ್ ಮಧ್ಯಸ್ಥಿಕಾ ತಂಡಕ್ಕೂ ಆಶೀರ್ವಾದ:



ಮಧ್ಯಸ್ಥಿಕೆ ಪ್ರಾರ್ಥನಾ ತಂಡಕ್ಕೆ ಸೇರ್ಪಡೆಯಾದ ದಿನದಿಂದ ನನ್ನಲ್ಲಿ ಬಹಳಷ್ಟು ಬದಲಾವಣೆಗಳನ್ನು ನಾನು ಕಂಡು ಕೊಂಡಿದ್ದೇನೆ. ಮನೆಯಿಂದ ಹರಿಹರಕ್ಕೆ ಪ್ರಯಾಣ ಮಾಡುವಾಗ ನನ್ನ ಕೈಗಳು ತುಂಬಾ ನೋವುತ್ತಿದ್ದವು ಆದರೆ ನಾನು ಹರಿಹರದ ಆರೋಗ್ಯಮಾತೆಯ ಮಡಿಲಿನಲ್ಲಿ ಮಧ್ಯಸ್ಥಿಕೆ ಪ್ರಾರ್ಥನೆ ಮಾಡುವಾಗ ನನ್ನ ಕೈಗಳ ನೋವು ಮರೆಯಾಯಿತು. ಯೇಸುವಿಗೆ ವಂದನೆಗಳು. ಮಧ್ಯಸ್ಥಿಕೆ ಪ್ರಾರ್ಥನೆ ಬೇರೆಯವರಿಗಾಗಿ ಮಾಡುವುದಾದರೂ ನಾವು ಬೇರೆಯವರಿಗಾಗಿ ಪ್ರಾರ್ಥಿಸಿದಾಗ ದೇವರು ನಮ್ಮನ್ನು ನಮ್ಮ ಕುಟುಂಬವನ್ನೂ ಆಶೀರ್ವದಿಸುತ್ತಾರೆ ಎಂಬ ಸತ್ಯ ನನಗೆ ಅರಿವಾಯಿತು.

ನನಗೆ ಪ್ರಜ್ವಲಿಸು–ರೈಸ್ ಅಬವ್ ಮಧ್ಯಸ್ಥಿಕ ತಂಡಕ್ಕೆ ಸೇರಿ ಪ್ರಾರ್ಥನೆ ಮಾಡಲು ಅನುವು ಮಾಡಿಕೊಟ್ಟ ಫಾದರ್ ಪಿಯುಸ್ ಡಿಸೋಜರವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ.

**ಶ್ರೀಮತಿ. ಎಲಿಜಬೆತ್ ಡಿಸೋಜ, ನಗರ**

## ಆಧ್ಯಾತ್ಮಿಕ ಬಲ ನೀಡಿದ ಪ್ರಜ್ವಲಿಸು



ಮಧ್ಯಸ್ಥಿಕೆ ಪ್ರಾರ್ಥನೆ ನಡೆಸುವ ತಂಡದಲ್ಲಿ ನನಗೊಂದು ಅವಕಾಶ ಮಾಡಿಕೊಟ್ಟ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ ಹಾಗೂ ಫಾ॥ ಪಿಯುಸ್ ಡಿಸೋಜರವರಿಗೆ ತುಂಬಾ ಧನ್ಯವಾದಗಳು. ನನಗೆ ಪ್ರಾರ್ಥನೆ ಮಾಡಲು ಬೆಳಗಿನ ಜಾವ 3:00 ಘಂಟೆಯಿಂದ 8:00 ಘಂಟೆಯ ಸಮಯ ನೀಡಲಾಗಿತ್ತು. ಮುಂಜಾನೆ ಎದ್ದು ಪರಮ ಪ್ರಸಾದದ ಸಮ್ಮುಖದಲ್ಲಿ ಪ್ರಾರ್ಥನೆ ಮಾಡುವಾಗ ನನ್ನ ಮತ್ತು ದೇವರ ಸಂಬಂಧ ವರ್ಣಿಸಲು ಅಸಾಧ್ಯ. ನಾನು ನನ್ನ ಪೂರ್ಣ ಹೃದಯದಿಂದ, ಪೂರ್ಣ ಆತ್ಮದಿಂದ ದೇವರನ್ನು ಸ್ತುತಿಸುತ್ತಿದೆ. ಸೃಷ್ಟಿಗಳು ಸ್ತುತಿಸುವ ಮೊದಲು ನಾವು ದೇವರನ್ನು ಸ್ತುತಿಸಿದಾಗ ದೇವರು ನಮ್ಮ ಪ್ರಾರ್ಥನೆಯನ್ನು ಆಲಿಸುತ್ತಾರೆ ಎಂಬ ನಂಬಿಕೆ ನನ್ನಲ್ಲಿತ್ತು. ನಾನು ನನ್ನ ಈ ಪ್ರಾರ್ಥನೆಯನ್ನು ಯುವಕ, ಯುವತಿಯರಿಗಾಗಿ ಸಮರ್ಪಿಸಿ ಪ್ರಾರ್ಥಿಸುತ್ತಿದ್ದೆ. ಅವರ ಒಂದೊಂದು ಹೆಸರನ್ನು ಹಿಡಿದು ದೇವರಿಗೆ ಸಮರ್ಪಿಸುತ್ತಿದೆ.

ಮಾಧ್ಯಮಗಳ ಪ್ರಭಾವಕ್ಕೆ ಒಳಗಾಗಿ ಸಕಲ ವಿಧವಾದ ಲೌಕಿಕ ದುರಭ್ಯಾಸಗಳಲ್ಲಿ ಸಿಲುಕಿಕೊಂಡು ಹೊರ ಬರಲಾಗದೆ ಕಷ್ಟಪಡುತ್ತಿರುವ ಎಲ್ಲಾ ಯುವಜನರ ಮೇಲೆ ದಯೆ ತೋರಿದ್ದಾರೆ. ಅವರ ಹೃದಯಗಳಲ್ಲಿ ದೈವ ಭಯ, ಪ್ರೀತಿ ಹುಟ್ಟಿಸಿ ಅವರನ್ನು ಪವಿತ್ರಾತ್ಮರ ವರಗಳಿಂದ ತುಂಬಿಸಿ, ಆಧ್ಯಾತ್ಮಿಕವಾಗಿ ಬಲಗೊಳಿಸಿದ್ದಾರೆ. ಮಧ್ಯಸ್ಥಿಕೆ ಪ್ರಾರ್ಥನೆಯ ಸಮಯದಲ್ಲಿ ಯುವಜನರಲ್ಲಿ ಆದ ಬದಲಾವಣೆ ಹಾಗೂ ಅವರ ಅನುಭವ ಕೇಳಿದಾಗ ನಿಜಕ್ಕೂ ತುಂಬಾ ಸಂತೋಷವಾಯಿತು. ಇಂತಹ ಧ್ಯಾನಕೂಟವನ್ನು ಇನ್ನೂ ಹೆಚ್ಚು ಹೆಚ್ಚಾಗಿ ನಡೆಸಲು ಅವಕಾಶ ಮಾಡಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ. ಎಲ್ಲರಿಗೂ ನನ್ನ ಮನದಾಳದ ಧನ್ಯವಾದಗಳು.

**ಶ್ರೀ. ಜಾರ್ಜ್ ಫೆರ್ನಾಂಡಿಸ್, ಸಾಗರ**

## ಆಯಾಸವಾಗದೇ ನಿರಂತರ ಪ್ರಾರ್ಥಿಸುವ ವರದಾನ




ಆತ್ಮೀಯರೇ, 24 ಘಂಟೆಗಳ ಮಧ್ಯಸ್ಥಿಕೆ ಪ್ರಾರ್ಥನೆಯಲ್ಲಿ ನಾನು ಭಾಗವಹಿಸಿದ್ದು ಇದು ಜೀವನದಲ್ಲಿ ಮೊದಲನೆಯ ಸಲ. ಈ ಮಧ್ಯಸ್ಥಿಕೆಯ ಪ್ರಾರ್ಥನೆಯ ಮುಖಾಂತರ ನನ್ನ ವಿಶ್ವಾಸ ಹೆಚ್ಚಿದೆ, ಏಕೆಂದರೆ ಮತ್ತಾಯ 7:8 ರಲ್ಲಿ ಪ್ರಭು ಯೇಸುವಿನ ನುಡಿಯಂತೆ ಕೇಳಿಕೊಳ್ಳುವ ಪ್ರತಿಯೊಬ್ಬನಿಗೂ ಕೊಡಲಾಗುವುದು ಎಂಬಂತೆ ಏನನ್ನು ಕೇಳಿಕೊಂಡಿದ್ದೇವೊ ಅದನ್ನು ಪ್ರಭು ಕೊಟ್ಟಿದ್ದಾರೆ.

ಒಂದೇ ಮನಸ್ಸುಳ್ಳವರಾಗಿ ಭೂಲೋಕದಲ್ಲಿ ನೀವು ಮಾಡುವ ಪ್ರಾರ್ಥನೆ ನನ್ನ ತಂದೆಯ ಮುಖಾಂತರ ಅದನ್ನು ನೆರವೇರಿಸುತ್ತೇನೆ ಎಂದು ಮತ್ತಾಯ 18:19 ರಲ್ಲಿ ವಾಗ್ದಾನ ಮಾಡಿದ ಯೇಸು ನಾವು ಯುವಜನರಿಗಾಗಿ ಅಕ್ಟೋಬರ್ 4 ಸಂಜೆ 4 ಗಂಟೆಯಿಂದ ಅಕ್ಟೋಬರ್ 8 ಸಂಜೆ 4 ಗಂಟೆಯ ತನಕ ನಿರಂತರ ಆರಾಧನೆಯನ್ನು ನಡೆಸಿ ಪ್ರಾರ್ಥಿಸಿದೆವು. ಪ್ರಭು ನಮ್ಮ ಪ್ರಾರ್ಥನೆಗಳಿಗೆ ಸದುತ್ತರ ನೀಡಿದ್ದಾರೆ. ನಾವು ಕೇವಲ 2–3 ತಾಸುಗಳ ವಿಶ್ರಾಂತಿಯನ್ನು ತೆಗೆದುಕೊಂಡಿದ್ದರೂ ನಮಗೆ ಆಯಾಸವೇ ಆಗದಂತೆ, ತೂಕಡಿಕೆ ಬಾರದಂತೆ ಪ್ರಾರ್ಥಿಸಲು ಪ್ರಭು ತಮ್ಮ ದೂತರನ್ನು ಕಳುಹಿಸಿದ ಅನುಭವವಂತೂ ರೋಮಾಂಚನವಾಗುವಂತಾದ್ದು. ಯುವಜನರೇ ಯುವಜನರಿಗಾಗಿ ಆಯೋಜಿಸಿ ಶ್ರಮಿಸಿದ ಈ ಧ್ಯಾನ ನಿಜವಾಗಿಯೂ ಮರೆಯಲಾರದ ಅನುಭವ. ಯೇಸುವೇ ಸ್ತೋತ್ರ.

**– ಶ್ರೀಮತಿ ಟ್ರೇಜಾ ಜಾನ್ ಲೋಬೊ, ಸಾಗರ.**

## Rise Above made me Strong to face challenges of life

"RISE ABOVE" is the best example to experience the presence of Jesus in the midst of two or three people gathered in His name. RISE ABOVE has help me to rise above from difficulties and the worst situations of my life. I really enjoyed each and every glimpse of the retreat. This made me so happy and enthusiastic to participate. I really learned from each and every sessions and the talk of Fr. Franklin Dsouza about the Ten Commandments made me to think and realize all the sins of my day today life. YESU NAMANA was really fabulous and I really loved it because this is the first time that YESU NAMANA was conducted. Inner healing adoration conducted by Fr. Pius D'Souza was really heart touching. I loved it the most. The couselling sessions were very effective. The inspiring sentence I received was "we do not grow when things are easy. We grow when we face challenges". I thank Yuvamithra family for organizing such a heart touching retreat.



**Sebastian Vinod. G, Hiriyur**
**DEXCO Secretary**

## Rise Above was an Amazing Experience:

It was an amazing experience for me throughout 4 days of 'RISE ABOVE' retreat. It was so wonderful to see all the youth dance and sing to the lord and praise his Holy name. Besides praise and worship I experienced Jesus presence during the adoration, which gave me a strong feeling that, God is present within me. This retreat helped me to keep myself happy and gave me a strong feeling to live a happy life further. Thank you Fr. Pius D'Souza for all the efforts, he had put in to make this event a successful and enriching one. Thus bringing all the youth together under one roof to experience the love and peace of the almighty God.



**- Leo Lucas, Mumbai**

## ‘ಪ್ರಜ್ವಲಿಸು’– ವರ್ಣಿಸಲಾಧ್ಯವಾದ ಅನುಭವ



‘ಪ್ರಜ್ವಲಿಸು’ ಮನೋ–ಅಧ್ಯಾತ್ಮಿಕ ಧ್ಯಾನಕೂಟಕ್ಕಾಗಿ 24 ತಾಸುಗಳ ಮಧ್ಯಸ್ಥಿಕೆ ಪ್ರಾರ್ಥನೆ ನಡೆಸುವ ತಂಡದಲ್ಲಿ ಸದಸ್ಯಳಾಗಿರಲು ನನಗೊಂದು ಅವಕಾಶ ಕೊಟ್ಟಾಗ ನಾನು ಪಡೆದ ಅನುಭವ ಅತ್ಯದ್ಭುತ. ಮಧ್ಯಸ್ಥಿಕೆ ಪ್ರಾರ್ಥನೆ ನಡೆಸುವಾಗ ಯುವಜನರಲ್ಲಿ ಆದ ಬದಲಾವಣೆ ಹಾಗೂ ಅವರ ಅನುಭವ ಕೇಳಿದಾಗ ನಿಜಕ್ಕೂ ಆನಂದವಾಯ್ತು. ದಿನ ನಿತ್ಯವೂ ಕ್ಷಣ ಕ್ಷಣವೂ ಯೇಸು ನನ್ನೊಂದಿಗಿರುವಾಗ, ನನ್ನೊಂದಿಗೆ ಮಾತನಾಡಿದ ಅನುಭವವನ್ನು ವರ್ಣಿಸಲು ನನ್ನಿಂದ ಅಸಾಧ್ಯ. ಧ್ಯಾನಕೂಟ ಮುಗಿದ ನಂತರ ಆ ಸ್ಥಳ ಬಿಟ್ಟು ಬರುವಾಗ ಏನನ್ನೊ ಕಳೆದುಕೊಂಡ ಅನುಭವ ಹಾಗೂ ದಿನನಿತ್ಯವೂ ನಮ್ಮ ಯುವ ಜನರಿಗಾಗಿ ಪ್ರಾರ್ಥಿಸುವ ಹಂಬಲ ಹೆಚ್ಚಾಯಿತು. ಇಂತಹ ಅವಕಾಶ ಮತ್ತೊಮ್ಮೆ ಸಿಕ್ಕಿದರೆ ಅದರಲ್ಲೂ ಭಾಗಿಯಾಗುವೆ. ದಿನದ 24 ಗಂಟೆಯೂ ಪ್ರಭು ಯೇಸುವಿನ ಸಾನಿಧ್ಯದಲ್ಲಿ ಅವರ ಆರಾಧನೆಯಲ್ಲಿ ಪಾಲುಗೊಳ್ಳುವೆ. ಈ ಧ್ಯಾನಕೂಟ ನಡೆಸಲು ಅವಕಾಶ ಮಾಡಿಕೊಟ್ಟ ಪರಮ ಪೂಜ್ಯ ಧರ್ಮಾಧ್ಯಕ್ಷರಿಗೆ ಧನ್ಯವಾದಗಳು. ಭಾಗವಹಿಸಿದ ಎಲ್ಲಾ ಯುವಜನರಿಗೆ ಅಭಿನಂದನೆಗಳು. ನಿರಂತರ ಶ್ರಮಿಸಿದ ಕೇಂದ್ರೀಯ ಸಮಿತಿಯ ಸದಸ್ಯರಿಗೆ ವಂದನೆಗಳು.

**ಶ್ರೀಮತಿ. ಸಿಸಿಲಿಯ ಗೋಮ್ಸ್, ಸಾಗರ**

## Rise Above A Rare Occasion



I was in praise and worship group as keyboard player. First and foremost I would like to thank God the Almighty for providing me this opportunity to be a musician. Also I thank Fr. Pius D'Souza and Mr. Alban Fernandes. I liked very much the retreat especially the inner healing adoration brought an immense change in my life. I was touched and motivated by God to serve Him through the music. Also all my bad habits were erased completely during the adoration. Praise the Lord!

**Mr Nirmal Pawan, New Town**

## “ಪ್ರಜ್ವಲಿಸು” ಒಂದು ವಿಶೇಷ ಧ್ಯಾನಕೂಟ:



ನಮ್ಮ ಜೀವನದಲ್ಲಿ ನಡೆದ ಒಂದು ಪ್ರಮುಖ ಘಟನೆ ಎಂದರೆ ತಪ್ಪಾಗಲಾರದು. “Praise and worship” ತಂಡವನ್ನು ನಾನು ಸೇರಿಕೊಂಡದ್ದು ಇದೇ ಮೊದಲ ಬಾರಿ. ನನ್ನ ಜೊತೆ ನನ್ನ ಮೂವರು ಗೆಳೆಯರಾದ ನಿರ್ಮಲ್ ಪವನ್, ಜೋ ಸೈಮನ್ ಹಾಗೂ ಕ್ಲೇವಿನ್ ರೊಡ್ರಿಗಸ್ ಇವರೂ ಕೂಡ ನನ್ನ ಜೊತೆಗೆ ಈ ಟೀಮ್‌ನಲ್ಲಿ ಇದ್ದರು. ನಮ್ಮ ಯೂತ್ ಬ್ಯಾಂಡ್ ಕಾರ್ಯಕ್ರಮ ಬಹಳ ಚೆನ್ನಾಗಿ ಮೂಡಿ ಬಂದಿತು ಎಂದು ಬಹಳ ಮಂದಿ ಹೇಳಿದರು. ಇದು ನನಗೆ ತುಂಬಾ ಖುಷಿ ನೀಡಿದೆ. ದೇವರನ್ನು ಸ್ತುತಿಸುವ ಅವಕಾಶ ಸಿಕಿದ್ದು ನನ್ನ ಅದೃಷ್ಟ.

**ಬಾಲ್‌ರಾಜ್, ಭದ್ರಾವತಿ**


*Your Search Ends Here...*



***From Alpha to Omega we are the ones you need.***

***No event is more memorable without our special lead***



***For Master of Ceremonies (MC) dial***

**Mr Francis Agnel D’Souza**

**Mobile 8217390500**

**We do MC for Wedding, reception, birthday, Anniversary parties and family functions**

# ಧ್ಯಾನಾಭ್ಯರ್ಥಿಗಳ ಪ್ರಜ್ವಲಿಸಿದ ಅನುಭವ

## 1. Rise Above – ಧ್ಯಾನದ ಬಗ್ಗೆ ನನ್ನ ಅನಿಸಿಕೆ:



ನನಗೆ Rise Above ಧ್ಯಾನಕ್ಕೆ ಬಂದು ತುಂಬಾ ಸಂತೋಷವಾಯಿತು. ಈ ರೀತಿಯ ಧ್ಯಾನಕೂಟಗಳು ನಮ್ಮ ಯುವಜನರಿಗೆ ತುಂಬಾ ಅಗತ್ಯ ಏಕೆಂದರೆ ಬೇರೆ ಬೇರೆ ರೀತಿಯ ಚಟುವಟಿಕೆಗಳಲ್ಲಿ ಮಗ್ನರಾಗಿರುವ ನಮ್ಮ ಯುವಜನರಿಗೆ ದೇವರೆಡೆಗೆ ಬರಲು ಇಂತಹ ಧ್ಯಾನಕೂಟವೂ ಅವಶ್ಯಕ. "ಆಂತರಿಕ ಸೌಖ್ಯ" ಎಂಬ ಆರಾಧನೆಯು ನಾನು ಎಂದೂ ಮರೆಯಲು ಸಾಧ್ಯವಿಲ್ಲ. ಈ ಆರಾಧನೆಯಿಂದ ನಮ್ಮ ಮನಸ್ಸಿನಲ್ಲಿರುವ ಯಾರಿಗೂ ಹೇಳಿಕೊಳ್ಳಲು ಆಗದಂತಹ ನೋವುಗಳನ್ನು ದೇವರಿಗೆ ಸಮರ್ಪಿಸಿದ್ದೇವೆ. ಆದ್ದರಿಂದ ನನಗೆ ಆಂತರಿಕ ಸೌಖ್ಯ ಆರಾಧನೆ ತುಂಬಾ ಇಷ್ಟವಾಯಿತು. ಧ್ಯಾನಕೂಟಕ್ಕೆ ಬಂದ ಪ್ರತಿಯೊಬ್ಬರಿಗೆ ಒಂದಲ್ಲಾ ಒಂದು ರೀತಿಯಲ್ಲಿ "ದೈವೀ ಸ್ಪರ್ಶ"ದ ಅನುಭವವಾಗಿದೆ. ಈ ಧ್ಯಾನಕೂಟದಲ್ಲಿ ನಮಗೆ ತಿಳಿಸಿದ ಹಲವು ಸೂಚನೆಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ನಾವು ನಮ್ಮ ಗುರಿಯನ್ನು ತಲುಪಲು ಸಾಧ್ಯ. ಇಲ್ಲಿ ನಾವು ಭಾಗವಹಿಸಿದ ಪ್ರಾರ್ಥನೆಯ ವಿಧಾನಗಳು ನಮಗೆ ಪ್ರಭುವಿನ ಸಂದೇಶ ನಮ್ಮದಾಗಿಸಲು ನೆರವಾಗಿದೆ. ಈ ಕಾರ್ಯಕ್ರಮವನ್ನು ಆಯೋಜಿಸಿದ ಯುವಮಿತ್ರ ತಂಡಕ್ಕೆ ಧನ್ಯವಾದಗಳನ್ನು ಸಲ್ಲಿಸಲು ಇಷ್ಟಪಡುತ್ತೇನೆ. ಈ ರೀತಿಯ ಧ್ಯಾನಕೂಟವನ್ನು ಇನ್ನೂ ಹೆಚ್ಚಾಗಿ ಆಯೋಜಿಸಲು ಕೇಳಿಕೊಳ್ಳುತ್ತಾ ನಾನು ಅನುಭವಿಸಿದ ದೈವೀಸ್ಪರ್ಶದ ಅನುಭವ ಹಂಚಿಕೆಗೆ ಪೂರ್ಣ ವಿರಾಮವಿಡುತ್ತಿದ್ದೇನೆ.

**ಕು. ಜೆಸ್ವಿಟಾ ಡಿಸೋಜ, ಹೊಸನಗರ**

## 2. ಈ ಧ್ಯಾನ ನಮ್ಮ ಬಾಳಿನ ವಿಶೇಷ ವರದಾನ:




ಯುವಮಿತ್ರ ಆಯೋಜಿಸುವ ಪ್ರಜ್ವಲಿಸು ಎಂಬ ಈ ಧ್ಯಾನಕೂಟದಲ್ಲಿ ನಮ್ಮ ಧರ್ಮಕೇಂದ್ರದಿಂದ 6 ಜನರು ಭಾಗವಹಿಸಿದೆವು. ಈ ಧ್ಯಾನಕೂಟವು ನಮ್ಮ ಬಾಳಿನ ವಿಶೇಷ ವರದಾನವಾಯಿತು. ಪಾಪ ನಿವೇದನೆಯ ಮಹತ್ವ ಮತ್ತು ಪಾಪ ನಿವೇದನೆಯನ್ನು ಮಾಡುವ ವಿಧಾನವನ್ನು ಅರಿತೆನು. ದೇವರೊಂದಿಗೆ ನಮ್ಮ ಸಂಬಂಧ ಹೇಗಿರಬೇಕು ಮತ್ತು ಪ್ರಾರ್ಥಿಸುವುದನ್ನು ತಿಳಿದುಕೊಂಡೆನು. ನನಗೆ ದೇವರಲ್ಲಿ ವಿಶ್ವಾಸ

ಮತ್ತು ನಂಬಿಕೆ ಹೆಚ್ಚಾಯಿತು ಮಾತ್ರವಲ್ಲದೆ ದೇವರೊಂದಿಗೆ ನನ್ನ ಸಂಬಂಧ ಹತ್ತಿರವಾಯಿತು. ರೋಗ ಸೌಖ್ಯ ಆರಾಧನೆಯಲ್ಲಿ ಭಾಗವಹಿಸಿದ ನನಗೆ ಮನಃಪರಿವರ್ತನೆ ಆಯಿತು. ಆರಾಧನೆ ಪ್ರತಿಯೊಬ್ಬರಲ್ಲೂ ಎಷ್ಟು ಮಹತ್ವವಾದುದು ಎಂಬುದನ್ನು ಅರಿತೆನು. ಯುವಜನರಾದ ನಾವು ಕೆಟ್ಟ ದಾರಿಯಲ್ಲಿ ಹೋಗದೆ ಒಳ್ಳೆಯ ಮಾರ್ಗದಲ್ಲಿ ಹೇಗೆ ಹೋಗುವುದು ಎಂಬುದು ಜೀವನದಲ್ಲಿ ಕ್ರಿಸ್ತನಿಗೆ ಸಾಕ್ಷಿ ಆಗಬೇಕೆಂದು ಹಲವು ಸಾಕ್ಷಿಗಳ ಮೂಲಕ ತಿಳಿದೆನು. ಈ ಧ್ಯಾನಕೂಟದಿಂದ ಕ್ರಿಸ್ತರ ಮಾರ್ಗದಲ್ಲಿ ನಡೆಯುವ ಅರಿವು ಮೂಡಿತು. ಇಂತಹ ಅದ್ಭುತ ಧ್ಯಾನಕೂಟವನ್ನು ಆಯೋಜಿಸಿದ ಫಾ॥ ಪಿಯುಸ್ ಡಿಸೋಜರವರಿಗೆ, ಹರಿಹರ ಪುಣ್ಯಕ್ಷೇತ್ರದ ಧರ್ಮಗುರುಗಳಿಗೆ, ಕನ್ಯಾಭಗಿನಿಯರಿಗೆ, DEXCO ಸದಸ್ಯರಿಗೆ ಹಾಗೂ ಸಂಗೀತ ವಾದ್ಯ ತಂಡದವರಿಗೆ ನಮ್ಮ ಧರ್ಮಕೇಂದ್ರದ ಗುರುಗಳು ಹಾಗೂ ಯುವಜನರ ಪರವಾಗಿ ವಂದನೆಯನ್ನು ಸಲ್ಲಿಸುತ್ತೇನೆ.

**ಫೆಲಿಕ್ಸ್ ಗೋಮ್ಸ್, ಆನಂದಪುರಂ**

## 3. ಸಮಾಲೋಚನೆಯಿಂದ ಸಮಾಧಾನದೆಡೆಗೆ ನಡೆದೆ:



ನನ್ನ ತಂಡದವರ ಜೊತೆಗೆ ಹರಿಹರದಲ್ಲಿ ನಡೆದ RISE ABOVE ಧ್ಯಾನಕೂಟದಲ್ಲಿ ಭಾಗವಹಿಸಿದೆನು. ಮೊದಲನೆಯ ದಿನ ನನಗೆ ತುಂಬ ಬೇಸರವಾಗುತಿತ್ತು. ಈ ಧ್ಯಾನಕೂಟಕ್ಕೆ ಏಕೆ ಬಂದೆ ಎಂದು ಯೋಚನೆ ಮಾಡಿದೆ. ಎರಡನೆಯ ದಿನ ನನ್ನ ಮನಸ್ಸಿಗೆ ತುಂಬಾ ನೆಮ್ಮದಿ, ತಾಳ್ಮೆ, ಸಂತೋಷ ಸಿಕ್ಕಿತು. ನಮಗೋಸ್ಕರ ಹಲವರು ತಮ್ಮ ಕೆಲಸವನ್ನು ಬಿಟ್ಟು ಪ್ರಜ್ವಲಿಸು ಎಂಬ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ದೇವರ ಹಾಡುಗಳನ್ನು ಬೇರೆ ಬೇರೆ ಭಾಷೆಗಳಲ್ಲಿ ಕೇಳಿ, ಹಾಡಿ ದೇವರನ್ನು ಸ್ತುತಿಸಿದೆವು. ಈ ಧ್ಯಾನದಲ್ಲಿ ನಾನು ಮತ್ತು ನನ್ನ ಗೆಳತಿಯರು ದೇವರ ಹಾಡುಗಳ ಜೊತೆ action songs ಗಳಲ್ಲಿ ಭಾಗವಹಿಸಿದೆವು. ಎಲ್ಲರೂ ಸಂತೋಷಪಟ್ಟರು. ಶಿವಮೊಗ್ಗ ಧರ್ಮಕ್ಷೇತ್ರದ ಅನೇಕ ಗುರುಗಳು ಬಂದು "ಪ್ರಭುವಿನೊಂದಿಗೆ ಪವಿತ್ರ ಸಂಜೆ" ಕಾರ್ಯಕ್ರಮದಲ್ಲಿ ಹಾಡುಗಳನ್ನು ಹಾಡಿದರು. ನಾನು ಈ ಹಾಡುಗಳನ್ನು ಮೊದಲನೆಯ ಸಾರಿ ಕೇಳಿದೆ. ಇತರ ಕಡೆಗಳಿಂದ ಗುರುಗಳು ಹಾಗು ಭಗಿನಿಯರು ಬಂದು ಕಷ್ಟ ತೊಂದರೆಗಳನ್ನು ಧೈರ್ಯದಿಂದ ಎದುರಿಸಬೇಕು, ಸಾವು ಸಮಸ್ಯೆಗೆ ಪರಿಹಾರವಲ್ಲ ಎಂದು ತಿಳಿಸಿದರು. ನಾವೆಲ್ಲರು ಒಳ್ಳೆಯ ಪಾಪ ನಿವೇದನೆ ಮಾಡಿದೆವು. ಆರಾಧನೆಯಲ್ಲಿ ಭಾಗವಹಿಸಿದೆವು. ಬೇರೆ ಬೇರೆ ಕಡೆಯಿಂದ ಬಂದ ಮನಃಶಾಸ್ತ್ರಜ್ಞರು (ಸಮಾಲೋಚಕರು) ನಮಗೆ ಆಪ್ತಸಮಾಲೋಚನೆ ಮಾಡಿದರು. ನನ್ನ ಕಷ್ಟ

ನೋವುಗಳೆಲ್ಲವನ್ನು ಅವರೊಂದಿಗೆ ಹಂಚಿಕೊಂಡಾಗ ನನಗೆ ತುಂಬಾ ಸಮಾಧಾನವಾಯಿತು. ನನ್ನ ಚಿಂತೆ ಎಲ್ಲಾ ದೂರವಾಯಿತು. ಈ ನನ್ನ ಅಭಿಪ್ರಾಯವನ್ನು ಹಂಚಿಕೊಳ್ಳಲು ಅವಕಾಶ ನೀಡಿರುವ ವಂ। ಪಿಯುಸ್ ಡಿಸೋಜ, ನಮ್ಮ ಧರ್ಮಕ್ಷೇತ್ರದ ಯುವ ನಿರ್ದೇಶಕರಿಗೆ ನನ್ನ ಧನ್ಯವಾದಗಳು.

**ಕು. ಅರ್ಪಿತ, ಮಾಳೂರು**

## 4. ಹೃದಯದ ಭಾರ ಇಳಿದು ಪ್ರಜ್ವಲಿಸಿದ ಅನುಭವ:



ನಾನು ಮೊದಲು ಈ ಧ್ಯಾನಕೂಟ ಆಯೋಜನೆ ಮಾಡಿದ ಗುರುಗಳಿಗೆ ವಂದನೆಯನ್ನು ಸಲ್ಲಿಸುತ್ತೇನೆ. ನಾನು ಸಣ್ಣ ವಯಸ್ಸಿನಲ್ಲಿ ನನ್ನ ತಂದೆಯನ್ನು ಕಳೆದುಕೊಂಡಿದ್ದೆ. ಸದಾ ಕಾಲವೂ ಆ ಪ್ರೀತಿಗೆ ಹಂಬಲಿಸುತ್ತಿದೆ ಮತ್ತು ತಪ್ಪಾದ ದಾರಿಯಲ್ಲಿ ನಡೆಯುತ್ತಿದ್ದೆ. ಆದರೆ ಈ ಪ್ರಜ್ವಲಿಸು ಧ್ಯಾನಕೂಟದಲ್ಲಿ ಆಯೋಜಿಸಿದ ಆಪ್ತ ಸಮಾಲೋಚನೆಯಲ್ಲಿ ಯಾರೊಂದಿಗೂ ಹಂಚಿಕೊಳ್ಳಲಾಗದ ಎಲ್ಲಾ ನನ್ನ ಮನಸ್ಸಿನ ಭಾರಗಳನ್ನು ಅವರೊಂದಿಗೆ ಹಂಚಿಕೊಂಡೆ. ನನ್ನ ಮನಸ್ಸಿಗೆ ಸಮಾಧಾನ ದೊರಕಿತು. ಆಂತರಿಕ ಸೌಖ್ಯ ಆರಾಧನೆಯಲ್ಲಿ ಯೇಸು ನನ್ನನು ಸ್ಪರ್ಶಿಸಿ, ನಾನು ಕಳೆದುಕೊಂಡ ತಂದೆಯ ಪ್ರೀತಿಯನ್ನು ನೀಡಿದರು. ಅದೇ ರೀತಿ ನನ್ನ ಜೀವನ ಸಂಪೂರ್ಣ ಬದಲಾಯಿತು. ಇನ್ನು ಮುಂದೆ ನನ್ನ ಜೀವನ ಯೇಸುವಿಗಾಗಿ ಮೀಸಲಿಡುತ್ತೇನೆ.

**ಇಸಾಕ್ ಲೋಪೆಸ್, ಸಾಗರ**


## 5. ಯೇಸು ಸ್ಪರ್ಷ ಪಡೆದೆ:



ನಾನು ಹಲವು ಧ್ಯಾನಕೂಟದಲ್ಲಿ ಭಾಗವಹಿಸಿದ್ದೆ ಆದರೆ 'ಪ್ರಜ್ವಲಿಸು' ಧ್ಯಾನಕೂಟದಲ್ಲಿ ಭಾಗವಹಿಸಿದ ನಂತರ ಯೇಸುವಿನ ಸ್ಪರ್ಶವನ್ನು ಪಡೆದೆನು. ನನ್ನ ಎದೆಯ ಮೇಲೆ ಒಂದು ಗುಳ್ಳೆಯಾಗಿತ್ತು ಮತ್ತು ಕೈ ಮೇಲೆತ್ತಲು ಆಗುತ್ತಿರಲಿಲ್ಲ. ಈ ಧ್ಯಾನಕೂಟದಲ್ಲಿ ಆಂತರಿಕ ಸೌಖ್ಯ ಆರಾಧನೆಯಲ್ಲಿ ದೇವರು ನನ್ನನ್ನು ಮುಟ್ಟಿ ನನ್ನನ್ನು ಗುಣಪಡಿಸಿದ್ದಾರೆ. ಪ್ರಭುವಿಗೆ ಸ್ತೋತ್ರ ಸಲ್ಲಿಸುತ್ತೇನೆ.

**ಲಾರೆನ್ಸ್, ತೀರ್ಥಹಳ್ಳಿ**

## 6. ಕ್ರಿಸ್ತಾನುಭವ ನೀಡಿದ Rise Above:



ಯುವಮಿತ್ರ, ಯುವಜನ ಆಯೋಗ ಶಿವಮೊಗ್ಗ ಧರ್ಮಕ್ಷೇತ್ರ ಅರ್ಪಿಸಿದ 'ಪ್ರಜ್ವಲಿಸು' ಎಂಬ ಮನೋ-ಆಧ್ಯಾತ್ಮಿಕ ಅಭಿವೃದ್ಧಿಗಾಗಿ ಯುವಜನರಿಗೆ ಆಧ್ಯಾತ್ಮಿಕ ನವೀಕರಣಕ್ಕೆ ಯುವಮಿತ್ರದವರು ಕಾರ್ಯಕ್ರಮವನ್ನು ಆಯೋಜಿಸಿದ್ದರು. ಈ ಕಾರ್ಯಕ್ರಮದ ಮುಖ್ಯ ಉದ್ದೇಶವೆಂದರೆ ಯುವಜನರ ಮನಪರಿವರ್ತನೆಗೆ ಪ್ರೇರೇಪಿಸುವ ಸಲುವಾಗಿ ವಿಶ್ವಾಸವನ್ನು ವೃದ್ಧಿಸುವುದು. ಈ ಕಾರ್ಯಕ್ರಮಕ್ಕೆ ವಂ। ಪಿಯುಸ್ ಡಿಸೋಜ ರವರು ದೈವಾನುಭವಭರಿತ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡಿ, ಅಲ್ಲಿ ನಮಗೆಲ್ಲರಿಗೂ ದೇವರನ್ನು ಅರಿತುಕೊಳ್ಳುವ ಅವಕಾಶ ಮಾಡಿಕೊಟ್ಟರು. ಹಲವರ ಸಾಕ್ಷಿಗಳನ್ನು ಆಲಿಸಿದಾಗ ನನಗೆ ದೇವರ ಮೇಲಿದ್ದ ನಂಬಿಕೆ, ವಿಶ್ವಾಸ ತುಂಬಾ ಅಧಿಕವಾಯಿತು ಹಾಗೂ ದೇವರೊಂದಿಗಿನ ಸಂಬಂಧ ಬಲಗೊಂಡಿತು. ದೇವರ ಪ್ರೀತಿಯ ಮುಂದೆ ಎಲ್ಲವೂ ಶೂನ್ಯ ಎಂಬ ಅರಿವು ನನಗೆ ಮೂಡಿತು. ಕ್ರೈಸ್ತೇತರ ಯುವತಿ ಹೇಗೆ ನಿಜ ದೇವರನ್ನು ಅರಿತು ಕ್ರಿಸ್ತನ ಹಿಂಬಾಲಕಿಯಾದಳು ಎಂಬ ಸತ್ಯ ಘಟನೆಯನ್ನು ಸಹೋದರಿ ಪ್ರನಾಳಿಯವರ ಮೂಲಕ ತಿಳಿದುಕೊಂಡಾಗ ನನ್ನಲ್ಲಿ ಬದಲಾವಣೆಯ ಅಲೆ ಆರಂಭವಾಯಿತು.

ಒರ್ವ ಭಗಿನಿ ತಮ್ಮ ಜೀವನದಲ್ಲಿ ಕಷ್ಟ ಬಂದಾಗ ಯೇಸುವಿನ ಸ್ಪರ್ಶದ ಬಗ್ಗೆ ಅವರಿಗಾದ ಅನುಭವವನ್ನು ನಮಗೆ ತಿಳಿಸಿದರು. ಹೀಗೆ ಹಲವರು ತಮ್ಮ ಜೀವನದಲ್ಲಿ ಆದ ಯೇಸುವಿನ ಸ್ಪರ್ಶದ ಬಗ್ಗೆ ತಿಳಿಸಿದರು. ಆಗ ನಮಗೂ ಯೇಸುವಿನ ಮೇಲೆ ವಿಶ್ವಾಸ ಮೂಡಿತು. ಆಂತರಿಕ ಸೌಖ್ಯದ ಆರಾಧನೆಯಲ್ಲಿ ನಮ್ಮ ದುಃಖ, ನೋವು ಎಲ್ಲವನ್ನೂ ಯೇಸುವಿನ ಪಾದಕ್ಕೆ ಸಮರ್ಪಿಸಿದೆವು. ಆಗ ದೇವರ ಸ್ಪರ್ಶವನ್ನು ಅನುಭವಿಸಿದೆವು. ಇದರಿಂದ ಮನಸ್ಸಿಗೆ ನೆಮ್ಮದಿ ದೊರಕಿತು. ಈ ಧ್ಯಾನಕೂಟದಲ್ಲಿ ಭಾಗವಹಿಸಲು ನಮಗೆ ಅವಕಾಶ ನೀಡಿದ ಎಲ್ಲರಿಗೂ ವಂದಿಸಿ ನನ್ನ ಅನಿಸಿಕೆಗಳನ್ನು ಮುಗಿಸುತ್ತೇನೆ. ಜೈ ಯೇಸು ಕ್ರಿಸ್ತ.

**ಐರಿಸ್ ಮರಿಯ ಡಿಸೋಜ, ಹೊಸನಗರ**

## 7. ನ್ಯೂನ್ಯತೆಗಳನ್ನು ಮೆಟ್ಟಿ ನಿಲ್ಲುವ ಶಕ್ತಿ ನೀಡಿದ್ದು ಪ್ರಜ್ವಲಿಸು ಧ್ಯಾನ:

ಪ್ರಜ್ವಲಿಸು ಎಂತಹ ಅರ್ಥಗರ್ಭಿತವಾದ ಪದ. ಯುವಮಿತ್ರ ತಂಡವು ಯುವಜನರಿಗಾಗಿ ನಡೆಸಿದ ಆಧ್ಯಾತ್ಮಿಕ ನವೀಕರಣ ಧ್ಯಾನಕೂಟದಲ್ಲಿ ಯುವಜನತೆಯನ್ನು ವಿಶೇಷವಾಗಿ ಕ್ರೈಸ್ತ ಯುವ ಜನರನ್ನು ಸೋಲಿನಿಂದ ಮೇಲೆದ್ದು ಜಗತ್ತಿನಲ್ಲಿ ಪ್ರಜ್ವಲಿಸು, ನಿರಾಶೆಯಿಂದ ಮೇಲೆದ್ದು ಪ್ರಜ್ವಲಿಸು, ಸ್ವಾರ್ಥದಿಂದ ಮೇಲೆದ್ದು

ಪ್ರಜ್ವಲಿಸು. ಅಹಂಕಾರದಿಂದ ಮೇಲೆದ್ದು ಪ್ರಜ್ವಲಿಸು, ನಿನ್ನ ಎಲ್ಲಾ ನ್ಯೂನ್ಯತೆಗಳಿಂದ ಮೇಲೆದ್ದು ಪ್ರಜ್ವಲಿಸು ಎಂದು ದಿ 5/10/2019 ರಿಂದ ದಿ 8/10/2019 ರವರೆಗೆ ಧರ್ಮಕ್ಷೇತ್ರದ ಎಲ್ಲಾ ಯುವಜನರನ್ನು ಹರಿಹರದ ಆರೋಗ್ಯಮಾತೆಯ ಸನ್ನಿಧಿಯಲ್ಲಿ ಒಟ್ಟುಗೂಡಿಸಿ ನಮ್ಮ ಎಲ್ಲಾ ನ್ಯೂನತೆಗಳಿಂದ ಮೇಲೆದ್ದು ಬರುವಂತೆ ಮಾಡಿದ್ದು ಪ್ರಜ್ವಲಿಸು ಎನ್ನುವ ಧ್ಯಾನಕೂಟ.



ಹಿಂದೆ ಹಲವು ಬಾರಿ ಹಲವು ಧ್ಯಾನಕೂಟಗಳಲ್ಲಿ ಭಾಗವಹಿಸಿದ್ದೆ ಆದರೆ ಪ್ರಜ್ವಲಿಸು ಶೀರ್ಷಿಕೆಯಡಿ ಮನೋಭಿವೃದ್ಧಿಗಾಗಿ ಯುವಜನರಿಗಾಗಿ ಆಯೋಜಿಸಿರುವ ಧ್ಯಾನದಲ್ಲಿ ನಾನು ನಿಜವಾಗಲೂ ಒಂದು ಬೆಳಕು ಕಂಡೆ. ಜೀವನದಲ್ಲಿ ಸೋತಾಗ ಹೇಗೆ ಅದರಿಂದ ಹೊರಗೆ ಬಂದು ಸೋಲನ್ನು ಜಯವನ್ನಾಗಿ ಮಾರ್ಪಡಿಸಿಕೊಳ್ಳುವಂತಹ ಛಲ ನಮ್ಮದಾಗಬೇಕೆಂಬ ಅರಿವು ಮೂಡಿತು. ಮುಂದಿನ ದಿನಗಳಲ್ಲಿ ಇಂತಹ ಕಾರ್ಯಕ್ರಮಗಳು ಇನ್ನೂ ಹೆಚ್ಚಾಗಿ ಮೂಡಿ ಬರಲಿ, ಧರ್ಮಕ್ಷೇತ್ರದ ಯುವಜನತೆ ಪ್ರಜ್ವಲಿಸಲಿ ಎಂದು ಹಾರೈಸುತ್ತೇನೆ.

**ಜೋಯಲ್ ಬ್ರಿಟ್ಟೊ, ತೀರ್ಥಹಳ್ಳಿ**

## 8. ಪ್ರಾರ್ಥನೆಗಿರುವ ಶಕ್ತಿ ತಿಳಿಸಿದ ಧ್ಯಾನ:

ಪ್ರಜ್ವಲಿಸು ಮನೋ-ಆಧ್ಯಾತ್ಮಿಕ ಅಭಿವೃದ್ಧಿಗಾಗಿ ಅಧ್ಯಾತ್ಮಿಕ ನವೀಕರಣ ಧ್ಯಾನಕೂಟ. ಈ ಒಂದು ಧ್ಯಾನಕೂಟವು ನನಗೆ ಬಹಳ ಉಪಯೋಗಕಾರಿಯಾಗಿದೆ, ಪ್ರಾಪಂಚಿಕ ಜೀವನದಲ್ಲಿ ಅತೀ ಹೆಚ್ಚು ಪ್ರಾಮುಖ್ಯತೆ ನೀಡಿ ಅಧ್ಯಾತ್ಮಿಕ ಜೀವನದಿಂದ ದೂರ ಸರಿಯುವ ಹಂತದಲ್ಲಿರುವ ನಮಗೆ ಈ ಧ್ಯಾನಕೂಟದಿಂದ ನನ್ನ ಚಿಂತನೆಗಳಲ್ಲಿ ಬದಲಾವಣೆಯಾಗಿವೆ. ಈ ಆಡಂಬರದ ಜೀವನ ಕೆಲವು ಕ್ಷಣ ಮತ್ತು ಕೆಲವು ದಿನಗಳಿಗೆ ಸೀಮಿತ ಮಾತ್ರ ಯಾವುದೇ ಒಂದು ಆಕರ್ಷಣೆಗೆ ಒಳಗಾಗಿ ಆ ಆಕರ್ಷಣೆಯೇ ನಮ್ಮ ಜೀವನವನ್ನು ಹಾಳುಮಾಡುತ್ತದೆ ಎಂಬ ಅರಿವು ಈ ಒಂದು ಧ್ಯಾನಕೂಟದಿಂದ ನನಗೆ ಮನದಟ್ಟಾಗಿದೆ.



ನನ್ನ ಜೀವನದಲ್ಲಿ ಕೆಲವು ಸಮಸ್ಯೆಗಳಿದ್ದು ಆ ಸಮಸ್ಯೆಗಳಿಗೆ ಪರಿಹಾರವನ್ನು ಹುಡುಕುವ ಹಾದಿಯಲ್ಲಿದ್ದೆ ಆದರೆ ಯಾವ ರೀತಿಯ ದಾರಿ ಕಾಣದೆ ಇದ್ದಾಗ, ಈ ಧ್ಯಾನಕೂಟವು ನನ್ನ ಜೀವನ ಬದಲಾಯಿಸುವ ದಾರಿಯನ್ನು ತೋರಿಸಿತು. ಪ್ರಭು ಯೇಸು ಕ್ರಿಸ್ತರು ಹೇಳಿರುವಂತೆ "ಕೇಳಿರಿ ಕೊಡಲಾಗುವುದು, ಹುಡುಕಿರಿ ಸಿಗುವುದು,

ತಟ್ಟಿರಿ ಬಾಗಿಲು ತೆರೆಯಲಾಗುವುದು" ಎಂಬುದು ಸತ್ಯ. ನಾನು ಕಣ್ಣೀರಿಟ್ಟು ಬೇಡಿದ್ದನ್ನು ನನ್ನ ಯೇಸು ನನಗೆ ಕೊಡುತ್ತಾರೆ ಎಂಬ ಧೃಡ ನಂಬಿಕೆ ನನಗಿದೆ. ಪ್ರಾರ್ಥನೆಯಲ್ಲಿರುವ ಶಕ್ತಿ ಬೇರಾವುದರಲ್ಲಿಯೂ ಇಲ್ಲ. ಆದ್ದರಿಂದ ಈ ಧ್ಯಾನಕೂಟವು ಒಂದು ಆಧ್ಯಾತ್ಮಿಕ ನವೀಕರಣಕ್ಕೆ ಬಹಳ ಉಪಯೋಗವಾಗಿತ್ತು. ಈ ಧ್ಯಾನಕೂಟವನ್ನು ಏರ್ಪಡಿಸಿದ ವಂ। ಪಿಯುಸ್ ಡಿಸೋಜ ಇವರಿಗೆ ನನ್ನ ಮನದಾಳದ ವಂದನೆಗಳನ್ನು ಸಲ್ಲಿಸುತ್ತೇನೆ.

**ಕು. ನೀತ ಮಸ್ಕರೇನಸ್, ತೀರ್ಥಹಳ್ಳಿ**

## 9. ಆಂತರಿಕ ಸೌಖ್ಯವಾಗಿ ಮಾರ್ಪಟ್ಟ ಧ್ಯಾನ– 'ಪ್ರಜ್ವಲಿಸು':



ಜಗತ್ತಿಗೆ ನೀನೇ ಜ್ಯೋತಿ, ಬೆಟ್ಟದ ಮೇಲಿನ ಪಟ್ಟಣವನ್ನು ಮುಚ್ಚಿಡಲಾಗದು, ಅಂತೆಯೇ ಯಾರು ದೀಪವನ್ನು ಹಚ್ಚಿ ಬಟ್ಟಲ ಕೆಳಗೆ ಬಚ್ಚಿಡುವುದಿಲ್ಲ, ದೀಪಸ್ಥಂಬದ ಮೇಲೆ ಇಡುತ್ತಾರೆ. ಆಗ ಅದು ಮನೆಯಲ್ಲಿರುವ ಎಲ್ಲರಿಗೂ ಬೆಳಕನ್ನು ಕೊಡುತ್ತದೆ. ಅದೇ ರೀತಿ ನಿಮ್ಮ ಜ್ಯೋತಿ ಜನರ ಮುಂದೆ ಬೆಳಗಲಿ ಹೀಗೆ ಅವರು ನಿಮ್ಮ ಸತ್ಕಾರ್ಯಗಳನ್ನು ಕಂಡು ಸ್ವರ್ಗದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡಲಿ. (ಮತ್ತಾಯ:5:14–16) ಪ್ರಭು ಯೇಸು ಜಗತ್ತಿಗೆ ಬೆಳಕು, ಪರಮ ಜ್ಯೋತಿಯಾದ ಅವರು ನಾವೆಲ್ಲರು ಪ್ರಜ್ವಲಿಸಬೇಕೆಂದು ಬಯಸುತ್ತಿದಾರೆ. ಪ್ರಜ್ವಲಿಸು ಧ್ಯಾನಕೂಟವು ನಮ್ಮಂತ ಯುವಜನರ ಬಾಳನ್ನು ಉಜ್ವಲಿಸುವ ಜ್ಯೋತಿ ಎನ್ನಲು ಬಹಳ ಸಂತೋಷವಾಗುತ್ತಿದೆ.

ಈ ಧ್ಯಾನವು ಆಂತರಿಕ ಸೌಖ್ಯದ ವರವಾಗಿ ಮಾರ್ಪಟ್ಟಿದೆ. ಪ್ರಸ್ತುತ ಕಾಲದಲ್ಲಿ ಯುವಜನರು ಕಷ್ಟದ ಸಂಕೋಲೆಗೆ ಸಿಲುಕಿ ಅವೆಲ್ಲವನ್ನು ಎದುರಿಸಲು ಸಾಧ್ಯವಾಗದೆ ಆತ್ಮಹತ್ಯೆಯೇ ಪರಿಹಾರವೆಂಬ ಮನೋಸ್ಥಿತಿಯ ನಡುವೆ, ನಿನ್ನನು ಪ್ರಭು ಯೇಸು ಸ್ನೇಹಿತನಾಗಿ ಅವರಂತೆ ಪ್ರಜ್ವಲಿಸಲು ಕರೆ ನೀಡುತ್ತಿದ್ದಾರೆ ಎಂಬ ಸಂದೇಶವು ನನಗೆ ದೊರಕಿತು. ಈ ನಾಲ್ಕು ದಿನದ ಧ್ಯಾನವು ನನ್ನ ಮನಸ್ಸಿಗೆ ಆಂತರಿಕ ಸೌಖ್ಯವನ್ನು, ಮನಶಾಂತಿ, ಧೈರ್ಯ, ಹೊಸ ಜೀವನದ ದಾರಿಯನ್ನು ಅರಿಯಲು ಸಹಕಾರಿಯಾಗಿದೆ. ಸಂಗೀತದ ಸಪ್ತಸ್ವರಗಳು ಪ್ರಭು ಯೇಸುವನ್ನು ಆರಾಧಿಸಲು ಹಾಗೂ ಧ್ಯಾನಿಸಲು ಭಕ್ತಿಯುತ ವಾತಾವರಣ ನಮಗೆ ದೊರಕಿಸಿತು. ಶಿಸ್ತಿನ ವೇಳಾ ಪಟ್ಟಿ, ಗುರುಗಳ ಹಾಗು ಕನ್ಯಾ ಸ್ತ್ರೀಯರ ಪ್ರೇರಣೆ ಯುವಮಿತ್ರ ತಂಡದ ಶ್ರಮ, 24 ಗಂಟೆಗಳ ಪ್ರಾರ್ಥನಾ ತಂಡದ ಪ್ರಾರ್ಥನೆಗಳು ನಮ್ಮೆಲ್ಲರನ್ನು ಬಾ ದೇವರೊಂದಿಗೆ ಪ್ರಜ್ವಲಿಸು ಎಂದು ಕರೆದಂತಿದೆ. ಪ್ರಜ್ವಲಿಸು ಮುಂಬರುವ ದಿನಗಳಲ್ಲಿ ಹಲವಾರು ಯುವಜನರ ಜೀವನದಲ್ಲಿ ಪ್ರಜ್ವಲಿಸಲಿ ಎಂದು ಆಶಿಸುತ್ತೇನೆ.

**ಮೈಕಲ್ ಜಾಯ್‌ಸನ್, ಗೋಪಾಳ ಧರ್ಮಕೇಂದ್ರ**

## 10. ನವ ಜೀವನ ನೀಡಿದ ಪ್ರಜ್ವಲಿಸು ಧ್ಯಾನ:



ಪ್ರಜ್ವಲಿಸು ಧ್ಯಾನಕೂಟಕ್ಕೆ ಹೋಗುವುದು ಸಮಯ ವ್ಯರ್ಥವೆಂದು ಚಿಂತಿಸಿದ್ದೆ. ಧ್ಯಾನಕ್ಕೆ ಬರಲು ನನಗೆ ಬಹಳ ಬೇಜಾರಾಗುತಿತ್ತು. ಕೊನೆಯ ಕ್ಷಣದವರೆಗೂ ಸಹ ನಾನು ಹೋಗುವುದೊ ಬೇಡವೊ ಎಂಬ ಗೊಂದಲದಲ್ಲಿದ್ದೆ, ಏಕೆಂದರೆ ಇದೇ ಮೊದಲ ಬಾರಿಗೆ ನಾನು ನನ್ನ ಮನೆಯನ್ನು ಬಿಟ್ಟು ನಾಲ್ಕು ದಿನಗಳ ಕಾಲ ಹೊರಗಡೆ ಬಂದದ್ದು. ಈ ನಾಲ್ಕು ದಿನದ ಧ್ಯಾನಕ್ಕೆ ಬಂದ ನಂತರ ನನ್ನನ್ನೇ ನಾನು ಅರಿತುಕೊಂಡೆ. ಪ್ರಜ್ವಲಿಸು ಧ್ಯಾನವು ನನ್ನ ಮನಸ್ಸಿಗೆ ಸಂತಸವನ್ನು ತಂದಿದೆ. ಆಂತರಿಕ ಸೌಖ್ಯದ ಅರಾಧನೆಯಲ್ಲಿ ನಾನು ಮನ ಬಿಚ್ಚಿ ನನ್ನ ದೇವರೊಡನೆ ಮಾತನಾಡಿದೆ, ನನ್ನ ಕಂಗಳಲ್ಲಿ ನೀರು ಹರಿದು ಬಂದಿತು, ನನ್ನ ಮನಸ್ಸಿನಲ್ಲಿದ್ದಂತಹ ನೋವನ್ನು ದೇವರಲ್ಲಿ ಹಂಚಿಕೊಂಡೆನು ಆರಾಧನೆಯಲ್ಲಿ ದೊರೆತಂತಹ 13 ಸಂದೇಶಗಳಲ್ಲಿ ನನ್ನದೊಂದು ಸಾಕ್ಷಿಯೂ ಇದೆ. ನಾನು ಹಿಂದೊಂದು ಬಾರಿ ಮನಸ್ಸಿಗೆ ಬೇಜಾರಾದ ಕಾರಣ ಜೀವನವೇ ಬೇಡ ಎನಿಸಿತ್ತು. ಈ ಧ್ಯಾನಕೂಟದಿಂದ ನನ್ನ ಮನ ಪರಿವರ್ತನೆಗೊಂಡಿದೆ. ಪ್ರಜ್ವಲಿಸು ಧ್ಯಾನದಿಂದ ನನಗೆ ಪುನರ್ಜನ್ಮ ದೊರೆತಂತಾಗಿದೆ. ಇದರ ಪ್ರತಿಫಲವಾಗಿ ನಾನು ನನ್ನ ಮುಂದಿನ ಜೀವನವನ್ನು ದೇವರಿಗೆ ಮುಡಿಪಾಗಿಟ್ಟು ಗುರುಸೇವೆಗೆ ಸೇರಬೇಕೆಂದು ನಿರ್ಧರಿಸಿದ್ದೇನೆ. ಈ ಧ್ಯಾನಕ್ಕೆ ಬರಲು ಅವಕಾಶವನ್ನು ಒದಗಿಸಿದ ವಂ। ಪಿಯುಸ್ ಡಿಸೋಜರವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. **ಕು. ನವೀನ್ ಡೆಸಾ, ಮಾಳೂರು**

## 11. ದೇವರ ಅಸ್ತಿತ್ವದ ಅನುಭವ ನೀಡಿದೆ "ಪ್ರಜ್ವಲಿಸು":



ಪ್ರಭು ಯೇಸುವಿನಲ್ಲಿ ಆತ್ಮೀಯ ಯುವಮಿತ್ರರೆ, ಪ್ರಜ್ವಲಿಸು ಈ ಒಂದು ಧ್ಯಾನಕೂಟದಿಂದ ನನ್ನ ಜೀವನದಲ್ಲಿ ದೇವರ ಮೇಲಿನ ನಂಬಿಕೆ ಹೆಚ್ಚಾಯಿತು. ದೇವರು ನಿಜವಾಗಿಯೂ ಇದ್ದಾರಾ? ಎಂಬ ನನ್ನ ಸ್ನೇಹಿತರ ವ್ಯಂಗ್ಯ ಮಾತುಗಳಿಗೆ ಉತ್ತರವು ಈ ಧ್ಯಾನದಿಂದ ನನಗೆ ದೊರಕಿದೆ. ನನ್ನ ಮನಸಿನಲ್ಲಿದಂತಹ ಆಳವಾದ ನೋವನ್ನು ಯೇಸುವಿನೊಂದಿಗೆ ಹಂಚಿಕೊಂಡಿರುವುದರಿಂದ ನನ್ನ ಮನಸ್ಸು ತುಂಬಾ ಹಗುರವೆನಿಸುತ್ತಿದೆ. ನನ್ನಲ್ಲಿ ಇದ್ದಂತಹ ದೈಹಿಕ ಕಾಯಿಲೆಗಳು ಸಹ ಗುಣಹೊಂದಿರುವುದು ನನಗೆ ಅನುಭವವಾಗುತ್ತಿದೆ. ಪ್ರಜ್ವಲಿಸು ಧ್ಯಾನವು ನಿಜವಾಗಿಯೂ ಯುವಜನರಿಗೆ ಕ್ರಿಸ್ತನ ಹಾದಿಯಲ್ಲಿ ನಡೆಯಲು ಪ್ರೇರಣೆ ಎಂದು ಹೇಳಲು ಇಷ್ಟಪಡುತ್ತೇನೆ, ಧನ್ಯವಾದಗಳು. **– ಕು. ನಿವೇದಿತ ಡೆ'ಸಾ, ಮಾಳೂರು**

## 12. ಯುವಮಿತ್ರರಿಂದ ಪ್ರಜ್ವಲಿಸು ಎಂಬ ಯೇಸು ಸಂಚಲನ:



"ಸಜ್ಜನರ ಬೆಳಕು ಪ್ರಜ್ವಲಿಸುವುದು, ದುರ್ಜನರ ದೀಪವು ಆರುವುದು" (ಜ್ಞಾನೋಕ್ತಿ:13:9) ಆತ್ಮೀಯರೆ 'ಪ್ರಜ್ವಲಿಸು' ಧ್ಯಾನಕೂಟವು ಒಂದು ಸುಂದರ ಅನುಭವವನ್ನು ನಮ್ಮ ಶಿವಮೊಗ್ಗ ಧರ್ಮಕ್ಷೇತ್ರದ ಯುವಮಿತ್ರರಿಗೆ ನೀಡಿದೆ. ಶಿವಮೊಗ್ಗ ಧರ್ಮಕ್ಷೇತ್ರದಲ್ಲಿಯೇ ಮೊಟ್ಟಮೊದಲಬಾರಿಗೆ 450ಕ್ಕೂ ಹೆಚ್ಚು ಯುವಜನರು ಸೇರಿ ದೇವರ ಅನುಭವದಿಂದ ದೇವರ ಪ್ರೀತಿಯನ್ನು ಅರಿತುಕೊಂಡು ಇತಿಹಾಸದಲ್ಲೆಂದೂ ನಡೆಯದ ಕಾರ್ಯಕ್ರಮವಾಗಿದೆ.

ಈ ಧ್ಯಾನದಲ್ಲಿ ದೇವರ ವಾಕ್ಯದಿಂದ ನಮ್ಮೆಲ್ಲರ ಮನಪರಿವರ್ತನೆಯಾಗಿದೆ. ಪ್ರಜ್ವಲಿಸು ಧ್ಯಾನಕೂಟದಿಂದ ಹಲವಾರು ಯುವಜನರಿಗೆ ದೇವರು ನಮ್ಮನ್ನು ಪ್ರೀತಿಸುತ್ತಾರೆ ಎಂಬುದು ಮನದಟ್ಟಾಗಿದೆ. ಇಲ್ಲಿ ನಡೆದ ಪ್ರವಚನಗಳು ಹಾಗೂ ಜನರ ಸಾಕ್ಷಿಗಳು ನಮಗೆ ಸ್ಫೂರ್ತಿ. ಜೀವನದಲ್ಲಿ ಕಾಡುತ್ತಿದ್ದಂತಹ ನಿರಾಶೆ, ಸೋಲು ಎಂಬ ಹಲವಾರು ಪ್ರಶ್ನೆಗಳಿಗೆ ಆಂತರಿಕ ಸೌಖ್ಯ ಆರಾಧನೆಯೂ ಉತ್ತರವನ್ನು ನೀಡಿದೆ. ಪಾಪ ನಿವೇದನೆ ಸಂಸ್ಕಾರದ ಮೂಲಕ ನನ್ನ ಮನವು ಹಗುರವಾಗಿದೆ. ಆಂತರಿಕ ಸೌಖ್ಯದ ಆರಾಧನೆಯಲ್ಲಿ ಕಣ್ಣೀರಿಟ್ಟು ಪ್ರಾರ್ಥಿಸಿದಾಗ ನಾವು ಪವಿತ್ರಾತ್ಮಭರಿತರಾದೆವು. ದೇವರು ನಮ್ಮ ಯುವಮಿತ್ರರಿಗೆ ಹಲವು ರೀತಿಯಲ್ಲಿ ಮುಟ್ಟಿ ಆಶೀರ್ವದಿಸಿದ್ದನ್ನು ನಾನು ಕಣ್ಣಾರೆ ಕಂಡೆ. ಈ ಧ್ಯಾನಕೂಟದಲ್ಲಿ ಸಂಗೀತ ಸ್ತುತಿಗಳ ಮೂಲಕ ನಾವೆಲ್ಲರೂ ಕುಣಿದು ದೇವರಿಗೆ ಸ್ತುತಿಸ್ತೋತ್ರಗಳನ್ನು ಸಲ್ಲಿಸಿದೆವು.


ಈ ಧ್ಯಾನಕೂಟದ ಮುಂದಾಳತ್ವವಹಿಸಿ ನಡೆಸಿಕೊಟ್ಟಂತಹ ವಂ| ಪಿಯುಸ್ ಡಿಸೋಜರವರಿಗೆ, ಅಲ್ಲಿ ನಮಗಾಗಿ 24 ಗಂಟೆಗಳ ಕಾಲ ನಿರಂತರವಾಗಿ ಪ್ರಾರ್ಥಿಸಿದಂತಹ ಪ್ರಾರ್ಥನಾ ತಂಡ, ಗುರುಗಳು ಹಾಗು ಕನ್ಯಾಸ್ತ್ರೀಯರಿಗೂ ಹಾಗೂ ನಮ್ಮೆಲ್ಲರನ್ನು ಪ್ರೀತಿಯಿಂದ ಸತ್ಕರಿಸಿದ ಯುವಜನ ಕೇಂದ್ರಿಯ ಸಮಿತಿಯ ಸದಸ್ಯರಿಗೂ ನನ್ನ ಧನ್ಯವಾದಗಳು. ಜೈ ಯೇಸು ಕ್ರಿಸ್ತ

**ಕು. ಆರೋನ್ ಪ್ರೀತಮ್. ಕೆ, ಜೊಗ**

## 13. ಮಾದಕ ವ್ಯಸನದಿಂದ ಮುಕ್ತಿಪಡೆದು ಪ್ರಜ್ವಲಿಸಿದ ಅನುಭವ:

ಪ್ರಜ್ವಲಿಸು, ಈ ನಾಲ್ಕು ದಿನದ ಧ್ಯಾನಕೂಟದಲ್ಲಿ ನಾನು ಕಲಿತಂತಹ ವಿಷಯಗಳು ಹಲವಾರು. ಈ ಧ್ಯಾನಕೂಟವು ನನ್ನ ಜೀವನದ ಪರಿವರ್ತನೆಯ ಸಮಯವಾಗಿ ಮೂಡಿಬಂದಿದೆ. ಆಪ್ತ ಸಮಾಲೋಚನೆಯ ಮೂಲಕ ಜೀವನದ ಮೌಲ್ಯವನ್ನು ಹಾಗೂ ಪ್ರಾರ್ಥನೆಯ ಶಕ್ತಿಯನ್ನು ಅರಿತುಕೊಂಡೆ. ನಾನು ಒಂದು

ಸಾಕ್ಷಿಯನ್ನು ನಿಮ್ಮಲ್ಲಿ ಹಂಚಿಕೊಳ್ಳಲು ಇಷ್ಟಪಡುತ್ತೇನೆ. ಬಹಳಷ್ಟು ದಿನಗಳಿಂದ ನನ್ನ ತಮ್ಮ ಮಾದಕ ವಸ್ತುಗಳಿಗೆ ವ್ಯಸನಿಯಾಗಿದ್ದನು. ನನ್ನ ಸಹೋದರನು ಮಾದಕ ವ್ಯಸನದಿಂದ ಮುಕ್ತಿಯನ್ನು ಪಡೆಯುವಂತೆ ಪ್ರಾರ್ಥಿಸುವ ಉದ್ದೇಶದಿಂದಲೇ ನಾನು ಈ ಪ್ರಜ್ವಲಿಸು ಧ್ಯಾನದಲ್ಲಿ ಭಾಗವಹಿಸಿದ್ದು ಕಾರಣ. ಆಂತರಿಕ ಸೌಖ್ಯ ಆರಾಧನೆಯಲ್ಲಿ ನಾನು ಕಣ್ಣೀರಿಟ್ಟು ನನ್ನ ತಮ್ಮನಿಗಾಗಿ ಪ್ರಾರ್ಥಿಸಿದೆ. ನನ್ನ ದೇವರು ನನ್ನ ಪ್ರಾರ್ಥನೆಯನ್ನು ಕೇಳಿದ್ದಾರೆ. ನಾನು ಮನೆಗೆ ಹಿಂತಿರುಗಿದಾಗ ನನಗೆ ತಿಳಿಯಿತು ನನ್ನ ತಮ್ಮ ಮಾದಕ ವ್ಯಸನದಿಂದ ಸಂಪೂರ್ಣ ವಿಮುಕ್ತಿ ಪಡೆದು ಹೊಸ ಜೀವನ ಆರಂಭಿಸಿದ್ದಾನೆಂದು. ಅಂದು 7 ಜನರಿಗೆ ದೇವರಿಗೆ ಮಾದಕ ವಸ್ತುಗಳಿಂದ ಬಿಡುಗಡೆ ನೀಡಿದ್ದಾರೆಂದು ಗುರುಗಳು ಆಂತರಿಕ ಸೌಖ್ಯ ಆರಾಧನೆಯ ಸಮಯದಲ್ಲಿ ಪ್ರಕಟಿಸಿದ್ದರು. ಆ 7 ಜನರಲ್ಲಿ ನನ್ನ ತಮ್ಮನು ಸಹ ಒಬ್ಬನು. ಮೊದಲಿಗೆ ನನ್ನ ದೇವರಿಗೆ ಸ್ತೋತ್ರವನ್ನು ಸಲ್ಲಿಸುತ್ತೇನೆ. ಈ ಅವಕಾಶವನ್ನು ನೀಡಿದಂತಹ ವಂ| ಪಿಯುಸ್ ಡಿಸೋಜರವರಿಗೂ ಸಹ ನನ್ನ ಮನದಾಳದ ಧನ್ಯವಾದಗಳನ್ನು ಸಲ್ಲಿಸುತ್ತೇನೆ.



**ಕು. ಪ್ರಿಯಾಂಕ, ಶರಾವತಿನಗರ**

## 14. ಸೋಲಿಗೆ ಸೋಲದೆ ಪ್ರಜ್ವಲಿಸಲು ಸ್ಫೂರ್ತಿ:




ಪ್ರಜ್ವಲಿಸು ಧ್ಯಾನಕೂಟವು ನನ್ನ ಜೀವನದಲ್ಲಿ ದೇವರ ಅನುಭವವನ್ನು, ಚೈತನ್ಯವನ್ನು ನವಸ್ಫೂರ್ತಿಯನ್ನು ನೀಡಿದೆ. ಈ ಧ್ಯಾನಕೂಟಕ್ಕೆ ಬಂದಂತಹ ಹಲವಾರು ಸಂಪನ್ಮೂಲ ವ್ಯಕ್ತಿಗಳ ಮುಖಾಂತರ ನಾವು ಉತ್ತಮ ಜೀವನವನ್ನು ಜೀವಿಸಲು ಬೇಕಾದಂತಹ ಹಲವಾರು ಮೌಲ್ಯಗಳನ್ನು ಹಾಗೂ ಪ್ರಭು ಯೇಸು ನಮ್ಮ ಜೀವನದಲ್ಲಿ ಎಷ್ಟು ಮಹತ್ವಪೂರ್ಣರೆಂದು ತಿಳಿದುಕೊಂಡೆನು. ಹಲವಾರು ಯುವಜನರು ಎದುರಿಸುತ್ತಿರುವಂತಹ ನೋವು, ನಿಂದೆ, ಅವಮಾನ ಹಾಗೂ ಸೋಲುಗಳಿಗೆ ಎದೆಗುಂದದೆ ತಮ್ಮ ಅಮೂಲ್ಯವಾದ ಜೀವನವನ್ನು ಪ್ರಭುವಿಗಾಗಿ, ಪ್ರಭುವಿನೊಂದಿಗೆ ಜೀವಿಸಬೇಕು ಎಂಬುವುದನ್ನು ತಮ್ಮ ಜೀವನದ ನೈಜ್ಯ ಘಟನೆಗಳೊಂದಿಗೆ ನಮ್ಮ ಮನಮುಟ್ಟುವಂತೆ ತಿಳಿಸಿದರು. ಸಿಸ್ಟರ್. ಸೆವ್ರಿನ್ ಮೆನೆಜಿಸ್‌ರವರ ಜೀವನದಲ್ಲಿ ದೇವರು ಮಾಡಿದ ರಕ್ಷಣಾ ಕಾರ್ಯಗಳನ್ನು ಕೇಳಿ ನನಗೆ ಯೇಸುವಿನಲ್ಲಿ ಆಳವಾದ ವಿಶ್ವಾಸವನ್ನು ಮೂಡಿಸಿತು. ಆಪ್ತಸಮಾಲೋಚನೆಯಲ್ಲಿ ನಾನು ಸಹೋದರಿ ಪ್ರನಾಳಿ ಅವರಲ್ಲಿ ನನ್ನ ಜೀವನದ ಕಹಿ ಘಟನೆಗಳನ್ನು ಹಂಚಿಕೊಂಡೆನು. ನಮಗಾಗಿ

ಶಿಲುಬೆಯ ಮೇಲೆ ಜೀವಕೊಟ್ಟ ಯೇಸುವಿನಲ್ಲಿ ನನ್ನ ಕಷ್ಟಗಳನ್ನು ಸಮರ್ಪಿಸಬೇಕು ಎಂಬ ಮುಂತಾದ ಅಂಶಗಳನ್ನು ಅವರು ನನಗೆ ತಿಳಿಸಿದರು. ಈಗ ನಾನು ನನ್ನ ಜೀವನದಲ್ಲಿ ಬರುವ ಯಾವುದೇ ಸವಾಲನ್ನು ಎದುರಿಸಲು ಯೇಸು ನನ್ನೊಂದಿಗಿದ್ದಾರೆ ಎಂಬ ಧೃಢ ವಿಶ್ವಾಸ ನನ್ನಲ್ಲಿ ಬಂದಿದೆ. ನಮಗೆ ಹೊಸ ಅನುಭವವನ್ನು ಹಾಗೂ ಈ ಪ್ರಜ್ವಲಿಸು ಧ್ಯಾನಕೂಟಕ್ಕೆ ಬರಲು ಅವಕಾಶವನ್ನು ನೀಡಿದ ವಂ। ಪಿಯುಸ್ ಡಿಸೋಜ ಹಾಗೂ ಯುವಜನ ಕೇಂದ್ರೀಯ ಸಮಿತಿಯ ಸದಸ್ಯರಿಗೂ ನನ್ನ ಮನದಾಳದ ವಂದನೆಯನ್ನು ಸಲ್ಲಿಸುತ್ತೇನೆ. ಈ ರೀತಿಯ ಹಲವಾರು ಕಾರ್ಯಕ್ರಮಗಳು ಮುಂದಿನ ದಿನಗಳಲ್ಲಿ ಇನ್ನಷ್ಟು ಮೂಡಿಬರಲಿ ಎಂದು ಆಶಿಸುತ್ತೇನೆ.

**ಕು. ಸೆಲಿನ್ ಸೆವ್ರಿನ್, ಕಾರೆಹಳ್ಳಿ**

## 15. ದೇವರ ಪ್ರಸನ್ನತೆಯ ದಿನಗಳವು:




ಪ್ರಜ್ವಲಿಸು ಧ್ಯಾನಕೂಟ ನನಗೆ ತುಂಬಾ ಸಂತೋಷ ಹಾಗೂ ಸಮಾಧಾನವನ್ನು ನೀಡಿದೆ. ಆಂತರಿಕ ಸೌಖ್ಯ ಆರಾಧನೆಯಲ್ಲಿ ದೇವರನ್ನು ಹೃದಯಾಂತರಾಳದಿಂದ ಅನುಭವಿಸಲು ಸಾಧ್ಯವಾಯಿತು. ನನ್ನ ಮನಸ್ಸಿಗೆ ಶಾಂತಿ ಹಾಗೂ ನೆಮ್ಮದಿ ದೊರಕಿತು. ನಾವೆಲ್ಲರೂ ಪ್ರಭುವಿನ ಸ್ಪರ್ಶವನ್ನು ಪಡೆದೆವು. ಪಾಪ ನಿವೇದನೆ ಮತ್ತು ಪಾಪಗಳ ಕುರಿತಾಗಿ ವಂ। ಫ್ರಾಂಕ್ಲಿನ್ ಡಿಸೋಜ ಮತ್ತು ವಂ। ರೋಮನ್ ಪಿಂಟೋರವರ ಉಪನ್ಯಾಸಗಳು, ನಾವು ಮಾಡಿರುವ ಎಲ್ಲಾ ಪಾಪಗಳ ಬಗ್ಗೆ ಅರಿವನ್ನು ಮೂಡಿಸಿತು. ನಾವು ಕ್ಷಮಿಸಲು ಕಷ್ಟಪಡುತ್ತಿರುವ ಎಲ್ಲರನ್ನು ಕ್ಷಮಿಸಿ ನಮ್ಮ ಪಾಪಗಳನ್ನು ಒಪ್ಪಿಕೊಂಡು ಒಳ್ಳೆಯ ಪಾಪನಿವೇದನೆ ಸಂಸ್ಕಾರವನ್ನು ಸ್ವೀಕರಿಸಲು ಅನುಕೂಲವಾಯಿತು. ಯೇಸು ನಮನ ಮತ್ತು ಆಧ್ಯಾತ್ಮಿಕ ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಗುರುಗಳು ಹಾಡಿದ ಹೊಸ ಹಾಗೂ ಹಳೆಯ ಕ್ರೈಸ್ತ ಭಕ್ತಿಗೀತೆಗಳು ನಮ್ಮನ್ನು ಭಾವ ಪರವಶವನ್ನಾಗಿಸಿತು. ಸಂಗೀತ ಸುಧೆಯನ್ನು ನಮಗೆ ನೀಡಿತು. ನಮ್ಮ ಧರ್ಮಕೇಂದ್ರದ ಬಹಳಷ್ಟು ಯುವಕ ಯುವತಿಯರು ಇದರಲ್ಲಿ ಭಾಗವಹಿಸಿ ದೇವರ ಅನುಭವವನ್ನು ಪಡೆದರು.

ಈ ಮೂರು ದಿನಗಳು ದೇವರ ಪ್ರಸನ್ನತೆಯಲ್ಲಿ ಕಳೆದದ್ದು ಗೊತ್ತೇ ಆಗಲಿಲ್ಲ. ಈ ಧ್ಯಾನಕ್ಕಾಗಿ ಶ್ರಮಿಸಿದ ವಂ। ಪಿಯುಸ್ ಡಿಸೋಜ ಮತ್ತು ಇತರೆ ಗುರುಗಳು ಹಾಗೂ ಕನ್ಯಭಗಿನಿಯರಿಗೂ, ನಮ್ಮ DEXCO ಸದಸ್ಯರಿಗೂ ಮತ್ತು ನಮಗಾಗಿ ಪ್ರಾರ್ಥಿಸಿದ ಮಧ್ಯಸ್ಥಿಕಾ ಪ್ರಾರ್ಥನಾ ತಂಡದವರಿಗೂ ನನ್ನ ಮನದಾಳದ ವಂದನೆಗಳು. ಇಂತಹ ಕಾರ್ಯಕ್ರಮಗಳು ಇನ್ನಷ್ಟು ಜರುಗಲಿ ನಮ್ಮ ಯುವಜನತೆ ಒಳ್ಳೆಯ ಮಾರ್ಗದರ್ಶನ ಪಡೆದು ದೇವರಲ್ಲಿಯ ವಿಶ್ವಾಸ ವೃದ್ಧಿಯಾಗಲಿ ಎಂಬುದೇ ನನ್ನ ಹಾರೈಕೆ.

**ದೀಕ್ಷಾ ಡಿಮೆಲ್ಲೊ, ಸೇಕ್ರೆಡ್ ಹಾರ್ಟ್ ಪ್ರಧಾನಾಲಯ**

## 16. ತಲೆನೋವು ಗುಣಪಡಿಸಿದ ಆಂತರೀಕ ಸೌಖ್ಯ ಪ್ರಾರ್ಥನೆ

ನಮ್ಮ ಮನೆಯಿಂದ 3 ಜನ ಯುವಮಿತ್ರ ಪ್ರಜ್ವಲಿಸು ಧ್ಯಾನಕೂಟದಲ್ಲಿ ಭಾಗವಹಿಸಿದೆವು. ನನ್ನ ಅಕ್ಕ, ನಾನು ಮತ್ತು ನನ್ನ ತಮ್ಮ. ನನಗೆ ದೇವರ ಮೇಲೆ ಸಂಪೂರ್ಣ ನಂಬಿಕೆ ಬಂದಿದ್ದು ಯುವಮಿತ್ರ ಧ್ಯಾನಕೂಟದಲ್ಲಿ. ಆಂತರಿಕ ಸೌಖ್ಯ ಆರಾಧನೆಯಲ್ಲಿ ನಾನು ಏನು ಬೇಡುತ್ತಿದ್ದೆ ಅದು ವಂ। ಪಿಯುಸ್ ಡಿಸೋಜರವರು ಹೇಳುತ್ತಿದ್ದರು. ನನಗೆ ತುಂಬಾ ತಲೆನೋವು ಮೊದಲು ಬರುತ್ತಿತ್ತು. ಆದರೆ ಆ ಧ್ಯಾನಕೂಟದಲ್ಲಿ ದೇವರ ಬಳಿ ನಾನು ಮಾತನಾಡಿದೆ. ಈಗ ನನ್ನ ತಲೆನೋವು ಸಂಪೂರ್ಣ ಮಾಯವಾಗಿದೆ. ಯೇಸುವಿಗೆ ಆರಾಧನೆ ಸಲ್ಲಿಸುತ್ತೇನೆ.



**ಅನಿತ್ಯ ಡಿ'ಸೋಜ,**
**ತೀರ್ಥಹಳ್ಳಿ**

## 17. Deep Experience of Rising with the Lord...

I am Sahana from Chitradurga Parish. "Yuvamitra" youth commission of shimoga diocese had organized psycho-spiritual retreat for all the youth of the diocese of Shimoga in Harihar. I thought it would be like a camp. My parents forced me to attend it. Due to the Samudayothsava in our parish I was the only one to attend the retreat.



First day it was not so interesting because we had only action songs, praise and worship. Second day listening to the word of God, I was inspired a lot. And I know this is for the first time in the history of Shimoga Diocese a retreat was arranged for the youth. Such retreats are a great help for the youth to come out of their stress and depression.

I was touched by the Lord. There was twenty four hours of intercessory prayer organized for the success of the retreat. I find insufficient words to thank them. The testimonies of different persons were really inspiring.

If we have retreats like this once a year, it would be very useful for each and every youngster. Thus bring back all our scattered youth to Jesus.

**Miss. Sahana, Chitradurga**

## 18. Awesome experience of Jesus Cafe...

Eight members from our parish attended the retreat. We did not expect that this retreat would hit the highest point level of Divine power. When we heard, there is a retreat in Harihara arranged for youth called "RISE ABOVE" organised by YUVAMITRA, We thought it will be too mind-numbing and prepared to have full of entertainment through many ways. On the first day we did not participate wholeheartedly. But on the 6th morning the tone of drawing Divine power from above began. Abundant God's blessings were flowing all through the retreat days and the Sacrament of reconciliation and inner healing was an awesome experience. Indeed we were able to be bathed in the Divine Mercy of the Lord. Most of us felt extremely emotional after we ventilated our problems and got solutions through Spiritual Counselling. I congratulate and remain very grateful to the choir members, who enlightened us to that Divine power and helped us to Connect with THE Supreme God.



Our DEXCO (Diocesan Executive Committee) members worked hard to create a peaceful atmosphere in order to help us to experience the love of the Lord. All the sessions empowered us and enjoyed a lot with them and special thanks to the intercessory team who had prayed for us throughout. We always appreciate their generosity and goodwill.

The Priests from different parishes who had come to pray for us and spend their precious time with us, transformed our hearts. The Jesus cafe is one of the beautiful session, made us to understand the

plan of God in every ones lives. It also changed our life and helped us to be a better and beautiful persons. We really want to thank all persons who were like leaders to change our little hearts to become magnanimous personalities. Dear Fr. Pius D' Souza you made us extremely happy and totally changed our distorted moods, to become Christ centered and energized youth.

**Mr. Allwyn Ferandis & team, Soraba**

## 19. Jesus Healed my Shoulder Pain

Praise the lord. RISE ABOVE was a good retreat for all the youth. I was suffering from shoulder pain, during inner healing adoration it was healed by the healing touch of Jesus. After three years I am attending this sort of retreat. Now my mind is fresh .I am thankful to Fr. Pius D'Souza, Youth director of the Diocese for giving me an opportunity to attend the retreat and also to DEXCO members.



**- Mr. Albin, Ragigudda**

## 20. EXPERIENCE OF GOD'S LOVE

It's been my greatest experience as a participant of RISE ABOVE. My life was a nightmare for me before I came to the retreat. To be frank I lost my faith in God totally. I have everything in my life money, clothes, education, friends and everything I need. But the love of my parents which I was longing for, disappeared from my life. I had gone into a life of melancholy seeing my parents and my situation. When I came to Rise above psycho-spiritual retreat, I understood to grasp myself and I analyzed who I am? I got back my faith and love of God in my life. I took mother Mary at every moment of my life after Mrs. Pranali's counseling. I made up my mind to reach my goal by



clipping with Jesus. I will be a best example by being a holy catholic daughter to the church. I thank each one who organized the retreat. I thank God for building my life as a Child of God.

**Miss. Soumya Clara, Davangere**

## 21. A Memorable Event:

The dates from 05-10-19 to 08-10-19 will never be erased from our memory as Rise Above Retreat has built each of us who participated in the retreat. The rise above retreat was very inspiring one. All the youth were inspired from this retreat to reach out to the other youth who are depressed and have lost a sense of living with joy. Sessions were impressive. DEXCO members worked hard during this retreat to bring us more closer to the Lord to experience the spiritual richness.



Counseling and intercessory prayers have been a blessing for all the youth who lost hope in their lives. Fr. Roman Pinto, Fr. Venus Praveen and Fr. Franklin D' Souza who encouraged the youth with their talks have built most of us into spiritually bound children of God. Fr. Pius D' Souza worked hard for the success of the retreat and to make all the youth of the Diocese, salt of the earth and light to the world. Along with the music group (Bro Alban & Group) 8 priests sang the hymns that were very pleasant. Reconciliation, inner healing and adoration really made us to realize that we are the image of the Triune God. It was so beautiful! All the youth enjoyed the Spiritual journey. Thank you Fr Pius D'Souza for organizing the retreat.

**Miss. Royce, Sacred Heart Cathedral.**

## 22. ನವ ಚೈತನ್ಯ ಮೂಡಿಸಿದ ಪ್ರಜ್ವಲಿಸು ಧ್ಯಾನ

ಶಿವಮೊಗ್ಗ ಧರ್ಮಕ್ಷೇತ್ರದ ಯುವಮಿತ್ರ ಯುವಜನ ಆಯೋಗವು ಆಯೋಜಿಸಿರುವ ಈ ಧ್ಯಾನಕೂಟವು ವಿಭಿನ್ನವಾಗಿತ್ತು. ಮೊದಲು ಈ ಧ್ಯಾನಕೂಟಕ್ಕೆ

ಹೋಗುವಾಗ ನಮಗೆ ತುಂಬಾ ಭಯವಿತ್ತು. ಅಲ್ಲಿ ಹೋದಾಗ ಎಲ್ಲಾ ಯುವಮಿತ್ರರನ್ನು ನೋಡಿ ಭಯವು ಮಾಯವಾಗಿ ಸಂತೋಷ ಮನೆಮಾಡಿತು.



ಇನ್ನು ಮುಂದೆ ಇಂಥಹಾ ಧ್ಯಾನಕೂಟಗಳಿಗೆ ಹೋಗಬೇಕೆಂಬ ಉತ್ಸಾಹ ನಮ್ಮಲ್ಲೂ ಉದ್ಭವವಾಯಿತು. ದೇವರ ಮೇಲಿನ ನಂಬಿಕೆ, ವಿಶ್ವಾಸ ಇನ್ನೂ ಬಲಗೊಂಡಿತು. ಧ್ಯಾನಕ್ಕೆ ಬಂದಿದ್ದ ಪ್ರತಿಯೊಬ್ಬರೂ ದೇವರು ನೀಡಿದ ವರದಾನಗಳನ್ನು ಹಂಚಿಕೊಂಡಾಗ ನಮಗೆ ಬಹಳ ಸಂತೋಷವಾಯಿತು. ಫಾದರ್ ರೋಮನ್ ಪಿಂಟೊ, ಫಾದರ್ ಫ್ರಾಂಕ್ಲಿನ್ ಡಿ'ಸೋಜರವರ ಪ್ರಬೋಧನೆಗಳು ನಮ್ಮಲ್ಲಿ ಹೊಸ ಚೈತನ್ಯವನ್ನು ನೀಡಿದಂತಹ ಅನುಭವವಾಯಿತು. ಈ ವಿಶೇಷ ಧ್ಯಾನಕೂಟವನ್ನು ಆಯೋಜಿಸಿದ ಫಾದರ್ ಪಿಯುಸ್ ಡಿಸೋಜರವರಿಗೆ ನಾವೆಲ್ಲವೂ ಅಭಾರಿ.

**ಕು. ಪ್ರಿಯಾ, ಹಸೂಡಿ ಫಾರಂ, ಶಿವಮೊಗ್ಗ**

## 23. Rise Above; the most precious 4 days of our life:

It was a great pleasure to be a part of this retreat. Everything was well planned, systematically organized and sessions were informative. We were inspired by the testimonies. The days we spent were the most precious days of our life, the spiritual teachings brought us closer to Jesus. The most important part of retreat was counselling which made us to understand our own life, by this we could be able to make some corrections in our life. Counselling is really required at this stage of life because youth will be disturbed and unable to take right decisions. Inner healing adoration was very good; we felt the presence of God during the adoration.



Such retreats are very essential in life of every youth to come out of depression and stressful life. Apart from the sessions the accommodations and food was very well organised. We met people from different places with different mentalities. The word 'RISE ABOVE ' fills our heart with new hope of life. I thank Rev. Fr Pius D'Souza for

organising this retreat and showering the blessings and joy on every youth. I also thank Rev. Dr Anthony Peter for providing all the necessary facilities.

**Angelina N, Cathedral, Shimoga**

## 24. Now I know that God is real and He Exists:

"When prayers go up, blessings come down because God loves you so much"… RISE ABOVE Psycho spiritual retreat for youth has given me a new life to turn myself towards God. Because of stress and worries I hated myself and lost hope and trust in God. Due to busy life and unsolved problems I stopped praying too.



When I heard Sr Sevrine Menezes, Br Prakash preaching I was just inspired by their testimonies that how they are blessed with miracles in their life. I was asking to myself why God is not answering to my prayers? when I heard the preachers saying 'talk to God daily He is just waiting for you' this completely changed my outlook of prayer. Action song gave a different energy to praise God by dancing. I enjoyed praising God with "yes lord, yes lord, yes yes lord" Hymn.

During the confession I felt one type of tranquility in my life, inner healing adoration was a unique experience that made me so relaxed and filled with inner peace. When I was praying inarticulate sounds of pain, I have given all my sorrows, worries, and weakness to God and He has filled me with showers of blessings with joy and happiness and strengthened me. I feel very happy after the inner healing session. Adoration was a time to talk with God with open heart, when the Holy Spirit comes upon us blessings multiply worries are put to rest and smiles get bigger. **- Cynthia Dias. JogFalls**

## 25. Helped me to Love Jesus:

"RISE ABOVE" retreat has helped me to love God deeply. This retreat was truly a unique experience in my life which enlightened my mind. Going to the retreat I didn't have high hopes I never really

believed that God was real but after "RISE ABOVE" retreat, I believed in God so much it was a beautiful moment in my life. Thank you Jesus for this beautiful opportunity.



**Monisha Furtado, Soraba**

## 26. Rise Above: One of the main events in my life.

Firstly I was not at all interested in this retreat. But later I started to enjoy it. Because there were lot of good sessions. Counseling and confession. The youth band was awesome!! So many other events were awesome. Especially the inner healing adoration was the main attraction of that retreat. I felt the presence of God leading me during Inner Healing sessions. I completely forgot myself during the adoration. The bhajan and the singing program by the priests were fabulous. I enjoyed each and every moment in the retreat with Jesus.



**Poornima, New Town, Bhadravathi**

## 27. ಪ್ರತಿಯೊಂದರಲ್ಲೂ ಉತ್ಕೃಷ್ಟವಾದುದ್ದನ್ನೇ ನೀಡಿದ್ದೀರಿ...

ನವನಗರ ಧರ್ಮಕೇಂದ್ರದಿಂದ ಭಾಗವಹಿಸಿದ ನಾನು ನನ್ನ ಅನಿಸಿಕೆಗಳನ್ನು ಹಂಚಿಕೊಳ್ಳಲು ಬಹಳಷ್ಟು ಉತ್ಸುಕನಾಗಿದ್ದೇನೆ. ಕಾರ್ಯಕ್ರಮವು ಬಹಳ ಅಚ್ಚುಕಟ್ಟಾಗಿ ಸುಂದರವಾಗಿ ಮೂಡಿಬಂದಿದೆ. ಯಾವುದೇ ಪೂರ್ವಾಪೇಕ್ಷೆ ಇಲ್ಲದೇ ಬಂದ ನನಗೆ ದಿನದಿಂದ ದಿನಕ್ಕೂ ಇನ್ನಷ್ಟು, ಮತ್ತಷ್ಟು ಉತ್ಸುಕತೆ ಹೆಚ್ಚಾಗುತ್ತಲೇ ಇತ್ತು! ಅಯ್ಯೋ, ಇಷ್ಟು ಬೇಗನೆ ನಾಲ್ಕು ದಿನಗಳು ಕಳೆದು ಹೋಯಿತೇ!!? ಎಂದು ಕೊಳ್ಳುವಂತ್ತಿತ್ತು.

ಮೊದಲನೇಯ ದಿನದ ಗಾಯನವು ಸ್ವರ್ಗಸದೃಶ್ಯವಾಗಿತ್ತು. ಅದಕ್ಕೆ ಕಾರಣರಾದ ಎಲ್ಲಾ ಗಾಯಕರಿಗೂ ಸಂಗೀತ ನುಡಿಸಿದವರಿಗೂ ವಂದನೆಗಳು. ಎರಡನೇಯ ದಿನದಲ್ಲಿ ತಮ್ಮ



ಜೀವನಗಾಥೆಯ ಸಾಕ್ಷಿಯಿಂದ ನಮ್ಮನ್ನು ಕ್ರಿಸ್ತರ ಹಾದಿಯಲ್ಲಿ ಸಾಗಲು ಹುರಿದುಂಬಿಸಿದ ಕ್ರಿಸ್ತರ ನೈಜ ಸಾಕ್ಷಿಗಳಿಗೆ ನನ್ನ ಅನಂತ ವಂದನೆಗಳು. ಎರಡನೇಯ ದಿನದ ಕೊನೆಯಲ್ಲಿ ನಡೆದ ಭಕ್ತಿಗೀತೆಗಳ ಭಜನೆಯಂತೂ ತುಂಬಾ ಹೃದಯ ಸ್ಪರ್ಷಿಯಾಗಿತ್ತು. ನನ್ನನ್ನು ರೋಮಾಂಚನಗೊಳಿಸಿತ್ತು. ಈ ಕಾರ್ಯಕ್ರಮ ನೆರವೇರಿಸಿದ ಗುರುವೃಂದದವರಿಗೆ ಧನ್ಯವಾದಗಳು.

ಮೂರನೇ ದಿನದ ಆಪ್ತ ಸಮಾಲೋಚನೆ ಹಾಗೂ ಪಾಪನಿವೇದನೆಯ ಸಂಸ್ಕಾರವು ಪ್ರಸ್ತುತ ಯುವಜನರಿಗೆ ಅತ್ಯವಶ್ಯಕ ಹಾಗೂ ಪ್ರಸ್ತುತವಾಗಿದೆ. ಆಂತರೀಕ ಸೌಖ್ಯದ ಆರಾಧನೆಯು ತುಂಬಾ ಚನ್ನಾಗಿತ್ತು. ಹಲವರು ಆಂತರೀಕ ಹಾಗೂ ಶಾರೀರಿಕ ಸೌಖ್ಯವನ್ನು ಪಡೆದುಕೊಂಡಿದ್ದಾರೆ. ದಿನದ ಕೊನೆಯಲ್ಲಿ ಯಾಜಕಬಳಗ ನಡೆಸಿಕೊಟ್ಟ ಸಂಗೀತ ಸಂಜೆ ಕಾರ್ಯಕ್ರಮವು ನಮ್ಮನ್ನು ಭಕ್ತಿಪರವಶರನ್ನಾಗಿಸಿ ಹಾಡಿ ನರ್ತಿಸುವಂತೆ ಮಾಡಿದ ಗುರುವೃಂದಕ್ಕೆ ನನ್ನ ಹೃದಯಾಂತರಾಳದ ನಮನಗಳು.

ನಾಲ್ಕನೆ ದಿನ ಧ್ಯಾನಾರ್ಥಿಗಳು ತಾವು ಪ್ರಜ್ವಲಿಸಿದ ಅನುಭವವನ್ನು ಮನಮುಟ್ಟುವಂತೆ ಹಂಚಿಕೊಂಡಿದ್ದಾರೆ. ಈ ಎಲ್ಲಾ ಕಾರ್ಯಕ್ರಮಗಳನ್ನು ನಮಗಾಗಿ ಅಣಿಗೊಳಿಸಿದ ನಮ್ಮ ಯುವಜನ ಆಯೋಗದ ನಿರ್ದೇಶಕರಿಗೆ ನನ್ನ ಹಾಗೂ ನನ್ನ ಧರ್ಮಕೇಂದ್ರದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ. ನೀವು ನಮಗೆ ಪ್ರತಿಯೊಂದರಲ್ಲೂ ಉತ್ಕೃಷ್ಟವಾದುದ್ದನ್ನೇ ನೀಡಿದ್ದೀರಿ. ಇಂತಹ ಮತ್ತಷ್ಟು ಕಾರ್ಯಕ್ರಮಗಳು ಇನ್ನು ಮುಂದೆಯೂ ನಡೆಯಲೆಂದು ನಾನು ಕಳಕಳಿಯ ಮನವಿಯನ್ನು ನಿಮ್ಮ ಮುಂದಿಡುತ್ತೇನೆ. ಕಾರ್ಯಕ್ರಮದ ಯಶಸ್ಸಿಗೆ ಹಗಳಿರುಳೆನ್ನದೆ ನಮಗಾಗಿ ದುಡಿದ ಕೇಂದ್ರಿಯ ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ಅನಂತ ವಂದನೆಗಳು. ಕಾರ್ಯಕ್ರಮದ ಯಶಸ್ಸಿಗೆ ಪೂರಕವಾಗಿ 24ಗಂಟೆಗಯೂ ಬಿಡುವಿಲ್ಲದೆ ಪ್ರಾರ್ಥಿಸಿದ ಪ್ರಾರ್ಥನಾ ತಂಡದ ಸದಸ್ಯರಿಗೂ ಆತ್ಮೀಯ ಧನ್ಯವಾದಗಳು.

**ಸಬ್ಯಾಸ್ಟೀನ್ ವಿನೊದ್, ನ್ಯೂ ಟೌನ್, ಭದ್ರಾವತಿ**

## 28. ಆಧ್ಯಾತ್ಮಿಕ ಜೀವನಕ್ಕೆ ನವ ದಿಸೆ ತೋರಿಸಿತು Rise Above:

ಯುವಮಿತ್ರ ಆಯೋಜಿಸಿದ "ಪ್ರಜ್ವಲಿಸು ಯುವ ಜನರಿಗಾಗಿ ಮನೋ-ಆಧ್ಯಾತ್ಮಿಕ ಧ್ಯಾನಕೂಟವು ತುಂಬಾ ಚೆನ್ನಾಗಿತ್ತು. ನಮ್ಮ ಮನಸ್ಸಿಗೆ ಬಹಳ ಖುಷಿ ಆಯಿತು. ನಮ್ಮ ಆಧ್ಯಾತ್ಮಿಕ ಜೀವನಕ್ಕೆ ಒಂದು ಹೊಸ ತಿರುವು ಸಿಕ್ಕಿತು ಎಂದರೆ ತಪ್ಪಾಗಲಿಕ್ಕಿಲ್ಲ. ವಿಶೇಷವಾಗಿ ಆಪ್ತ-ಸಮಾಲೋಚನೆ ಹಾಗೂ ಆಂತರಿಕ ಸೌಖ್ಯ ಆರಾಧನೆ ಒಂದು ಸುಂದರ ಅನುಭವವಾಗಿತ್ತು. ನನ್ನ ಸ್ನೇಹಿತರು ಕೂಡ ಬಹಳ ಸಂತೋಷ ಪಟ್ಟರು. ಪ್ರಾರಂಭದಲ್ಲಿ ಯಾರಿಗೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಇಷ್ಟವಿರಲಿಲ್ಲ ಆದರೆ ಕೊನೆಯ ದಿನ ಯಾಕಾದರೂ ಈ ಕಾರ್ಯಕ್ರಮ ಮುಗಿಯಿತೋ ಎನ್ನುವ ಹಾಗಾಯಿತು. ಅದೊಂದು ವರ್ಣಿಸಲಾಗದ ಸುಂದರ ಅನುಭವವಾಗಿತ್ತು. ಅಲ್ಲಿ ನಡೆದ ಎಲ್ಲಾ ಉಪನ್ಯಾಸಗಳು ಬಹಳ ಉಪಯುಕ್ತವಾಗಿದ್ದವು. ಎಲ್ಲಾ ಸಂಪನ್ಮೂಲ


ವ್ಯಕ್ತಿಗಳು ಅತ್ಯುತ್ತಮ ಮಾಹಿತಿಯನ್ನು ನಮಗೆ ತಿಳಿಸಿಕೊಟ್ಟರು. ಅಭಿನಯ ಗೀತೆ, ಹಾಡುಗಳು ಹಾಗೂ ಇತರ ಕಾರ್ಯಕ್ರಮಗಳು ಈ ಧ್ಯಾನಕೂಟಕ್ಕೆ ಹೆಚ್ಚು ಮೆರಗನ್ನು ತಂದಿತು. ಈ ಧ್ಯಾನಕೂಟದಲ್ಲಿ ಭಾಗಿಯಾಗಲು ನಾನು ಬಹಳ ಅದೃಷ್ಟ ಮಾಡಿದ್ದೆ.

**29.** ಯುವಮಿತ್ರ ಆಯೋಜಿಸಿದ "ಪ್ರಜ್ವಲಿಸು" ಕಾರ್ಯಕ್ರಮವು ತುಂಬಾ ಚೆನ್ನಾಗಿತ್ತು. ನಮ್ಮ ಮನಸ್ಸಿಗೆ ಬಹಳ ಖುಷಿ ಆಯಿತು. ನಮ್ಮ ಆಧ್ಯಾತ್ಮಿಕ ಜೀವನಕ್ಕೆ ಒಂದು ಹೊಸ ತಿರುವು ಸಿಕ್ಕಿತು ಎಂದರೆ ತಪ್ಪಿಲ್ಲ. ವಿಶೇಷವಾಗಿ ಆಪ್ತಸಮಾಲೋಚನೆ ಹಾಗೂ ಆಂತರಿಕ ಸೌಖ್ಯ ಆರಾಧನೆ ಒಂದು ಸುಂದರ ಅನುಭವವಾಗಿತ್ತು. ನನ್ನ ಸ್ನೇಹಿತರು ಕೂಡ ಬಹಳ ಸಂತೋಷಪಟ್ಟರು. ಪ್ರಾರಂಭದಲ್ಲಿ ಯಾರಿಗೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಇಷ್ಟವಿರಲಿಲ್ಲ ಆದರೆ ಹೋಗುವಾಗ ಯಾಕಾದರೂ ಈ ಕಾರ್ಯಕ್ರಮ ಮುಗಿಯಿತೋ ಎನ್ನುವ ಹಾಗಾಯಿತು. ಒಂದು ಸುಂದರ ಅನುಭವ ಅದಾಗಿತ್ತು. ಅಲ್ಲಿ ನಡೆದ ಎಲ್ಲಾ ಉಪನ್ಯಾಸಗಳು ಬಹಳ ಉಪಯುಕ್ತವಾಗಿತ್ತು . ಎಲ್ಲಾ ಸಂಪನ್ಮೂಲ ವ್ಯಕ್ತಿಗಳು ಒಳ್ಳೆಯ ಮಾಹಿತಿಯನ್ನು ನಮಗೆ ತಿಳಿಸಿಕೊಟ್ಟರು. ಅಭಿನಯ ಗೀತೆ, ಹಾಡುಗಳು ಹಾಗೂ ಇತರ ಕಾರ್ಯಕ್ರಮಗಳು ಈ ಧ್ಯಾನಕೂಟಕ್ಕೆ ಹೆಚ್ಚು ಮೆರುಗನ್ನು ತಂದಿತು. ಈ ಧ್ಯಾನಕೂಟದಲಿ ಭಾಗಿಯಾಗಲು ನಾನು ಬಹಳ ಅದೃಷ್ಟ ಮಾಡಿದೆ.

## 30. ಆಶಾಭಾವ ಚಿಗುರೊಡೆಯುವಂತೆ ಮಾಡಿದ ರೈಜ್ ಅಬವ್:

ಪ್ರಜ್ವಲಿಸು/ರೈಜ್ ಅಬೌ ಕಾರ್ಯಕ್ರಮವು ನನಗೆ ತುಂಬಾ ಇಷ್ಟವಾಯಿತು. ನನ್ನ ಸಹಮಿತ್ರರೊಡನೆ ಈ ಕಾರ್ಯಕ್ರಮದ ಬಗ್ಗೆ ಚರ್ಚಿಸಿದಾಗ ಅವರೂ ಕೂಡ ಹಲವು ಅಭಿಪ್ರಾಯಗಳನ್ನು ನನ್ನೊಡನೆ ಹಂಚಿಕೊಂಡರು. ದೇವರೊಡನೆ ನಮ್ಮ ಸಂಬಂಧ ಹೇಗಿರಬೇಕೆಂದು ನಾವು ಧ್ಯಾನಕೂಟದಲ್ಲಿ ಹಾಗೂ ಗುರುಗಳ ಪ್ರಬೋಧನೆಯಲ್ಲಿ ಅರಿತುಕೊಂಡೆನು. ನನ್ನ ಜೀವನದಲ್ಲಿ ನಡೆದ ಕೆಲವು ಕಹಿ ಘಟನೆಗಳ ಬಗ್ಗೆ ಸಮಾಲೋಚನೆಯಲ್ಲಿ ನಾನು ಹೇಳಿಕೊಂಡಾಗ ನನ್ನ ಮನಸ್ಸಿನಲ್ಲಿ ಸಮಾಧಾನ ದೊರಕಿತು. ಹಲವು ತಿಂಗಳುಗಳಿಂದ ಪಾಪ ನಿವೇದನೆ ಮಾಡದೆ ಇದ್ದೆ, ಈ ಧ್ಯಾನದಲ್ಲಿ ನನಗೆ ಒಳ್ಳೆಯ ಪಾಪ ನಿವೇದನೆ ಮಾಡುವ ಅವಕಾಶ ದೊರೆಯಿತು. ಆಂತರಿಕ ಸೌಖ್ಯ ಆರಾಧನೆಯ ಸಂದರ್ಭದಲ್ಲಿ ನವ ಚೈತನ್ಯದ ಉದಯವಾಯಿತು. ಈ ಧ್ಯಾನದ ಯಶಸ್ವಿಗಾಗಿ ಹಗಲಿರುಳೆನ್ನದೆ ಪ್ರಾರ್ಥಿಸಿದ ಮಧ್ಯಸ್ಥಿಕಾ ಪ್ರಾರ್ಥನಾ ತಂಡದವರಿಗೆ ಇನ್ನೂ ಹೆಚ್ಚು ಪವಿತ್ರಾತ್ಮರ ಶಕ್ತಿ ದೊರೆಯಲೆಂದು ಪ್ರಾರ್ಥಿಸುತ್ತೇನೆ. ನಾವು ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಭಾಗವಹಿಸಲು ನಮಗೆ ನೆರವಾದ ಡೆಕ್ಸೊ ಮಿತ್ರರಿಗೆ ನನ್ನ ಮನದಾಳದ ವಂದನೆಗಳು. ಯುವಮಿತ್ರರನ್ನು ಒಟ್ಟು ಸೇರಿಸಿ ಶ್ರಮಿಸಿ, ನಿಮ್ಮ ಸಂದಿಗ್ಧ ಪರಿಸ್ಥಿತಿಯಲ್ಲಿ ನಾನಿದ್ದೇನೆ ಎಂಬ ಭರವಸೆ ನಮಗಿತ್ತು, ಯೇಸು ನಮ್ಮನ್ನು ಪ್ರೀತಿಸುತ್ತಾರೆ ಎಂಬ ಸುಸಂದೇಶವನ್ನು ನಮಗೆ ತಿಳಿಸಿ

ಆಶಾಭಾವ ಚಿಗುರೊಡೆಯುವಂತೆ ಮಾಡಿದ ಫಾದರ್ ಪಿಯುಸ್ ಡಿಸೋಜರವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ವಂ. ಡಾ. ಅಂತೋನಿ ಪೀಟರ್ ಹಾಗೂ ಫಾದರ್ ಅಭಿಷೇಕ್‌ರವರು ಈ ಧ್ಯಾನದ ಯಶಸ್ಸಿಗಾಗಿ ಶ್ರಮಿಸಿದ್ದಾರೆ ಅವರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ.



ಇಂತಹ ಯುವಸ್ನೇಹಿ, ಯುವಜನರಿಗೆ ಉಪಯುಕ್ತವಾಗುವ ಕಾರ್ಯಕ್ರಮಗಳನ್ನು ವರ್ಷಕ್ಕೆ ಒಮ್ಮೆಯಾದರೂ ಆಯೋಜಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಜೈ ಯೇಸು ಕ್ರಿಸ್ತ.

**ಜೊಯೆಲ್ ಪಾಯ್ಸ್, ಮಾವಿನಕೆರೆ**

## 31. ಹತ್ತು ಹಲವು ಬದಲಾವಣೆಗೆ ದಿಕ್ಸೂಚಿಯಾದ Rise Above:

Rise Above ಕಾರ್ಯಕ್ರಮವನ್ನು ಆಯೋಜಿಸಿದ ಯುವಮಿತ್ರ ತಂಡದವರಿಗೂ ಫಾದರ್ ಪಿಯುಸ್ ಡಿಸೋಜರವರಿಗೂ ವಂದನೆಗಳು. ಈ ನಾಲ್ಕು ದಿನಗಳ ಕಾರ್ಯಕ್ರಮವು ಬಹಳ ಅದ್ಭುತ ಹಾಗೂ ಅದ್ದೂರಿಯಾಗಿತ್ತು. ಇದೇ ಮೊಟ್ಟ ಮೊದಲ ಬಾರಿಗೆ 450ಕ್ಕೂ ಹೆಚ್ಚು ಯುವಜನರು ಮನೋ-ಆಧ್ಯಾತ್ಮಿಕ ಧ್ಯಾನಕೂಟದಲ್ಲಿ ಭಾಗವಹಿಸಿ ಶಿವಮೊಗ್ಗ ಧರ್ಮಕ್ಷೇತ್ರದಲ್ಲಿ ದಾಖಲೆಯನ್ನು ಸಾಧಿಸಿದೆ. ಈ ಧ್ಯಾನಕೂಟದಲ್ಲಿ ಭಾಗವಹಿಸಿದ ನನಗೆ ಮನಪರಿವರ್ತನೆ ಆಗಿರುತ್ತದೆ. Rise Above ಎಂಬ ಹಾಡು ಇಂದಿಗೂ ಮನದಲ್ಲಿ ಗುನುಗುತ್ತಿದೆ. ಹತ್ತು ಹಲವು ಬದಲಾವಣೆಗಳನ್ನು ಕಂಡುಕೊಂಡಿರುವೆ ಜೊತೆಗೆ ಕರುಣಾಳು ದೇವರಿಗೆ ಸ್ತೋತ್ರ ಹೇಳುವೆ. ಆಂತರೀಕ ಸೌಖ್ಯ ಆರಾಧನೆಯಲ್ಲಿ ನನಗೆ ದೇವರ ಸ್ಪರ್ಶದ ಅನುಭವ ಉಂಟಾಗಿದೆ ಎಂದು ಹೇಳಲು ಸಂತೋಷಪಡುತ್ತೇನೆ. ಇದೇ ರೀತಿ ವರ್ಷಕ್ಕೆ ಒಮ್ಮೆಯಾದರೂ ಆಧ್ಯಾತ್ಮಿಕ ನವೀಕರಣ ಧ್ಯಾನಕೂಟ ನಡೆಯಲಿ ಎಂದು ತಮ್ಮಲ್ಲಿ ವಿನಂತಿಸುತ್ತಾ ಆ ನನ್ನ ದೇವರಿಗೆ ಕೋಟಿ ಕೋಟಿ ಸ್ತೋತ್ರ ಸಲ್ಲಿಸುತ್ತೇನೆ.



**ಕೆನೀತ್ ಟಿ, ದಾವಣಗೆರೆ**

# ಧ್ವನಿವರ್ಧಕ ನಿರ್ವಹಣೆಗೆಂದು ಬಂದಾಗ ಆದ ಪ್ರಜ್ವಲಿಸಿದ ಅನುಭವ



ನಾನು ನನ್ನ ***"Rise Above"*** ಅನುಭವಗಳನ್ನು ಹಂಚಿಕೊಳ್ಳುತ್ತಿದ್ದೇನೆ. ಈ ಅವಕಾಶ ಕಲ್ಪಿಸಿಕೊಟ್ಟ ಫಾದರ್ ಪಿಯುಸ್ ಡಿಸೋಜರವರಿಗೂ ಹಾಗೂ ಎಲ್ಲಾ ಗುರುಗಳಿಗೂ, ಕಾರ್ಯಕರ್ತರಿಗೂ ವಂದಿಸುತ್ತೇನೆ. ಇಂತಹ ಒಂದು ಒಳ್ಳೆಯ ಕಾರ್ಯಕ್ರಮವನ್ನು ನಮಗೆ ನೀಡಿದ್ದಕ್ಕೆ ವಂದಿಸುತ್ತೇನೆ. ಈ ಧ್ಯಾನದಿಂದ ಅನೇಕ ಯುವಜನರ ಬಾಳು ಚೆನ್ನಾಗಾಗಿದೆ. ನಾನು ಮೊದಲ ದಿನ ಈ ಧ್ಯಾನದಲ್ಲಿ ಮಕ್ಕಳು ಎಲ್ಲರನ್ನು ಬೈಯುತ್ತಿದ್ದುದ್ದನ್ನು ನೋಡಿದ್ದೆ, ಯಾಕಪ್ಪಾ ನಾನು ಇಲ್ಲಿಗೆ ಬಂದೆ ಎಂದು ಮಾತನಾಡುವುದನ್ನು ಕೇಳಿದ್ದೆ. ಆದರೇ, ಅವರೆಲ್ಲಾ ಕೊನೆಯ ದಿನ ಹೋಗುವಾಗ ಅವರ ಮಾತುಗಳನ್ನು ಆಲಿಸಿದಾಗ ಅವರು ತುಂಬಾನೇ ಬದಲಾಗಿದ್ದಾರೆ ಅನಿಸಿತು. ಪ್ರಾರ್ಥನೆಯ ಸಮಯದಲ್ಲಿ ಅವರು ಕಣ್ಣೀರಿಟ್ಟಿದ್ದನ್ನು, ಪಾಪಗಳನ್ನು ಕ್ಷಮಿಸಿ ಎಂದು ಬೇಡಿದ್ದನ್ನು ಹತ್ತಿರದಿಂದ ವೀಕ್ಷಿಸಿದ್ದೆ. ಈ ಧ್ಯಾನಕೂಟದ ಮೂಲ ಉದ್ದೇಶ ನನಗೆ ತುಂಬಾನೇ ಇಷ್ಟವಾಯಿತು. ತರಗತಿಗಳಲ್ಲಿ ಶಿಕ್ಷಕರಿಗೆ, ಮನೆಯಲ್ಲಿ ಪೋಷಕರಿಗೆ, ಹಿರಿಯರಿಗೆ, ಗುರುಗಳಿಗೆ ಹೇಗೆ ಗೌರವಿಸುವುದನ್ನು ಕಲಿಸಿದರು. ಸಿಸ್ಟರ್‌ರವರು ನಮ್ಮ ಆರೋಗ್ಯವನ್ನು ಹೇಗೆ ಚೆನ್ನಾಗಿಡಬಹುದು ಎಂದು ತಿಳಿಸಿದರು. ಇಲ್ಲಿ ಕೇಳಿದ ಹಲವು ಅಂಶಗಳನ್ನು ನಾನು ನನ್ನ ಬಾಳಲ್ಲಿ ಈಗ ಅಳವಡಿಸಿಕೊಂಡಿದ್ದೇನೆ. ದೇವರ ದಯೆಯಿಂದ ನನ್ನ ಆರೋಗ್ಯ ತುಂಬಾ ಚೆನ್ನಾಗಾಗಿದೆ. ಈ ಧ್ಯಾನದಿಂದ ಹಾಗೂ ದೇವರ ದಯೆಯಿಂದ ನನ್ನ ಬಾಳಿಂದು ಹೊಸ ಹುರುಪನ್ನು ಪಡೆದಿದೆ. ಉತ್ತಮ ಆರೋಗ್ಯವನ್ನು ಸಹ ಪಡೆದಿದ್ದೇನೆ. ನನ್ನಂತೆ ಅನೇಕ ಮಕ್ಕಳು **Rise Above**ದಿಂದ ಹೊಸ ಬದುಕನ್ನು ಪಡೆದುಕೊಂಡಿದ್ದಾರೆ ಆ ದೇವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಾನು ತುಂಬಾ ಅನುಭವಗಳನ್ನು ಹಂಚಿಕೊಳ್ಳಬೇಕೆಂದಿದ್ದೆ ಆದರೆ ನನಗೆ ವರ್ಣಿಸಲು ಮಾತುಗಳೇ ಬರುತ್ತಿಲ್ಲ.

ಶ್ರೀ. ಆರಾಫತ್, ಹರಿಹರ
ಧ್ಯಾನಕ್ಕೆ ಧ್ವನಿವರ್ಧಕ ನಿರ್ವಹಿಸಿದರು

# ಪೋಷಕರಿಂದ ಪ್ರಜ್ವಲಿಸಿದ ಅನುಭವ

## ಪ್ರಜ್ವಲಿಸುವ ಬದಲಾವಣೆ ತಂದ ಧ್ಯಾನ:



ಧ್ಯಾನಕೂಟದ ನಂತರ ನನ್ನ ಮಗನಲ್ಲಿ ನಾನು ಕೆಲವೊಂದು ಬದಲಾವಣೆಗಳು ಕಂಡಿದ್ದು ನಿಮ್ಮೊಂದಿಗೆ ಹಂಚಲು ಹರ್ಷಿಸುತ್ತೇನೆ. ಯೇಸುವಿನ ಪ್ರೀತಿ ಹಾಗೂ ಸ್ಪರ್ಶ ಅವನಲ್ಲಿ ಕಂಡಿದ್ದು, ಅವನ ಒಡನಾಟ ಇನ್ನಷ್ಟು ಆತ್ಮೀಯವಾಗಿದೆ. ಸಮಯ ಪಾಲನೆ, ಶಿಸ್ತು, ಉತ್ತಮಗೊಂಡಿದೆ. ನಮ್ಮ ಹತ್ತಿರ ಮುಕ್ತವಾಗಿ ಮಾತನಾಡುತ್ತಾನೆ. ತನ್ನ ಜೀವನದಲ್ಲಿ ಗುರಿ ಸಾಧಿಸಬೇಕೆಂಬ ಹಠ ಬಂದಿದೆ.

ಕೇವಲ ಒಂದು ಧ್ಯಾನಕೂಟ ಹದಿಹರೆಯದ ವಯಸ್ಸಿನ ನನ್ನ ಮಗನನ್ನು ಇಷ್ಟು ಬದಲಿಸಿದೆ ಎಂದರೆ, ಇನ್ನಷ್ಟು ಇಂತಹ ಕಾರ್ಯಕ್ರಮಗಳು ನಮ್ಮ ಮಕ್ಕಳನ್ನು ಉತ್ತಮ ಮೌಲ್ಯಾಧಾರಿತ ಪ್ರಜೆಗಳನ್ನಾಗಿ ಮಾಡಲು ಪ್ರೇರಣೆಯಾದೀತು ಎಂದು ಹೇಳಿದರೆ ತಪ್ಪಾಗಲಾರದು.

ವಂ। ಪಿಯುಸ್ ಡಿಸೋಜ ಮತ್ತು ಅವರ ತಂಡದವರಿಗೆ ನನ್ನ ಅನಂತ ಅನಂತ ಧನ್ಯವಾದಗಳು. ಮೌಲ್ಯಾಧಾರಿತ ಸಮಾಜ ಕಟ್ಟಲು ಯುವಜನರ ಪಾತ್ರ ಎಷ್ಟು ಮುಖ್ಯ ಎಂದು ಅರಿತಿರುವ ಇವರಿಗೆ ನಾವೆಲ್ಲರೂ ಹಸ್ತ ಚಾಚಿ ನಮ್ಮ ಸಹಕಾರ ನೀಡಿ ಇನ್ನಷ್ಟು ಬಲಗೊಳಿಸೋಣ. ಪ್ರಭು ಯೇಸುವಿನ ಕೃಪೆ ಹಾಗೂ ಆಶೀರ್ವಾದ ಸದಾಕಾಲ ಇವರೆಲ್ಲರ ಮೇಲಿರಲಿ ಹಾಗೂ ಹೆಚ್ಚೆಚ್ಚು ಇಂತಹ ಧ್ಯಾನಕೂಟಗಳನ್ನು ನಡೆಸಲಿ ಎಂದು ಮನದಾಳದ ಹಾರೈಕೆಗಳು. **– ಶ್ರೀಮತಿ ಸುನೀತ ಜಾನ್, ಶರಾವತಿ ನಗರ, ಶಿವಮೊಗ್ಗ**

## ಸಮಸ್ಯೆ ಎದುರಿಸುವ ಧೈರ್ಯ ಬಂದಿದೆ:



ಪ್ರಜ್ವಲಿಸು ಈ ಧ್ಯಾನಕೂಟದಿಂದ ನನ್ನ ಮಗಳಲ್ಲಿ ಅನೇಕ ಬದಲಾವಣೆಗಳನ್ನು ಗಮನಿಸಿದ್ದೇನೆ. ಯಾವಾಗಲೂ ಅಲ್ಲಿ ಹೇಳಿಕೊಟ್ಟಂತಹ Action songsಗಳನ್ನು ಹೇಳುತ್ತಾ ಸಂತೋಷವಾಗಿದ್ದು, ಅಕ್ಕ ಪಕ್ಕದ ಮನೆಯ ಮಕ್ಕಳಿಗೂ ಹೇಳಿಕೊಟ್ಟಿದ್ದಾಳೆ. ಈ ಧ್ಯಾನದಿಂದ ಒಳ್ಳೆಯ ಮಾರ್ಗದರ್ಶನ ಅವಳಿಗೆ ಸಿಕ್ಕಿದ್ದು, ಏನಾದರೂ ಸಮಸ್ಯೆ ಬಂದಲ್ಲಿ ಅದನ್ನು ಎದುರಿಸುವ ಧೈರ್ಯ ಸಹ ಸಿಕ್ಕಿದೆ. ಎಲ್ಲಕ್ಕೂ ಮಿಗಿಲಾಗಿ ದೇವರ ಅನುಭವ ಸಿಕ್ಕಿದೆ. ನಮ್ಮ ಯುವಜನತೆಯನ್ನು ಸನ್ನಡತೆಯಲ್ಲಿ ಮುನ್ನಡೆಸಲು, ಪ್ರಜ್ವಲಿಸುವಂತೆ ಮಾಡಲು ಇಂಥ ಧ್ಯಾನಕೂಟಗಳು ಇನ್ನೂ ಹೆಚ್ಚಾಗಿ ನಡೆಯಲಿ ಎಂದು ಆಶಿಸುತ್ತೇನೆ.

**ಶ್ರೀಮತಿ ಶಾಲೆಟ್ ಬರೆಟ್ಟೋ, ಸೇಕ್ರೆಡ್ ಹಾರ್ಟ್ ಪ್ರದಾನಾಲಯ**

## Rise Above is a Life Changing event:



The Inner healing session by Fr Pius D'Souza transformed the children to experience the Holy Spirit. Priest's band was awesome and children came to know the talent of Priests of Shimoga Diocese. They were not aware that priest can have such talents. Most of the children were thinking those priests are good at offering Mass and giving sermons. But when they witnessed the "Musical evening with Jesus" by Priests they were impressed and had more respect towards priests who gave their precious time for them.

During counseling sessions youth were much relaxed. They got chance to share their pains and problems. Now a days most of the parents are busy in their own world making money and other business. Children are not getting the deserved love from their parents, which leads them to find love in other person, thus most of them fall in their trap and ruin their life. So this type of counseling helps them to understand their mistakes and renew their life.

Such retreats should be held every year during the vacations, many more young people will benefit.

My son Austin Fiallow has attended many retreats but he never had any interest in sitting in one place. This time I was surprised to know he was present from the day one and did not miss a single session. As a member of DEXCO he did his duty correctly without any complaints. I could see a drastic change in him. These changes in him will reflect to his friends circle. If he makes up his mind he can do wonders in changing their life.

Keep going and all the best dear Fr. Pius.

**- Mrs. Anie Fiallow, Sagar**

## ನನ್ನ ಜೀವನದಲ್ಲಿ ಕೇಳಿದ ಮೊಟ್ಟ ಮೊದಲ ಧ್ಯಾನಕೂಟ



ಪ್ರಜ್ವಲಿಸು ಧ್ಯಾನಕೂಟವು ನನ್ನ ಜೀವನದಲ್ಲಿ ಕೇಳಿದಂತಹ ಮೊಟ್ಟಮೊದಲನೆಯ ಯುವಜನರ ಧ್ಯಾನಕೂಟವಾಗಿದೆ. ಹಲವಾರು ಯುವಜನರ ಅನುಭವಗಳು ಕೇಳುವರ ಮನಮುಟ್ಟಿದೆ ಎಂದರೆ ತಪ್ಪಾಗಲಾರದು. ನನ್ನ ಮಗ ಈ ಧ್ಯಾನಕೂಟದಲ್ಲಿ ಡೆಕ್ಸ್‌ಕೊ ಸದಸ್ಯನಾಗಿ ಭಾಗವಹಿಸಿ ಹಿಂತಿರುಗಿ ಬಂದಾಗ ಅವನು ಹಂಚಿಕೊಂಡಂತಹ ಅನುಭವಗಳು ನಿಜವಾಗಿಯೂ ನನ್ನ ಮನಸ್ಸಿಗೆ ಸಂತೋಷವನ್ನು ತಂದಿದೆ. ಈ ಧ್ಯಾನದಲ್ಲಿ ನಡೆಸಿದಂತಹ ಆಪ್ತಸಮಾಲೋಚನೆ, ಜೀಸಸ್ ಕೆಫೆ, ಯೇಸು ನಮನ ಕಾರ್ಯಕ್ರಮ ಮತ್ತು ಯಾಜಕ ಬಳಗದ ಸಂಗೀತ ಸಂಜೆ ಕಾರ್ಯಕ್ರಮಗಳ ಬಗ್ಗೆ ಬಹಳಷ್ಟು ಸಂತೋಷವನ್ನು ವ್ಯಕ್ತಪಡಿಸಿದನು. ಪಾಪ ನಿವೇದನೆ ಮತ್ತು ಆಂತರಿಕ ಸೌಖ್ಯದ ಆರಾಧನೆಯಲ್ಲಿ ತನಗೆ ಮತ್ತು ತನ್ನ ಸ್ನೇಹಿತರಿಗೆ ಆದಂತಹ ಅನುಭವಗಳನ್ನು ಅವರಲ್ಲಿ ಕಂಡಂತಹ ಬದಲಾವಣೆಗಳನ್ನು ತಿಳಿದು ಪೋಷಕರಾದ ನಮಗೆ ಆನಂದವಾಗಿದೆ.

ಇದೇ ರೀತಿ ಯುವಮಿತ್ರ ಅಯೋಗವು ಮುಂಬರುವ ದಿನಗಳಲ್ಲಿ ಯುವನಜರನ್ನು ಪ್ರೇರೇಪಿಸುವಂತಹ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿ ಎಂದು ಆಶಿಸುತ್ತೇನೆ. ಈ ಕಾರ್ಯಕ್ರಮವನ್ನು ಆಯೋಜಿಸಿದ ಯುವಜನರ ನಿರ್ದೇಶಕರಾದ ಫಾದರ್. ಪಿಯುಸ್ ಡಿ'ಸೋಜರವರಿಗೆ ನನ್ನ ಹಾಗೂ ನಮ್ಮ ಕುಟುಂಬದವರ ಪರವಾಗಿ ವಂದನೆ ಹಾಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**– ಶ್ರೀಮತಿ. ಅನಿತ ಬಾಬು, ಪ್ರಧಾನಾಲಯ, ಶಿವಮೊಗ್ಗ**

## ಪ್ರಜ್ವಲಿಸು ಒಂದು ಸ್ಮರಣೀಯ ಧ್ಯಾನ:



"Rise Above" ಎನ್ನುವ ಯುವಜನ ಧ್ಯಾನಕೂಟವು ಅತ್ಯಂತ ಸ್ಮರಣೀಯವಾದದ್ದು. ಹಿಂದೆಂದೂ ಆಗದ, ಸಿಗದ ಅನುಭವ ನಮ್ಮ ಯುವಜನರಿಗೆ ಸಿಕ್ಕಿದೆ. ವಿಧ್ಯಾಭ್ಯಾಸದಲ್ಲಿ ಆಸಕ್ತಿಯಿಲ್ಲದವರು, ಜೀವನದಲ್ಲಿ ಜಿಗುಪ್ಸೆಗೊಂಡವರು, ಆತ್ಮಹತ್ಯೆಗೆ ಪ್ರಯತ್ನ ಪಟ್ಟವರು, ತಂದೆ ತಾಯಿಗೆ ಅವಿಧೇಯರಾಗಿದ್ದವರು. ಹೀಗೆ ನಾನಾ ಕಾರಣಗಳಿಂದ ದೂರವಿದ್ದ ನಮ್ಮ ಯುವಜನರು ಈ ಧ್ಯಾನಕೂಟದಿಂದ ಎಚ್ಚೆತ್ತುಕೊಂಡಿದ್ದಾರೆ.

'ಪಾಪಕ್ಕೆ ವಿಮುಖರಾಗಿ ದೇವರಿಗೆ ಅಭಿಮುಖರಾಗಿರಿ' ಎನ್ನುವಂತೆ ನಮ್ಮ ಯುವಜನರು ಉತ್ತಮವಾದ ದಾರಿಯಲ್ಲಿ ನಡೆಯುತ್ತಿದ್ದಾರೆ. ಆದ್ದರಿಂದ ಈ ಧ್ಯಾನಕೂಟವನ್ನು ಆಯೋಜಿಸಿದ ವಂ. ಪಿಯುಸ್ ಡಿಸೋಜರವರಿಗೆ ನಾನು ಬಹಳ ಚಿರಋಣಿಯಾಗಿದ್ದೇನೆ. ಇನ್ನು ಅನೇಕ ಯುವಜನರಿಗೆ ಇಂತಹ ಕಾರ್ಯಗಾರವು ಲಭ್ಯವಾಗಲಿ ಎನ್ನುವುದು ನನ್ನ ಹಾರೈಕೆ.

**ಶ್ರೀಮತಿ. ಹೆಲ್ಮಿನಾ ಮಚಾದೊ, ಸಾಗರ**

# "RISE ABOVE"
## *Psycho-Spiritual retreat for youth*



**"YUVAMITRA" – Youth commission**, Diocese of Shimoga had arranged a retreat specially for youth at the Shrine of our Lady of Good Health, Harihar. The retreat, "rise above" was held for the first time in the history of Shimoga. Around 452 youth appeared from the diocese of Shimoga. Our dutiful journey began on the 5th of October 2019 at 1.30pm in an ambience of devotion, by a well organized 8 member group who united the hearts, minds and souls of the entire gathering by extolling praises and worship to the Almighty. Most Reverend Francis Serrao, Bishop of Shimoga offered the inaugural Holy Eucharist at 6pm in the evening, for the intentions of the youth. He also motivated them with his inspiring and encouraging words.

The second day was the most thought provoking. The sessions were conducted by Fr.Pius D'Souza, Youth Director and Sr.Severin Menezes. Among the many gathered, most of them had not come to attend the retreat rather came as a companion or for merriment. God's word says "My thoughts are not your thoughts and my ways are not your ways", he is always in search of the 'lost sheep'. At the end of the day, every youth was spell-bound and the sessions stirred their souls which made them introspect their lives and actions. The evening was made vibrant by Fr. Roman, Fr.Lawrence and Fr.Venil who presented the "Yesu Namana" Programme, wherein there was active involvement of the youth.

The 3rd day was very meaningful. The youth were pensive, in a complete meditative state, reflecting on their misled lives. It gave an

opportunity to all to surrender to the will of God and make a whole hearted confession. The sacrament of reconciliation was offered by 15 priests. Rev. Fr. Franklin guided the youngsters. The holy Eucharist was offered by Fr. Stany D'souza. He preached a very heart touching sermon. The inner healing adoration sparked an undying flame light in everyone's soul. With tears of joy they surrendered themselves wholly to the Almighty.The Holy evening with Jesus was made very special by the diocesan priests Rev. Fr. Stany, Fr.Francis, Fr.Arogya, Fr.Santhosh and Fr. Stephen Albuquerque with melodious singing and praises of God. This was the very first time the diocesan priests came together to share their joy with the youngsters. The Blind couple (Special couple) programme set an aura of heavenly bliss with their angelic voices. At the end, everyone could feel the presence and love of God.

The $4^{th}$ day was the day of transformation and healing. Shackles were broken and no force could stop the youth anymore. They gave up their vices and shared beautiful testimonies. "Rise Above" Retreat was concluded by offering thanks to Almighty. The Holy Eucharist was offered by Rev. Msgr. Felix Joseph Noronha.

At this juncture, the generosity and goodwill of Rev. Fr. Anthony the parish priest of the shrine and the assistant priest Fr. Abhishek is truly appreciated. The Yuvamitra-youth commission of Shimoga diocese remains ever grateful for their help and support throughout.

The DEXCO members are also specially acknowledged for toiling night and day to make this retreat a successful one.

The sisters who worked as counselors are immensely remembered for their selfless service. A hearty congratulation to Rev. Fr. Pius D'Souza for organizing such an amazing and God centered retreat. Due to the collaborative efforts of all people involved, the youth were able to reunite with God. God bless everyone!

**Sr Helen Moras**
**DYLA- Diocese of Shimoga**



HONDA
The Power of Dreams
ಹಳೆಯ ದ್ವಿಚಕ್ರ ವಾಹನದಾರರಿಗೊಂದು ಸಂತಸದ ಸುದ್ದಿ...
ನಿಮ್ಮ ಹಳೆಯ ವಾಹನಕ್ಕೆ ಮುಕ್ತಿ ನೀಡಿ...
ಇದೀಗ ನಿಮ್ಮ ನೆಚ್ಚಿನ ಹೋಂಡಾ ದ್ವಿಚಕ್ರ ವಾಹನ ಖರೀದಿಸಲು ಸುವರ್ಣಾವಕಾಶ
ನಾಗರಹಳ್ಳಿ ಹೋಂಡಾ ಸಾದರಪಡಿಸುತ್ತಿದೆ
ಬೃಹತ್ ಎಕ್ಸ್‌ಛೇಂಜ್ ಮತ್ತು ಸಾಲಮೇಳ
ಅತಿ ಕಡಿಮೆ ಡೌನ್ ಪೇಮೆಂಟ್
0 %
ಎಕ್ಸ್‌ಚೇಂಜ್ ಲಾಭಗಳು
₹ 2,000
Cash back
ಆಕರ್ಷಕ ಬಹುಮಾನ ಮತ್ತು ಡಿಸ್ಕೌಂಟ್ ನಿಮ್ಮದಾಗಿಸಿಕೊಳ್ಳಿ
ಇಂದೇ ಭೇಟಿ ನೀಡಿ
ನಾಗರಹಳ್ಳಿ ಹೋಂಡಾ
ಮಾರಿಗುಡ್ಡ ರಸ್ತೆ, ಹೊಸನಗರ
HONDA
ಶ್ರೀ ಪೀಟರ್
Contact No 9632530860




Ajay Fernandes
9632569967
Natal's
Events
* DJ Event
* Live Sounds
* Wedding Stage Decoration
* All types lightings
* Generator
* Balloon Decoration
Email : ajayfernandis@gmail.com
Neharu Nagar 2nd Cross, SAGAR-577401

# NITHIN ENGINEERING WORKS

Plot No 233, 3rd Main, Auto Complex, Sagar Road Shimoga



**Fabrication: Truss Work (Sheet Roofing, Tile Roofing), Grills, Gate, Railings, Rolling Shutters, Stainless Steel Works**

**Cell: 9449782948, 8050237213**

*Experience - Quality - Fast Service*


Gagan Raj

AVE MARIA

# ANGEL Creations

## Event Organisers

**CORPORATE | WEDDING | PRIVATE | MEDIA**



Wedding | Birthday Parties | Planning & Executing | Events Setup & Productions
Photography & Videography | Catering Services | Travels | Colleges / School Events
Logo & Poster Designing | Celebrity Management | Recording Music | Sound designing Etc

**+91 9945642397,+91 8095275622, +91 9901448724**


# ಯುವಜನರು ಪ್ರಜ್ವಲಿಸಿದ ಆ ಕ್ಷಣಗಳು...










































# ಯುವಮಿತ್ರನ ಭಾವಾರ್ಪಣೆ





ಮುದ್ರಣ, ವಿನ್ಯಾಸ, ಗುಣಮಟ್ಟ, ಮಿತದರ,
ತ್ವರಿತ ಸೇವೆಯಿಂದ ಗ್ರಾಹಕರ ಮನಗೆದ್ದು
ಹೆಸರುವಾಸಿಯಾದ

# ಸಂದೇಶ್ ಪ್ರಿಂಟರ್ಸ್
## ಕಿನ್ನಿಗೋಳಿ

ಇದೀಗ ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ,
ಗ್ರಾಹಕರಿಗೆ ಇನ್ನೂ ಅತ್ಯುತ್ತಮ ಗುಣಮಟ್ಟದ ಸೇವೆಯನ್ನು
ಒದಗಿಸಲು ಬದ್ಧವಾಗಿದೆ.




FLEX / CLOTH BANNERS
ಆಮಂತ್ರಣ ಪತ್ರಿಕೆಗಳು/ಸ್ಮರಣ ಸಂಚಿಕೆಗಳು/ಪ್ರಮಾಣ ಪತ್ರಗಳು/ ಸನ್ಮಾನ ಪತ್ರಗಳು
POSTERS
ಸ್ಮರಣಿಕೆಗಳು / ಟ್ರೋಫಿಗಳು / ಮಗ್-ಟಿ ಶರ್ಟ್‌ಪ್ರಿಂಟ್ / ಫೋಟೋ ಫ್ರೇಮ್‌ಗಳು / ಸ್ಟೇಶನರಿ ಐಟಮ್ಸ್ ಇತ್ಯಾದಿ
VINYL / ONEWAY

# SANDESH PRINTERS
**DIGITAL - OFFSET - SCREEN - BANNER PRINTING**

Bus Stand, Kinnigoli - 574 150
Ph: 0824 229 6011  Mob: 9880379574
Email : newsandeshprinters@gmail.com